# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಜನವರಿ, ಫೆಬ್ರವರಿ ಮತ್ತು ಮಾರ್ಚ್ –2024**

**ಸಂಪುಟ–VI ಸಂಖ್ಯೆ – 1**


**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ,**

**ಕೊಠಡಿ ಸಂಖ್ಯೆ: 28, ನೆಲಮಹಡಿ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ
**http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – VI ರ ಮೊದಲನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2024ನೇ ಸಾಲಿನ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ. ಖಏಖಖ

ಮಾನ್ಯ ಸದಸ್ಯರುಗಳು ತಮ್ಮ ಲೇಖನಗಳನ್ನು ನೀಡಿದಲ್ಲಿ, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 8–11–2024

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

| | |
|---|---|
| 1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ | : ಕಾರ್ಯದರ್ಶಿ |
| 2. ಶ್ರೀ ಬಿ.ಎಸ್. ಮಹಾಲಿಂಗೇಶ್ | : ನಿರ್ದೇಶಕರು |
| 3. ಶ್ರೀ ಬಿ.ಎಂ.ಶಂಭು | : ಜಂಟಿ ನಿರ್ದೇಶಕರು |
| 4. ಶ್ರೀಮತಿ ವಿ.ಭಾಗ್ಯ | : ಉಪ ನಿರ್ದೇಶಕರು |
| 5. ಶ್ರೀ ಬಿ.ಎ. ಸತೀಶ್ | : ಸಹಾಯಕ ನಿರ್ದೇಶಕರು |

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| 1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ | : ಕಾರ್ಯದರ್ಶಿ |
| 2. ಶ್ರೀಮತಿ ಎಸ್. ನಿರ್ಮಲ | : ಕಾರ್ಯದರ್ಶಿ–II |

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)


**ಜನವರಿ, ಫೆಬ್ರವರಿ ಮತ್ತು ಮಾರ್ಚ್ – 2024**

**ಸಂಪುಟ–VI ಸಂಖ್ಯೆ– 1**


## ಪರಿವಿಡಿ

## ಭಾಗ–1

## ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು | 3–35 |
| 2 | ಹೊರಟ್ಟಿಗೆ ಲಿಮ್ಕಾ ದಾಖಲೆ ಗರಿ | 35–36 |
| 3 | SCHOOL OF GOVERNANCE NEEDED TO TRAIN YOUNG MLAs ACROSS IDEOLOGIES DEBATE ISSUES | 36–39 |
| 4 | ಕರ್ನಾಟಕ ಸರ್ಕಾರದ ಲಾಂಛನಕ್ಕೆ ವಿಶೇಷ ಮನ್ನಣೆ | 40 |
| 5 | ಸ್ಪೀಕರ್‌ರಿಂದ ಹರಕೆ ಕೋಲಾ ಸಮರ್ಪಣೆ | 40–41 |
| 6 | ಜನರಿಗೆ ನ್ಯಾಯ ಮುಖ್ಯ | 41 |
| 7 | ಜನಪ್ರತಿನಿಧಿ, ಮಾಧ್ಯಮ ಒಗ್ಗೂಡಿ ಕೆಲಸ ಮಾಡಬೇಕು: ಸ್ಪೀಕರ್ | 41–42 |
| 8 | ಶಾಸಕರ ನೀತಿ ನಿರೂಪಣೆಯಲ್ಲಿ ಸಕ್ರಿಯರಾಗಿ: ಸ್ಪೀಕರ್ | 42–43 |
| 9 | ಕೌನ್ಸಿಲ್‌ನಲ್ಲೂ ಸುದ್ದಿ ಚಿತ್ರೀಕರಣವಿಲ್ಲ | 43–44 |
| 10 | ಬಾಲಬ್ರೂಯಿ ಇನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್' | 44 |
| 11 | ಜಾಮರ್ ತೆರವು: 5ಜಿ ಇಂಟರ್‌ನೆಟ್ ಸೌಲಭ್ಯ | 44–45 |
| 12 | ಉಭಯ ಸದನಗಳಲ್ಲಿ ಇದೇ ಮೊದಲ ಬಾರಿಗೆ ಸಂವಿಧಾನದ ಪೀಠಿಕೆ ಬೋಧನೆ | 45 |
| 13 | ಗ್ಯಾರಂಟಿಗಳ ಜಾರಿ ಜಾಗತಿಕ ದಾಖಲೆ | 45–46 |
| 14 | ಅಭಿನಂದನಾ ನಿರ್ಣಯ ಅಂಗೀಕಾರ | 46–47 |
| 15 | ನಾಮಫಲಕಗಳಲ್ಲಿ ಶೇ.60.ರಷ್ಟು ಕನ್ನಡ: ಮಸೂದೆ ಮಂಡನೆ | 47 |
| 16 | ಸಾಧಕರನ್ನು ಗ್ಯಾಲರಿಗೆ ಕರೆಸಿ ಅಭಿನಂದನೆ | 48 |
| 17 | ಶಿಕ್ಷಕರ ಕ್ಷೇತ್ರ ಪುಟ್ಟಣ್ಣ ಗೆಲುವು | 48–49 |
| 18 | ಕನ್ನಡ ಭಾಷೆ ತಿದ್ದುಪಡಿ ವಿಧೇಯಕ ಅಂಗೀಕಾರ | 49 |
| 19 | ತೆರಿಗೆ ಬಾಕಿ: ಶೇ 50ರಷ್ಟು ದಂಡ ಇಳಿಕೆ | 49–50 |
| 20 | ಕೇರಳ ಮಾದರಿಯಲ್ಲಿ ಎನ್‌ಆರ್‌ಐ ಸಚಿವಾಲಯ | 50–51 |
| 21 | ಆಸ್ತಿ ನೊಂದಣಿಗೆ ಇ–ಖಾತೆ ಕಡ್ಡಾಯ | 51 |
| 22 | ವೃತ್ತಿಪರ ಸಿವಿಲ್ ಇಂಜಿನಿಯರ್‌ಗಳ ನೊಂದಣಿ ಇನ್ನು ಕಡ್ಡಾಯ | 52 |
| 23 | ಅಧಿವೇಶನಕ್ಕೆ ಬರಲು ಬ್ಯಾಡ್ಜ್ ಕಡ್ಡಾಯ | 52 |

| | | |
|---|---|---|
| 24 | ಕನ್ನಡ ನಾಮಫಲಕ ಕಾನೂನು ಜಾರಿ | 53 |
| 25 | ಮಕ್ಕಳಿಗಾಗಿ ನೆಹರು ಸ್ಟ್ರೀಮ್ ಲ್ಯಾಬ್ | 53–54 |
| 26 | ಚಾನಲ್‌ಗಳು ರಾಜ್ಯದ ಟಿಆರ್‌ಪಿ ಹೆಚ್ಚಿಸಲಿ: ಖಾದರ್ | 54 |
| 27 | ರಾಜಕೀಯ ತರಬೇತಿಗೆ ಕೋರ್ಸ್ ತೆರೆಯಲು ಚಿಂತನೆ: ಖಾದರ್ | 54–55 |
| 28 | JD(S) leader Marithibbe Gowda resigns from Council membership | 55 |
| 29 | ಪರಿಷತ್ ಸ್ಥಾನಕ್ಕೆ ತೇಜಸ್ವಿನಿ ಗೌಡ ರಾಜೀನಾಮೆ | 55–56 |

| ಭಾಗ–2<br>ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು | | |
|---|---|---|
| **1** | ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 59–60 |
| **2** | ಕರ್ನಾಟಕ ವಿಧಾನಸಭೆಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 60–62 |
| **3** | ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಲಘು ಪ್ರಕಟಣೆ | 63 |
| **4** | ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಗೆ ಸದಸ್ಯರ ನಾಮನಿರ್ದೇಶನದ ಲಘುಪ್ರಕಟಣೆ | 64 |
| **5** | ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಸದಸ್ಯರ ನಾಮನಿರ್ದೇಶನದ ಲಘುಪ್ರಕಟಣೆ | 65 |
| **6** | ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸದಿರುವಂತೆ ಸನ್ಮಾನ್ಯ ಸಭಾಧ್ಯಕ್ಷರು ನಿರ್ದೇಶಿಸಿರುವ ಬಗ್ಗೆ ಲಘುಪ್ರಕಟಣೆ | 66 |

| ಭಾಗ–3<br>ಸಂಸತ್ ಸುದ್ದಿಗಳು | | |
|---|---|---|
| 1 | ಸರ್ಕಾರಿ ನೇಮಕಾತಿ ಪರೀಕ್ಷೆ ಅಕ್ರಮ ತಡೆಗೆ ಮಸೂದೆ | 69 |
| 2 | ಸೋನಿಯಾ ಸೇರಿ 41 ಮಂದಿ ಅವಿರೋಧ ಆಯ್ಕೆ | 69–70 |
| 3 | ಜುಲೈ 1ರಿಂದ ಹೊಸ ಕ್ರಿಮಿನಲ್ ಕಾಯ್ದೆ ಜಾರಿ | 70 |
| 4 | President Murmu nominates Sudha Murty to Rajya Sabha | 70–71 |
| 5 | ಪೌರತ್ವ ತಿದ್ದುಪಡಿ ಕಾಯ್ದೆ ಕಡೆಗೂ ಜಾರಿ | 71 |

| | ಭಾಗ–4<br>ಕೇಂದ್ರ ಸರ್ಕಾರದ ಸುದ್ದಿಗಳು | |
|---|---|---|
| 1 | ಇಸ್ರೋ ಮತ್ತೊಂದು ವಿಕ್ರಮ: ಕಕ್ಷೆ ಸೇರಿದ ಆದಿತ್ಯ ಸೌರ ನೌಕೆ | 75 |
| 2 | ಅಟಲ್ ಸೇತು ಲೋಕಾರ್ಪಣೆ | 75–76 |
| 3 | PM releases stamps, book on Lord Ram | 76 |
| 4 | ಸತತ 6ನೇ ಬಾರಿ ಬಜೆಟ್ ಮೊರಾರ್ಜಿ ದಾಖಲೆ ಸಮಕ್ಕೆ ನಿರ್ಮಲಾ ಸಜ್ಜು | 76–77 |
| 5 | ಸುಪ್ರೀಂ ಸಂಕೀರ್ಣಕ್ಕೆ ರೂ.800 ಕೋಟಿ | 77 |

| | | |
|---|---|---|
| 6 | PRESIDENT MURMU VISITS INDIRA POINT | 77 |
| 7 | ಜಗತ್ತಿನಲ್ಲೇ ಅತಿದೊಡ್ಡ ರೈಲ್ವೆ ಸುಧಾರಣೆ ಮೋದಿ ಚಾಲನೆ | 78 |
| 8 | India soars with multi warhead Agni-5 | 78–79 |
| 9 | K'taka gets two new Vande Bharat trains, one extension | 79–80 |
| 10 | ರಾಮಮಂದಿರ: ಶತಮಾನಗಳ ಕನಸು ನನಸು | 80 |

| | **ಭಾಗ – 5**<br>**ರಾಜ್ಯ ಸರ್ಕಾರದ ಸುದ್ದಿಗಳು** | |
|---|---|---|
| 1 | Cabinet nod for gratuity to unorganised sector workers | 83 |
| 2 | ಕನ್ನಡ ಫಲಕ: ಸರ್ಕಾರದ ಕಂಕಣ | 83–84 |
| 3 | ಕೆಪಿಎಸ್‌ಸಿ ಆಕಾಂಕ್ಷಿಗಳಿಗೆ ಸಿಹಿ | 84 |
| 4 | ರಾಜ್ಯ ಪೊಲೀಸರಿಗೆ ಸಿಎಂ ಬಂಪರ್ ಗಿಫ್ಟ್ | 84–85 |
| 5 | ಕಿತ್ತೂರು ತಾಲ್ಲೂಕು ಇನ್ನು ಮುಂದೆ ಚನ್ನಮ್ಮನ ಕಿತ್ತೂರು | 85–86 |
| 6 | ಸಿಬಿಐ ಮಾದರಿಯಲ್ಲಿ ಸಿಐಡಿಗೆ ಎಫ್‌ಐಆರ್ ದಾಖಲು ಅಧಿಕಾರ | 86 |
| 7 | ಯುವನಿಧಿಗೆ 4ಲಕ್ಷ ನೋಂದಣಿ ಗುರಿ | 86–87 |
| 8 | ಕ್ರೀಡಾಕೋಟಾ ಮೀಸಲಾತಿ ಹೆಚ್ಚಳ | 87 |
| 9 | ಏರಿದ ಮುದ್ರಾಂಕ ಹೊರೆ | 87–88 |
| 10 | ಅರಣ್ಯ ವಿಸ್ತರಣೆ ರಾಜ್ಯಕ್ಕೆ 2ನೇ ಸ್ಥಾನ | 88 |
| 11 | ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ | 88–89 |
| 12 | ರಾಜ್ಯಾದ್ಯಂತ ಬಿ ಖಾತಾ | 89 |
| 13 | ಸಕಾಲ ಸಂಪೂರ್ಣ ಡಿಜಿಟಲೀಕರಣ | 90 |
| 14 | Govt clears Wistron, Air India projects; okays 17k-cr investment | 90–91 |
| 15 | Modi lays foundation stone for airport improvement works in Belagavi, Hubballi | 91–92 |
| 16 | ಅನ್ನಭಾಗ್ಯ ವ್ಯವಸ್ಥಿತ ಜಾರಿಗೆ ಆಹಾರ ಸೌಧ ನಿರ್ಮಾಣ | 92–93 |
| 17 | ರಾಜಧಾನಿ 14 ಕೆರೆಗಳಿಗೆ ಕೆ.ಸಿ.ವ್ಯಾಲಿ ನೀರು | 93 |
| 18 | ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ನಿಯಮ ರದ್ದು | 93–94 |
| 19 | ಆರು ಮಸೂದೆಗಳಿಗೆ ಅಂಕಿತ | 94 |
| 20 | ಅಕ್ರಮ ಡಾಕ್ಟರೇಟ್: ತನಿಖೆಗೆ ಸಮಿತಿ ರಚಿಸಿದ ರಾಜ್ಯ ಸರ್ಕಾರ | 94–95 |

| | **ಭಾಗ – 6**<br>**ನ್ಯಾಯಾಲಯ ಸುದ್ದಿಗಳು** | |
|---|---|---|
| 1 | ಹೈಕೋರ್ಟ್ ಸಿಜೆ ಪ್ರಮಾಣ | 99 |
| 2 | ಜುಲೈ 1 ರಿಂದ ಹೊಸ ಕ್ರಿಮಿನಲ್ ಕಾನೂನು | 99–100 |
| 3 | ಗುಜರಾತಿ ಮಾತೃಭಾಷೆ, ಕನ್ನಡ ಕರ್ಮಭಾಷೆ: ಸಿಜೆ | 100 |
| 4 | Sena row:SC asks if Maharashtra Speaker contradicted verdict | 100–101 |
| 5 | ಇಂದೇ ಮಾಹಿತಿ ಹಂಚಿಕೊಳ್ಳಲು ಸುಪ್ರೀಂ ತಾಕೀತು | 101–102 |
| 6 | ಹಿಮಾಚಲ ಪ್ರದೇಶದ ಸ್ಪೀಕರ್ ಕ್ರಮಕ್ಕೆ ಮನ್ನಣೆ, ಅನರ್ಹತೆ ಆದೇಶ ತಡೆಗೆ | 102–103 |

| | | |
|---|---|---|
| | ಸುಪ್ರೀಂ ನಕಾರ | |
| 7 | Nameboard law: No sealing of premises, HC tells State government | 103–104 |
| 8 | ಲೋಕಾಯುಕ್ತ ನೇಮಕಕ್ಕೆ ಮಾರ್ಗಸೂಚಿ | 104 |
| 9 | ಸಿಎಜಿ ಸುತ್ತೋಲೆ ರದ್ದುಪಡಿಸಿದ ಹೈಕೋರ್ಟ್ | 104–105 |
| 10 | ನ್ಯಾಯಾಂಗದಲ್ಲಿ ಕರ್ನಾಟಕ ದೇಶಕ್ಕೆ ಮಾದರಿ | 105–106 |
| 11 | State govt. alone can't decide on changing exam pattern: High Court | 106–107 |
| 12 | ಕೆಆರ್‌ಎಸ್ ಡ್ಯಾಂಗೆ ಧಕ್ಕೆ ಆಗಬಾರದು | 107 |
| 13 | ಲೋಕಾಯುಕ್ತಕ್ಕೆ ಶಿಫಾರಸ್ಸು ಅಧಿಕಾರ ಮಾತ್ರ | 108 |

\-

| | | |
|---|---|---|
| | **ಭಾಗ – 8**<br>**ಶ್ರದ್ಧಾಂಜಲಿ** | |
| 1 | ರಾಜವೆಂಕಟಪ್ಪ ನಾಯಕ, ವಿಧಾನಸಭಾ ಸದಸ್ಯರು | 111 |
| 2 | ವಾಸು, ಮಾಜಿ ವಿಧಾನಸಭಾ ಸದಸ್ಯರು | 112 |
| 3 | ಟಿ.ಎಚ್.ಶಿವಶಂಕರಪ್ಪ, ಮಾಜಿ ವಿಧಾನಸಭಾ ಸದಸ್ಯರು | 113 |
| 4 | ನಾಗಮ್ಮ ಕೇಶವಮೂರ್ತಿ, ಮಾಜಿ ಸಚಿವರು | 114 |
| 5 | ಸಿ.ಪಿ.ಮೂಡಲಗಿರಿಯಪ್ಪ, ಮಾಜಿ ಸಂಸದರು | 115 |

| | | |
|---|---|---|
| | **ಭಾಗ – 9**<br>**ಪ್ರಮುಖ ಲೇಖನಗಳು** | |
| 1 | Entire country is excited over Ram Mandir, Says PM | 119 |
| 2 | ಮೈಸೂರಿನ 'ಬಲರಾಮ'ನಿಗೆ ಪಟ್ಟ | 120–121 |
| 3 | ಅಣ್ಣನೇ ಕನ್ನಡದ ಸಾಂಸ್ಕೃತಿಕ ನಾಯಕ | 121–122 |
| 4 | ವಜ್ರ ಮಹೋತ್ಸವ ಸಂಭ್ರಮದಲ್ಲಿ ಚುನಾವಣಾ ಆಯೋಗ | 122–123 |


ಸೂಚನೆ:– ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪತ್ರಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.
ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲದ ಸುದ್ದಿಗಳು

# 1. ಸನ್ಮಾನ್ಯ ಸಭಾಪತಿಗಳು ಹಾಗೂ ಸನ್ಮಾನ್ಯ ಸಭಾಧ್ಯಕ್ಷರ ಕಾರ್ಯಕ್ರಮಗಳು

## ಹೊಸ ವರ್ಷದ ಶುಭಾಶಯಗಳು



ದಿನಾಂಕ: 01.01.2024 ರಂದು ವಿಧಾನಪರಿಷತ್ತಿನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರಿಗೆ ಸಭಾಪತಿ ಕಛೇರಿಯ ಸಿಬ್ಬಂದಿಗಳು ಹೂಗುಚ್ಚ ನೀಡಿ ಹೊಸ ವರ್ಷದ ಶುಭಾಶಯ ಕೋರಿದರು.

## ತಡೆಗೋಡೆ ನಿರ್ಮಾಣದ ಬಗ್ಗೆ ಚರ್ಚೆ










ದಿನಾಂಕ: 03.01.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ಸಮುದ್ರ ಕೊರೆತ ಕುರಿತು ತಡೆಗೋಡೆ ನಿರ್ಮಾಣದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂದರ್ಭ.

## ಎಂ.ಐ.ಟಿ ವರ್ಲ್ಡ್ ಪೀಸ್ ಯೂನಿವರ್ಸಿಟಿ, ಪುಣೆಯಲ್ಲಿ ನಡೆದ ದುಂಡುಮೇಜಿನ ಸಮ್ಮೇಳನದಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಭಾಗಿ








ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ:10.01.2024 ರಿಂದ 12.01.2024 ರವರೆಗೆ ಎಂ.ಐ.ಟಿ ವರ್ಲ್ಡ್ ಪೀಸ್ ಯೂನಿವರ್ಸಿಟಿ, ಪುಣೆ ವತಿಯಿಂದ 13ನೇ ಭಾರತೀಯ ಚಾತ್ರಾ ಸಂಸದ್ (ಇಂಡಿಯನ್ ಸ್ಟೂಡೆಂಟ್ ಪಾರ್ಲಿಮೆಂಟ್) ವತಿಯಿಂದ ನಡೆದ ದುಂಡುಮೇಜಿನ ಸಮ್ಮೇಳನದಲ್ಲಿ ಶೈಕ್ಷಣಿಕ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿ **"**ಪ್ರಜಾಪ್ರಭುತ್ವ 2.0: ಕೃತಕ ಬುದ್ಧಿಮತ್ತೆ ಮತ್ತು ಸಾಮಾಜಿಕ ಮಾಧ್ಯಮಗಳು ಯಾವ ರೀತಿ ಪ್ರಜಾತಂತ್ರ ವ್ಯವಸ್ಥೆಯನ್ನು ಮನ್ವಂತರಗೊಳಿಸುತ್ತಿವೆ?**"** (Democracy 2.0: How AI (Artificial Intelligence) and social media are changing the game?) ಎಂಬ ವಿಷಯದ ಬಗ್ಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭ.

## 13ನೇ ಭಾರತೀಯ ವಿದ್ಯಾರ್ಥಿ ಸಂಸದನ ಸಮಾವೇಶದಲ್ಲಿ "ಪರಿವರ್ತನೆಯ ಪಥದಲ್ಲಿ ಯುವಜನತೆ" ಕುರಿತು– ಸನ್ಮಾನ್ಯ ಸಭಾಪತಿಗಳು ತಮ್ಮ ಅನುಭವದ ಮಾತುಗಳು



ದಿನಾಂಕ: 11.01.2024 ರಂದು ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು, ಮಹಾರಾಷ್ಟ್ರದ ಪುಣೆಯ ಎಂ.ಐ.ಟಿ ವರ್ಲ್ಡ್‌ಪೀಸ್ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 13ನೇ ಭಾರತೀಯ ವಿದ್ಯಾರ್ಥಿ ಸಂಸದನ ಸಮಾವೇಶದಲ್ಲಿಂದು "ಪರಿವರ್ತನೆಯ ಪಥದಲ್ಲಿ ಯುವಜನತೆ" ಕುರಿತ ವಿಚಾರ ಸಂಕಿರಣದಲ್ಲಿ ತಮ್ಮ ನಿರಂತರ ನಾಲ್ಕು ದಶಕಗಳ ಸಾಮಾಜಿಕ ಜೀವನದ ಅನುಭವಗಳನ್ನು ಹಂಚಿಕೊಂಡ ಅವರು ಭವಿಷ್ಯದ ಭಾರತದ ರೂವಾರಿಗಳಾಗಿರುವ ಯುವಜನತೆ ಇಂದು ಸಂಕ್ರಮಣ ಕಾಲದಲ್ಲಿದ್ದು ಉದಾತ್ತಗುರಿ, ಆದರ್ಶ ಹಾಗೂ ಸ್ಪಷ್ಟ ವಿವೇಚನೆಯೊಂದಿಗೆ ಮುನ್ನುಗ್ಗಬೇಕು, ಪರಿವರ್ತನೆಯ ಈ ಕಾಲದಲ್ಲಿ ಯುವಜನತೆ ಬರುವ ಎಲ್ಲಾ ಸವಾಲುಗಳನ್ನು ಸ್ವೀಕರಿಸಿ ಅವುಗಳನ್ನು ಅವಕಾಶಗಳನ್ನಾಗಿಸುವ ಕೌಶಲ್ಯ ಹೊಂದಬೇಕು. ಆಧುನಿಕ ಜಗತ್ತಿನ ಸಂಕೀರ್ಣತೆಗಳನ್ನು ಮೆಟ್ಟಿನಿಲ್ಲುವ ಎದೆಗಾರಿಕೆ ಬೆಳೆಸಿಕೊಂಡು ಪರಿವರ್ತನೆಯ ಹರಿಕಾರರಾಗಿ ತಮ್ಮ ಭವಿಷ್ಯದ ಉಜ್ವಲತೆಯ ಜೊತೆಗೆ ಸಶಕ್ತ, ಸದೃಢ ದೇಶ ನಿರ್ಮಿಸುವಲ್ಲಿ ಕ್ರೀಯಾಶೀಲರಾಗಬೇಕು ಎಂದು ಮನವಿ ಮಾಡಿದರು.

## ಸನ್ಮಾನ್ಯ ಸಭಾಪತಿಗಳಿಂದ ಗಿಡಗಳ ಸಂರಕ್ಷಣೆ ಬಗ್ಗೆ ಅಧಿಕಾರಿಗಳಿಗೆ ತಿಳುವಳಿಕೆ



ದಿನಾಂಕ: 12–01–2024 ರಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ವಿಧಾನಸೌಧದ ಮುಂಭಾಗದಲ್ಲಿರುವ ಟೇಕ್ ಗಿಡಗಳಿಗೆ ಗೆದ್ದಲಹುಳ ಹತ್ತಿದನ್ನ ನೋಡಿ ಸ್ವತಃ ಗೆದ್ದಲು ಹುಳುಗಳ ಕಳೆಯನ್ನು ತೆಗೆದು, ಈ ರೀತಿ ಕಳೆಹತ್ತದ ಹಾಗೆ ನೋಡಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ತಿಳುವಳಿಕೆ ನೀಡಿದರು. ಅಮೂಲ್ಯವಾದ ಈ ಗಿಡಗಳಿಗೆ ಬಣ್ಣ ಹಚ್ಚಿ ಗೆದ್ದಲು ಹುಳುಹತ್ತದ ಹಾಗೆ ನೋಡಿಕೊಳ್ಳಬೇಕು. ಆರಂಭದಲ್ಲಿ ಒಂದೆರಡು ಬಕೆಟ್ ನೀರು ಹಾಕಿದರೆ ಈ ರೀತಿ ಗೆದ್ದಲು ಹುಳು ಹತ್ತುವುದಿಲ್ಲ ಎಂಬ ಸಾಮಾನ್ಯ ಜ್ಞಾನದ ಅರಿವನ್ನು ಮೂಡಿಸಿದರು. ನಮ್ಮ ತೋಟದಲ್ಲಿ ಸಾವಿರಾರು ಗಿಡಗಳಿವೆ ಆ ಎಲ್ಲ ಗಿಡಗಳ ಬಡ್ಡಿಗೆ ಬಣ್ಣವನ್ನು ಹಚ್ಚಿರುವುದರಿಂದ ಗೆದ್ದಲುಗಳು ಹತ್ತದ ಹಾಗೆ ಸಂರಕ್ಷಣೆ ಮಾಡಿದ ಮಾಹಿತಿಯನ್ನು ಕೂಡ ಅವರಿಗೆ ನೀಡಿ ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳಿದರು. ಅಲ್ಲಿರುವ ಅಧಿಕಾರಿಗಳು, ಜನಸಾಮಾನ್ಯರು, ಹೊರಟ್ಟಿ ಅವರ ಗಿಡಮರಗಳ ಪ್ರೀತಿಯನ್ನು ಕೊಂಡಾಡಿ ಅಧಿಕಾರ ಅಂತಸ್ತು ಹುದ್ದೆಗಳನ್ನು ಗಮನದಲ್ಲಿಟ್ಟುಕೊಳ್ಳದೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಮಾಹಿತಿ ನೀಡಿದ್ದನ್ನು ನೋಡಿ ಖುಷಿಪಟ್ಟರು, ಇವರೊಬ್ಬ ಅಪರೂಪದ ನಾಯಕರು ಎಂಬ ಮಾತುಗಳು ಅಲ್ಲಿ ಸೇರಿದ ಜನರಿಂದ ವ್ಯಕ್ತವಾದವು.

## ಸನ್ಮಾನ್ಯ ಸಭಾಧ್ಯಕ್ಷರು ಲೋಕೋಪಯೋಗಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖಾಧಿಕಾರಿಗಳೊಂದಿಗೆ ಚರ್ಚೆ








ದಿನಾಂಕ: 18.01.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ಲೋಕೋಪಯೋಗಿ ಇಲಾಖೆಯ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.

**ವಿಧಾನ ಸಭೆಯ ಸಭಾಂಗಣದ ನವೀಕರಣದ ಬಗ್ಗೆ ಚರ್ಚೆ**







ದಿನಾಂಕ: 18.01.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ವಿಧಾನ ಸಭೆಯ ಸಭಾಂಗಣದಲ್ಲಿ ಕೈಗೊಳ್ಳಬೇಕಾದ ನವೀಕರಣ ಕಾಮಗಾರಿಗಳ ಬಗ್ಗೆ ಲೋಕೋಪಯೋಗಿ ಇಲಾಖೆಯ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವುದು.

## 75ನೇ ಗಣರಾಜ್ಯೋತ್ಸವ




ದಿನಾಂಕ: 26.01.2024 ರಂದು 75ನೇ ಗಣರಾಜ್ಯೋತ್ಸವದ ಪ್ರಯುಕ್ತ ಬೆಂಗಳೂರಿನ ಶಾಸಕರಭವನದಲ್ಲಿ ಗೌರವಾನ್ವಿತ ಸಭಾಪತಿಗಳಾದ ಬಸವರಾಜ್ ಎಸ್. ಹೊರಟ್ಟಿ ಅವರು ಧ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ನಾಡಿನ ಸಮಸ್ತ ಜನತೆಗೆ 75ನೇ ಗಣರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತಾ, ನಮ್ಮ ಹಕ್ಕುಗಳ ಜನನಿ ಸಂವಿಧಾನ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಅಂಗೀಕರಿಸಿಕೊಂಡ 75ನೇ ವರ್ಷ ಅಂಗವಾಗಿ ಆಚರಿಸುತ್ತಿರುವ ಈ ದಿನ ಭಾರತೀಯರ ಪಾಲಿಗೆ ಅತ್ಯಂತ ಮಹತ್ವವಾದದ್ದು. ಸಂವಿಧಾನದ ಆಶಯಗಳು ಪ್ರತಿಯೊಬ್ಬ ಕಟ್ಟಕಡೆಯ ಪ್ರಜೆಗೂ ಸಿಗುವಂತಾಗಬೇಕು. ಅಂದಾಗ ಮಾತ್ರ ಇಂಥ ಆಚರಣೆಗಳಿಗೆ ಮೌಲ್ಯ ಬರುತ್ತದೆ ಆ ದಿಕ್ಕಿನತ್ತ ಪ್ರತಿಯೊಬ್ಬರು ಶ್ರಮಿಸೋಣ ಎಂದು ಸಭಾಪತಿ ಬಸವರಾಜ್ ಎಸ್. ಹೊರಟ್ಟಿಯವರು ಹೇಳಿದರು. ಈ ಸಂದರ್ಭದಲ್ಲಿ ವಿಧಾನಸಭೆಯ ಹಾಗೂ ವಿಧಾನಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ಶ್ರೀಮತಿ ಕೆ.ಆರ್.ಮಹಾಲಕ್ಷ್ಮಿ ಸೇರಿದಂತೆ ಉಭಯ ಸದನಗಳ ಹಿರಿಯ ಅಧಿಕಾರಿಗಳು ಸಿಬ್ಬಂದಿವರ್ಗ, ಶಾಸಕರ ಭವನದ ಸಿಬ್ಬಂದಿ ಮುಂತಾದವರು ಉಪಸ್ಥಿತರಿದ್ದರು.

## ಮಾತೋಶ್ರೀ ಸುಶೀಲಾಬಾಯಿ ರುದ್ರಪ್ಪ ನಿರಾಣಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮ




ಮಾತೋಶ್ರೀ ಸುಶೀಲಾಬಾಯಿ ರುದ್ರಪ್ಪನಿರಾಣಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಪತಿಗಳಾದ ಬಸವರಾಜ ಎಸ್. ಹೊರಟ್ಟಿ ಅವರು ಭಾಗವಹಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಹರಿಹರದ ಪಂಚಮಸಾಲಿ ಪೀಠದ ಶ್ರೀಗಳು ಸೇರಿದಂತೆ ಮಾಜಿ ಸಚಿವ ಉದ್ಯಮಿ ಮುರುಗೇಶ್‌ನಿರಾಣಿ ಕುಟುಂಬದ ಸರ್ವಸದಸ್ಯರು ಅಭಿಮಾನಿಗಳು ಹಿತೈಷಿಗಳು ಭಾಗವಹಿಸಿದ್ದರು.

## Hanns Seidel Foundation" ನ ಪ್ರತಿನಿಧಿಗಳು– ಸಭಾಧ್ಯಕ್ಷರ ಭೇಟಿ






ದಿನಾಂಕ: 29.01.2024 ರಂದು ಸನ್ಮಾನ್ಯ ಸಭಾಧ್ಯಕ್ಷರು Hanns Seidel Foundation ಬೆಂಗಳೂರಿನ ನಿವಾಸಿ ಪ್ರತಿನಿಧಿಯಾಗಿ ನಿಯೋಜಿಸಲ್ಪಟ್ಟ ಮೆ॥ Judith Weinberger-Singh, ಹಾಗೂ ಪ್ರೋಗ್ರಾಮ್ ಮ್ಯಾನೇಜರ್ ಆಗಿರುವ ಡಾ॥ ಅರುಳ್ ರಾನ್‌ಕಲ್ಲಿ ರವರನ್ನು ಭೇಟಿ ಮಾಡಿದ ಸಂದರ್ಭ.

## ಕರ್ನಾಟಕ ವಿಧಾನಮಂಡಲ ಸಂಸ್ಥೆಯ ಆಡಳಿತ ಮಂಡಳಿ ಸಭೆ



ದಿನಾಂಕ:29.01.2024ರಂದು ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನಮಂಡಲ ಸಂಸ್ಥೆಯ ಆಡಳಿತ ಮಂಡಳಿ ಸಭೆ ನಡೆದ ಸಂದರ್ಭ.

## ವಿಸ್ತಾರ ಸುದ್ದಿವಾಹಿನಿಯ ಪುರಸ್ಕಾರ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಪತಿಗಳು




ದಿನಾಂಕ: 02.02.2024 ರಂದು ಬೆಂಗಳೂರಿನಲ್ಲಿ ನಡೆದ ವಿಸ್ತಾರ ಸುದ್ದಿವಾಹಿನಿ ವತಿಯಿಂದ "ವಿಸ್ತಾರ ನ್ಯೂಸ್ ಎಮರ್ಜಿಂಗ್ ಲೀಡರ್" ಪುರಸ್ಕಾರ ಕಾಯಕ್ರಮದಲ್ಲಿ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ರಾಜ್ಯದ ಯುವ ನಾಯಕರಿಗೆ ಮಾರ್ಗದರ್ಶನ ನೀಡಿ "ವಿಸ್ತಾರ ನ್ಯೂಸ್ ಎಮರ್ಜಿಂಗ್ ಲೀಡರ್" ಎಂಬ ಪುರಸ್ಕಾರ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದರು.

## ಘನತೆವೆತ್ತ ರಾಜ್ಯಪಾಲರ ಭೇಟಿ






ದಿನಾಂಕ:03.02.2024ರಂದು ಸನ್ಮಾನ್ಯ ಸಭಾಧ್ಯಕ್ಷರು ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡಿ ಗಂಡಬೇರುಂಡ ಲಾಂಛನವನ್ನು ನೀಡಿದ ಸಂದರ್ಭ.

## ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯ ಬಗ್ಗೆ ಚರ್ಚೆ




ದಿನಾಂಕ: 05.02.2024 ರಂದು ಸನ್ಮಾನ್ಯ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಗೃಹ ಸಚಿವರು ಶ್ರೀ ಡಾ.ಜಿ.ಪರಮೇಶ್ವರ ಅವರ ಉಪಸ್ಥಿತಿಯಲ್ಲಿ ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯನ್ನು ಉಳಿಸಿಕೊಂಡು ಹೋಗುವ

ಮೂಲಕ ಪೊಲೀಸರಿಗೆ ಒಂದು ನೈತಿಕ ಬೆಂಬಲವನ್ನ ಕೊಡಬೇಕಾಗಿದೆ ಅವರ ಮಕ್ಕಳಿಗೆ ಉತ್ಕೃಷ್ಟಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದು ಇದೆ. ಈ ಶಾಲೆಯನ್ನು ಉಳಿಸಿಕೊಂಡು ಹೋಗಲು ನಾನು ಸಾಕಷ್ಟು ಪ್ರಯತ್ನ ಮಾಡಿದ್ದನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ತಾವು ಪ್ರಾಮಾಣಿಕ ಪ್ರಯತ್ನದ ಮೂಲಕ ಈ ಶಾಲೆಯನ್ನ ಪುನರ್ ನಿರ್ಮಿಸಿ ಮೊದಲಿನಂತೆ ಈ ಶಾಲೆ ನೂರಾರು ಮಕ್ಕಳ ಕಲಿಕೆಗೆ ಆಸರೆಯಾಗಲಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಒಳಾಡಳಿತ ಇಲಾಖೆ, ಮಹಾ ನಿರ್ದೇಶಕರು ಮತ್ತು ಆರಕ್ಷಕರ ಮಹಾನಿರೀಕ್ಷಕರು, ಇಂಟಲಿಜೆನ್ಸ್ ಪೋಲಿಸ್ ಉತ್ತರ ವಲಯ, ಬೆಂಗಳೂರು. ಪೊಲೀಸ್ ಅಧಿಕ್ಷಕರು, ಧಾರವಾಡ, ಡಾ:ಮಂಗಳ ಜಿ.ಎಸ್. ವಿಶೇಷ ಕಾರ್ಯದರ್ಶಿಗಳು ಒಳಾಡಳಿತ (ಪೊಲೀಸ್ ಸೇವೆ) ಇಲಾಖೆ, ಎ.ಡಿ.ಜಿ.ಪಿ ಶ್ರೀಮತಿ ಸುಮಂಗಲ, ಸಭಾಪತಿಯವರ ವಿಶೇಷಕರ್ತವ್ಯಾಧಿಕಾರಿ ಡಾ.ಮಹೇಶವಾಳ್ವೇಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಂಥಾಲಯ ಸಮಿತಿ ಸಭೆ



ದಿನಾಂಕ: 05.02.24 ರಂದು ಸನ್ಮಾನ್ಯ ಸಭಾಪತಿರವರ ಅಧ್ಯಕ್ಷತೆಯಲ್ಲಿ ವಿಧಾನಸಭೆಯ ಪೂರ್ವ ಮೊಗಸಾಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದನದ ನಡಾವಳಿಗಳು 2014ನೇ ವರ್ಷದಿಂದ ಸರ್ಕಾರದ ಮುದ್ರಣಾಲಯದಲ್ಲಿ ಮುದ್ರಣಗೊಳ್ಳದೆ ಬಾಕಿ ಇರುವ ಬಗ್ಗೆ ನಡೆದ ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಸಮಿತಿ ಸಭೆಯಲ್ಲಿ ಗ್ರಂಥಾಲಯದ ನಿರ್ದೇಶಕರಾದ ಶ್ರೀ ಸತೀಶ್ ಹೊಸಮನಿ, ಗ್ರಂಥಾಲಯದ ಸಿಬ್ಬಂದಿಗಳು ಹಾಗೂ ಸಭಾಪತಿಯವರ ವಿಶೇಷ ಕರ್ತವ್ಯ ಅಧಿಕಾರಿ ಡಾ:ಮಹೇಶವಾಳ್ವೇಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.


## ವಿಧಾನಸಭೆಯ ಹಕ್ಕು ಬಾಧ್ಯತೆಗಳ ಸಮಿತಿಯು ಸನ್ಮಾನ್ಯ ಸಭಾಧ್ಯಕ್ಷರ ಭೇಟಿ





ದಿನಾಂಕ:05.02.2024 ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ವಿಧಾನ ಸಭೆಯ ಹಕ್ಕು ಬಾಧ್ಯತೆಗಳ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳು ಭೇಟಿ ಮಾಡಿ ಚರ್ಚಿಸುತ್ತಿರುವ ಸಂದರ್ಭ.

## ಸನ್ಮಾನ್ಯ ಸಭಾಪತಿಗಳು ಹಾಗೂ ಅವರ ತಂಡ ಮಧ್ಯಪ್ರದೇಶದ ಇಂದೋರ್‌ನಲ್ಲಿ





ದಿನಾಂಕ:06.02.2024 ರಂದು ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರ ನೇತೃತ್ವದ ತಂಡ ಮಧ್ಯಪ್ರದೇಶದ ಇಂದೋರ್‌ನಲ್ಲಿ ಆಯೋಜಿಸಿರುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, "ಭಾರತ್‌ಮಾತಾ" ಮಂದಿರ ಹಾಗೂ ಉಜ್ಜೈನಿಯ ಭೈರವ ಗಡಿನಲ್ಲಿರುವ ಶ್ರೀಕಾಲಭೈರವ ಮಂದಿರಕ್ಕೆ ಭೇಟಿ ನೀಡಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್‌ಶೆಟ್ಟರ್ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಮಾಜಿ ಉಪಮುಖ್ಯಮಂತ್ರಿಗಳಾದ ಡಾ:ಸಿ.ಅಶ್ವಥ್‌ನಾರಾಯಣ್, ಮಾಜಿ ಸಚಿವರಾದ ಶಂಕರಪಾಟೀಲ್ ಮುನೇನಕೊಪ್ಪ ವಿಧಾನಸಭೆಯ ಸಭಾಧ್ಯಕ್ಷರ ಆಪ್ತಕಾರ್ಯದರ್ಶಿಯಾದ ಕರ್ಜಗಿ ಅವರು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಕರ್ನಾಟಕ ವಿಧಾನಸಭೆ ಸದಸ್ಯರುಗಳಿಗೆ ಹಾಗೂ ಪತ್ರಿಕಾ/ಮಾಧ್ಯಮ ಪ್ರತಿನಿಧಿಗಳಿಗೆ ತರಬೇತಿ ಶಿಬಿರ







ದಿನಾಂಕ:09.02.2024ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ರಾಜ ಭವನ ರಸ್ತೆಯಲ್ಲಿರುವ "ದಿ ಕ್ಯಾಪಿಟಲ್ ಹೋಟೆಲ್"ನಲ್ಲಿ ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳಿಗೆ ಹಾಗೂ ಪತ್ರಿಕಾ/ಮಾಧ್ಯಮ ಪ್ರತಿನಿಧಿಗಳಿಗೆ ಆಯೋಜಿಸಿರುವ ತರಬೇತಿ ಶಿಬಿರದ ಸಂದರ್ಭ. ಸದರಿ ಶಿಬಿರವು ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು ಇವರಿಂದ ಉದ್ಘಾಟಿಸಲ್ಪಟ್ಟಿತು.

## ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ಸನ್ಮಾನ್ಯ ಸಭಾಪತಿಗಳು ತೆರಳುತ್ತಿರುವ ಸಂದರ್ಭ



ದಿನಾಂಕ: 12.02.2024 ರಂದು 152ನೇ ಕರ್ನಾಟಕ ವಿಧಾನ ಮಂಡಲದ ಮೊದಲ ದಿನದ ಜಂಟಿ ಅಧಿವೇಶನಕ್ಕೆ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿರವರು ತೆರಳುತ್ತಿರುವ ಸಂದರ್ಭ. ಈ ಸಮಯದಲ್ಲಿ ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಎನ್.ಎಸ್. ಭೋಸರಾಜು ಹಾಗೂ ವಿಧಾನಪರಿಷತ್ತಿನ ಕಾರ್ಯದರ್ಶಿಯಾದ ಶ್ರೀಮತಿ ಕೆ.ಆರ್. ಮಹಾಲಕ್ಷ್ಮೀರವರು ಸಹ ಸಭಾಪತಿಯವರ ಜೊತೆಯಾಗಿದ್ದಾರೆ.

## ಘನತೆವೆತ್ತ ರಾಜ್ಯಪಾಲರಿಗೆ ಸ್ವಾಗತ









ದಿನಾಂಕ:12.02.2024 ರಂದು ಕರ್ನಾಟಕ ವಿಧಾನ ಮಂಡಲದ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡಲು ಆಗಮಿಸುತ್ತಿರುವ ಸನ್ಮಾನ್ಯ ರಾಜ್ಯಪಾಲರನ್ನು ಸನ್ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು, ಸನ್ಮಾನ್ಯ ಸಭಾಧ್ಯಕ್ಷರು, ವಿಧಾನಸಭೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸ್ವಾಗತಿಸುತ್ತಿರುವುದು.

ಕರ್ನಾಟಕ ವಿಧಾನಮಂಡಲದ ಬಜೆಟ್ ಅಧಿವೇಶನದ ಆರಂಭದ ದಿನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮೂಲಕ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ವಿಧಾನಮಂಡಲಕ್ಕೆ ಆಗಮಿಸಿದ್ದು, ಈ ವೇಳೆ ಕರ್ನಾಟಕ ವಿಧಾನ ಪರಿಷತ್ತಿನ ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀಯು.ಟಿ.ಖಾದರ್, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್ ಸ್ವಾಗತಿಸಿದರು.

## ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರಿಂದ ಭಾಷಣ



152ನೇ ಕರ್ನಾಟಕ ವಿಧಾನಮಂಡಲದ ಬಜೆಟ್ ಅಧಿವೇಶನದ ಆರಂಭದ ದಿನ ಜಂಟಿ ಅಧಿವೇಶನ ಉದ್ದೇಶಿಸಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ, ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್, ಮುಖ್ಯಮಂತ್ರಿಗಳಾದ ಸನ್ಮಾನ್ಯ

ಶ್ರೀಸಿದ್ದರಾಮಯ್ಯನವರು ಸೇರಿದಂತೆ ಎಲ್ಲ ಸಚಿವರು, ವಿಧಾನಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಹಾಗೂ ಹಿರಿಯ ಅಧಿಕಾರಿ ವೃಂದದವರ ಉಪಸ್ಥಿತಿ.

**ಕರ್ನಾಟಕ ವಿಧಾನ ಮಂಡಲದ ಸಂಸ್ಥೆಯ ಉದ್ಘಾಟನಾ ಸಮಾರಂಭ**














ದಿನಾಂಕ:12.02.2024ರಂದು ಕರ್ನಾಟಕ ವಿಧಾನ ಮಂಡಲ ಸಂಸ್ಥೆಯ ಉದ್ಘಾಟನೆ ಮತ್ತು ಬಾಲಬ್ರೂಯಿ ಕಟ್ಟಡದ ಪಾರಂಪರಿಕ ವಿನ್ಯಾಸಕ್ಕೆ ಒಳಪಟ್ಟು ನವೀಕರಣ ಶಂಕುಸ್ಥಾಪನೆಯನ್ನು ನೆರವೇರಿಸಿರುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಸಂಸ್ಥೆಯ ಸಹ ಅಧ್ಯಕ್ಷರಾದ ಸನ್ಮಾನ್ಯ ಸಭಾಪತಿಯವರು, ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಸಭಾಧ್ಯಕ್ಷರು, ಸಚಿವರುಗಳು, ಸಂಸ್ಥೆಯ ಇತರೆ ಪದಾಧಿಕಾರಿಗಳು ಮತ್ತು ಉಭಯ ಸದನಗಳ ಸದಸ್ಯರುಗಳು ಉಪಸ್ಥಿತರಿದ್ದರು.

## ವಿಧಾನಸಭೆ ಕಲಾಪವನ್ನು ವೀಕ್ಷಿಸಿದ ಲೈಂಗಿಕ/ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರೊಂದಿಗೆ ಚರ್ಚೆ





ದಿನಾಂಕ:14.02.2024ರಂದು ಸನ್ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ ಲೈಂಗಿಕ/ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ವಿಧಾನ ಸಭೆಯ ಕಲಾಪಗಳನ್ನು ವೀಕ್ಷಿಸಿದ ಸಂದರ್ಭದಲ್ಲಿ ಅವರುಗಳನ್ನು ವಿಧಾನ ಸಭೆಯ ಸದಸ್ಯರುಗಳ ಪರವಾಗಿ ಸನ್ಮಾನ್ಯ ಸಭಾಧ್ಯಕ್ಷರು ಸ್ವಾಗತಿಸಿ ಹಾಗೂ ಅವರುಗಳ ಕುರಿತು ಸನ್ಮಾನ್ಯ ಸದಸ್ಯರುಗಳು ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತದನಂತರ ಅವರುಗಳು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ಚರ್ಚಿಸುತ್ತಿರುವ ಸಂದರ್ಭ.

## ಗುರುಗಳ ಆರ್ಶೀವಾದ ಹಾಗೂ ಅನುಗ್ರಹ





15.02.2024 ರಂದು ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ಮೂಲತಃ ದೈಹಿಕ ಶಿಕ್ಷಣ ಶಿಕ್ಷಕರು ದೈಹಿಕ ಶಿಕ್ಷಣದ ಸ್ನಾತಕ ಪದವಿ ಅಧ್ಯಯನ ಹಾಗೂ ಸ್ನಾತಕೋತ್ತರ ಪದವಿಗಾಗಿ 1972–73ನೇ ಸಾಲಿನಲ್ಲಿ (ಬಿ.ಪಿ.ಇಡಿ) ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ಹಾಗೂ ಅತ್ಯುತ್ತಮ ಶಿಕ್ಷಣ ನೀಡಿದ್ದ ಪ್ರೋ ಶ್ರೀಮತಿ ಶಕುಂತಲಾ ಮೇಡಂ ಅವರನ್ನು ಅವರ 93 ವರ್ಷದ ಇಳಿವಯಸ್ಸಿನಲ್ಲಿ 50 ವರ್ಷಗಳ ಬಳಿಕ ಭೇಟಿ ಮಾಡಿದ ಬಸವರಾಜ ಹೊರಟ್ಟಿ ನೆಚ್ಚಿನ ಗುರುಗಳ ಆಶೀರ್ವಾದ ಹಾಗೂ ಅನುಗ್ರಹ ಪಡೆದ ಜೀವನದ ಅತ್ಯಂತ ಅಪರೂಪದ ಘಟನೆಗೆ ನಿನ್ನೆ ಸಾಕ್ಷಿಯಾದರು.

ಈ ಅಪರೂಪದ ಸಂದರ್ಭದಲ್ಲಿ ಅಧ್ಯಯನ ಕಾಲದ ಸಹಪಾಠಿ ಶ್ರೀಮತಿ ಗಿರಿಜಾ ಇನ್ನೋರ್ವ ಸಹಪಾಠಿ ಕಲಾವಿದ ಶಂಕರ ಹಾಗೂ ಆತ್ಮೀಯ ಸ್ನೇಹಿತ ಹಾಗೂ ಸಹಪಾಠಿಯಾದ ಆರ್.ಎ.ದೇಸಾಯಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## 2024–25ನೇ ಸಾಲಿನ ಬಜೆಟ್ ಮಂಡಿಸಲು ಸನ್ಮಾನ್ಯ ಸಭಾಪತಿಗಳ ಒಪ್ಪಿಗೆ



ದಿನಾಂಕ:16.02.2024 ರಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವ ಪೂರ್ವದಲ್ಲಿ ಸರ್ಕಾರದ ಪ್ರತಿನಿಧಿಯಾದ ಸಣ್ಣ ನೀರಾವರಿ ಹಾಗೂ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು ಹಾಗೂ ವಿಧಾನಪರಿಷತ್ತಿನ ನಾಯಕರಾದ ಎನ್.ಎಸ್.ಬೋಸರಾಜ್ ಅವರು ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಅವರಿಗೆ 2024–25ನೇ ಸಾಲಿನ ಬಜೆಟ್ ಪ್ರತಿಯನ್ನು ಸಂಪ್ರದಾಯದಂತೆ ನೀಡಿ ವಿಧಾನಸಭೆಯಲ್ಲಿ ಮಂಡಿಸಲು ಒಪ್ಪಿಗೆ ಪಡೆದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ್ ಪೂಜಾರಿ, ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ತೇಜಸ್ವಿನಿಗೌಡ ಸೇರಿದಂತೆ ವಿಧಾನಪರಿಷತ್ತಿನ ಹಿರಿಯ ಅಧಿಕಾರಿ ವರ್ಗದವರು ಮತ್ತು ಸಿಬ್ಬಂದಿಯವರು ಹಾಗೂ ಮುಂತಾದವರು ಉಪಸ್ಥಿತರಿದ್ದರು.



**ಸನ್ಮಾನ್ಯ ಸಭಾಪತಿಯವರಿಗೆ ಗೌರವ ಸಮರ್ಪಣೆ**



ದಿನಾಂಕ:17.2.2024ರಂದು ಬೆಳಿಗ್ಗೆ 10:30 ಗಂಟೆಗೆ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿಯವರಿಗೆ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವಾರ್ಡ್ ನಂಬರ್ 36 ತಾಜನಗರ ಹಾಗೂ ಸುತ್ತಮುತ್ತಲಿನ ಬಡಾವಣೆಯ ಜನತೆಯ ಪರವಾಗಿ ತಾಜನಗರದಲ್ಲಿ ಇರುವ ಶಾದಿಮಹಲ್ ಕಟ್ಟಡದ ಕಾಮಗಾರಿಗೆ 50 ಲಕ್ಷ ರೂಪಾಯಿ ಅನುದಾನವನ್ನು ರಾಜ್ಯ ಸರ್ಕಾರದಿಂದ ಮಂಜೂರು

ಮಾಡಿಸಿಕೊಟ್ಟಿದ್ದಕ್ಕೆ ಗೌರವ ಸಮರ್ಪಣೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಹಿರಿಯ ಸದಸ್ಯರಾದ ಶ್ರೀರಾಜಣ್ಣಮು. ಕೊರವಿ, ತಾಜನಗರ ತುವಲಿಯಾದ ಶ್ರೀ ಎನ್.ಎಂ.ಹೆಬ್ಬಳ್ಳಿ, ಕಾರ್ಯದರ್ಶಿಗಳಾದ ಶ್ರೀ ಎಚ್.ಬಿ.ಕಾರ್ಲ್ವಾಡ, ಶ್ರೀ ಸಿದ್ದುಮಾಯಣ್ಣವರ್, ಶ್ರೀ ಹನುಮಂತಪ್ಪ ಎಲಿವಾಳ್, ಶ್ರೀ ಚಿದಾನಂದಕಟ್ಟಿಮನಿ, ಶ್ರೀ ಎಸ್.ಬಿ.ಮೋಷಿನ್, ಶ್ರೀ ಹಸಿಮುಲ್ಲಾ, ಶ್ರೀ ಬಾಬುಸಾಬ ನಾದಾಫ್, ಶ್ರೀ ಅಬ್ದುಲ್ಲಾ ದರ್ಮಲ್ಲೂರ್, ಶ್ರೀ ಎನ್.ಎ. ಮನಿಯರ್, ಶ್ರೀ ಮುನಪ್ ನದಾಫ್, ಶ್ರೀ ಹಮೀಜ್ ಮನಿಯಾರ್ ಹಾಗೂ ಅನೇಕ ಗಣ್ಯಮಾನ್ಯರು ಉಪಸ್ಥಿತರಿದ್ದರು.

## ವಿಧಾನಸಭೆ ಕಲಾಪವನ್ನು ವೀಕ್ಷಿಸಿದ ವಿಕಲಚೇತನರು, ಮಾನ್ಯ ಸಭಾಧ್ಯಕ್ಷರ ಭೇಟಿ




ದಿನಾಂಕ:19.02.2024 ರಂದು ವಿಕಲಚೇತನರು ಸನ್ಮಾನ್ಯ ಸಭಾಧ್ಯಕ್ಷರ ಆಹ್ವಾನದ ಮೇರೆಗೆ ವಿಧಾನ ಸಭೆ ಕಲಾಪಗಳನ್ನು ವೀಕ್ಷಿಸಿ ಅವರುಗಳನ್ನು ಸನ್ಮಾನ್ಯ ಸಭಾಧ್ಯಕ್ಷರು ಎಲ್ಲಾ ವಿಧಾನ ಸಭಾ ಸದಸ್ಯರ ಪರವಾಗಿ ಸ್ವಾಗತಿಸಿ ನಂತರ ಸದಸ್ಯರುಗಳು ಅವರುಗಳ ಬಗ್ಗೆ ಪ್ರಸ್ತಾಪಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ತದನಂತರ ಅವರುಗಳು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿದ ಸಂದರ್ಭ.

## ಶ್ರೀ ಪುಟ್ಟಣ್ಣ – ಸನ್ಮಾನ್ಯ ಸಭಾಪತಿಗಳ ಭೇಟಿ




ದಿನಾಂಕ: 21.02.2024 ರಂದು ಬೆಂಗಳೂರು ಕ್ಷೇತ್ರದ ಶಿಕ್ಷಕರ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಶ್ರೀ ಪುಟ್ಟಣ್ಣ ಅವರು ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರನ್ನು ಹಾಗೂ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ಭೇಟಿಯಾಗಿ ಪುಷ್ಪಗುಚ್ಛ ನೀಡಿ ಸಂತಸ

ಹಂಚಿಕೊಂಡರು. ಈ ಸಂದರ್ಭದಲ್ಲಿ ಸಚಿವರಾದ ಶ್ರೀ ಜಮೀರ್ ಅಹ್ಮದ್, ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಎನ್.ಎಸ್. ಬೋಸರಾಜ್, ಮಾನ್ಯ ಸಹಕಾರ ಸಚಿವರಾದ ಶ್ರೀ ರಾಜಣ್ಣ ಅವರು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ವಿಧಾನಸಭೆ ಕಲಾಪವನ್ನು ವೀಕ್ಷಿಸಿದ ಅನಿವಾಸಿ ಭಾರತೀಯ ಸಮಿತಿಯು ಸನ್ಮಾನ್ಯ ಸಭಾಧ್ಯಕ್ಷರ ಭೇಟಿ




ದಿನಾಂಕ:21.02.2024 ರಂದು ಅನಿವಾಸಿ ಭಾರತೀಯರು ಸನ್ಮಾನ್ಯ ಸಭಾಧ್ಯಕ್ಷರ ಅನುಮತಿ ಮೇರೆಗೆ ವಿಧಾನ ಸಭೆಯ ಕಲಾಪಗಳನ್ನು ವೀಕ್ಷಿಸಿದ್ದು, ಸನ್ಮಾನ್ಯ ವಿಧಾನ ಸಭಾ ಸದಸ್ಯರುಗಳ ಪರವಾಗಿ ಸನ್ಮಾನ್ಯ ಸಭಾಧ್ಯಕ್ಷರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಸದಸ್ಯರುಗಳು ಅನಿವಾಸಿ ಭಾರತೀಯರ ಬಗ್ಗೆ ಪ್ರಸ್ತಾಪಿಸಿ ಕಲಾಪದಲ್ಲಿ ಪಾಲ್ಗೊಂಡರು. ತದನಂತರ ಅನಿವಾಸಿ ಭಾರತೀಯ ನಿಯೋಗದ ಸದಸ್ಯರು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ಚರ್ಚಿಸಿದ ಸಂದರ್ಭ.

## ಸನ್ಮಾನ್ಯ ಸಭಾಪತಿಗಳು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರು




ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಕಚೇರಿಗೆ ಸಭಾಪತಿಯವರು ಆಯೋಜಿಸಿದ ಭೋಜನ ಕೂಟಕ್ಕೂ ಮುನ್ನ ಗೌರವಾನ್ವಿತ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಸಚಿವರಾದ ಶ್ರೀ ಜಮೀರ್ ಅಹ್ಮದ್, ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಎನ್.ಎಸ್ ಬೋಸರಾಜ್, ಮಾನ್ಯ ಸಹಕಾರ ಸಚಿವರಾದ ಶ್ರೀ ರಾಜಣ್ಣ ಸಹ ಭೇಟಿ ನೀಡಿ ಆತ್ಮೀಯತೆಯಿಂದ ಕುಶಲೋಪರಿಗಳನ್ನು ವಿಚಾರಿಸಿದರು.

## ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ ಭೋಜನ ಕೂಟ







ದಿನಾಂಕ: 21.02.24 ಗೌರವಾನ್ವಿತ ಸಭಾಪತಿಗಳಾದ ಬಸವರಾಜ ಎಸ್. ಹೊರಟ್ಟಿ ಅವರು ಉಭಯ ಸದನಗಳ ಸದಸ್ಯರುಗಳಿಗೆ ಹಾಗೂ ಸಚಿವರಿಗೆ, ಅಧಿಕಾರಿಗಳಿಗೆ, ಹಿತೈಷಿಗಳಿಗೆ ಭೋಜನ ಕೂಟವನ್ನು ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದರು. ಭೋಜನ ಕೂಟದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಸೇರಿದಂತೆ ಹಲವಾರು ಸಚಿವರು, ಶಾಸಕರು, ಗಣ್ಯಮಾನ್ಯರು ಹಿರಿಯ ಅಧಿಕಾರಿಗಳು, ಹಿತೈಷಿಗಳು ಭಾಗವಹಿಸಿ ಉತ್ತರ ಕರ್ನಾಟಕ ಶೈಲಿಯ ವಿವಿಧ ಬಗೆಬಗೆಯ ಭಕ್ಷ ಭೋಜನವನ್ನು ಸವಿದ ಸ್ಮರಣೀಯ ಕ್ಷಣಗಳು.

## ಅನಿವಾಸಿ ಭಾರತೀಯ (ಕನ್ನಡಿಗರು) ನಿಯೋಗವು ಸನ್ಮಾನ್ಯ ಸಭಾಪತಿಗಳ ಭೇಟಿ





ದಿನಾಂಕ: 22.02.2024 ರಂದು ಅನಿವಾಸಿ ಭಾರತೀಯ (ಕನ್ನಡಿಗರು) ನಿಯೋಗವು ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿ ವರನ್ನು ಸೌಹಾರ್ದಯುತವಾಗಿ ಭೇಟಿಯಾಗಿ ತಮ್ಮತಮ್ಮ ಅನಿಸಿಕೆಗಳನ್ನು ಸಮಸ್ಯೆಗಳನ್ನು ಹಂಚಿಕೊಂಡರು.

ಬೇರೆಬೇರೆ ದೇಶದಲ್ಲಿ ವಾಸ ಇರುವ ಅನಿವಾಸಿ ಭಾರತೀಯರು ಒಂದೇ ತೆರನಾದ ಸಮಸ್ಯೆಗಳನ್ನು ಎದುರಿಸುವುದಿಲ್ಲ. ಒಬ್ಬೊಬ್ಬರದು ಒಂದೊಂದು ಸಮಸ್ಯೆ ಒಂದೊಂದು ದೇಶದ್ದು ಒಂದೊಂದು ಕಾನೂನು. ಇದರ ಮಧ್ಯೆಯು ಅನಿವಾಸಿ ಭಾರತೀಯರು ಬೇರೆಬೇರೆ ದೇಶದಲ್ಲಿ ತಮ್ಮ ಸಾಮರ್ಥ್ಯದ ಮೂಲಕ ಕೆಲಸ ಮಾಡುತ್ತಿದ್ದಾರೆ. ಅವರು ಇಂದು ಸಭಾಪತಿಯವರ ಎದುರು ತಮ್ಮ ಕಷ್ಟಸುಖಗಳನ್ನ ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿ, ಮಾನ್ಯ ಸಹಕಾರ ಸಚಿವರಾದ ಶ್ರೀ ರಾಜಣ್ಣ, ವಿಧಾನ ಪರಿಷತ್ ಸದಸ್ಯರಾದ ಬಿ.ಎಂ.ಫಾರೂಕ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಸನ್ಮಾನ್ಯ ಸಭಾಪತಿಯವರು ಮಾನ್ಯ ಮುಖ್ಯಮಂತ್ರಿಯವರೊಂದಿಗೆ



ದಿನಾಂಕ: 22.02.2024 ರಂದು ಅಧಿವೇಶನದ ಬಿಡುವಿನ ಸಂದರ್ಭದಲ್ಲಿ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಕಚೇರಿಗೆ ಗೌರವಾನ್ವಿತ ಮುಖ್ಯಮಂತ್ರಿಗಳಾದ

ಸಿದ್ದರಾಮಯ್ಯನವರು ಸಹಜ ಭೇಟಿ ನೀಡಿ ಆತ್ಮೀಯತೆಯಿಂದ ಕುಶಲೋಪರಿಗಳನ್ನು ಹೊರಟ್ಟಿಯವರೊಂದಿಗೆ ಹಂಚಿಕೊಂಡರು. ಹೊರಟ್ಟಿ ಅವರ ಮತ್ತು ತಮ್ಮ ನಾಲ್ಕು ದಶಕಗಳ ಸುದೀರ್ಘ ಸ್ನೇಹ ಸಂಬಂಧದ ಹಲವಾರು ಮಜಲುಗಳನ್ನ ಹಾಗೂ ಸಂಗತಿಗಳನ್ನು ಮುಖ್ಯಮಂತ್ರಿಗಳು ಮೆಲಕು ಹಾಕಿದರು. ಹೊರಟ್ಟಿಯವರು ಸಹ ಹಲವಾರು ಮಹತ್ವದ ವಿಷಯಗಳನ್ನ ನೆನಪಿಸಿ ಹಾಸ್ಯ ಚಟಾಕಿ ಹಾರಿಸಿದರು. ಇಬ್ಬರೂ ಗೌರವಾನ್ವಿತರು ತಮ್ಮ ಸಾಕಷ್ಟು ಆಡಳಿತಾತ್ಮಕ ಒತ್ತಡದ ಮಧ್ಯೆಯು ಕೆಲ ಸಮಯವನ್ನ ಸಂತಸದಿಂದ ಕಳೆದರು.

ಈ ಸಂದರ್ಭದಲ್ಲಿ ಸಭಾಪತಿ ಅವರ ವಿಶೇಷಕರ್ತವ್ಯಾಧಿಕಾರಿ ಡಾ.ಮಹೇಶ್ ವಾಳ್ವೇಕರ್ ಹಾಗೂ ಆಪ್ತಕಾರ್ಯದರ್ಶಿ ಶ್ರೀಮತಿ ಕೆ.ಡಿ. ಶೈಲಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು .

## ಶಿರಸಿಯ ಅಗ್ರಿಕಲ್ಚರ್ ಕಾಲೇಜಿನ ಪದವಿ ವಿದ್ಯಾರ್ಥಿಗಳು – ಸನ್ಮಾನ್ಯ ಸಭಾಪತಿಯವರ ಭೇಟಿ





ದಿನಾಂಕ: 22.02.2024 ಹಾಗೂ 23.02.2024 ರಂದು ಶಿರಸಿಯ ಅಗ್ರಿಕಲ್ಚರ್ ಕಾಲೇಜಿನ ಫಾರೆಸ್ಟ್ ವಿಷಯದಲ್ಲಿ ಬಿ.ಎಸ್ಸಿ ಪದವಿ ಮಾಡುತ್ತಿರುವ ವಿದ್ಯಾರ್ಥಿಗಳು, ಹಾಗೂ ಪದವಿ ಮುಗಿಸಿದ ಪದವೀಧರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವ ಹಲವಾರು ಸಂಗತಿಗಳನ್ನು ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರ ಗಮನಕ್ಕೆ ತಂದು ನಮ್ಮ ನೋವಿಗೆ ನೀವೇ ನಮಗೆ ದಾರಿ ದೀಪವಾಗಬೇಕೆಂದು ಪರಿಪರಿಯಾಗಿ ವಿನಂತಿಸಿದರು.

ಫಾರೆಸ್ಟ್ ವಿಷಯದಲ್ಲಿ ನಾವು ಬಿಎಸ್ಸಿ ಪದವಿ ಮಾಡಿದರೂ ನೇಮಕಾತಿಯಲ್ಲಿ ನಮಗೆ ಸಾಕಷ್ಟು ಅನ್ಯಾಯವಾಗುತ್ತಿದೆ. ಫಾರೆಸ್ಟ್ ಇಲಾಖೆಯ ನೇಮಕಾತಿಯಲ್ಲಿ ಫಾರೆಸ್ಟ್ ವಿಷಯದಲ್ಲಿ ಬಿ.ಎಸ್ಸಿ ಮಾಡಿದ ಉದ್ಯೋಗ ಆಕಾಂಕ್ಷಿಗಳಿಗೆ ಶೇಕಡ 75% ಮೀಸಲಾತಿಯನ್ನು ಕಲ್ಪಿಸಿದರೆ ಮಾತ್ರ ನಮ್ಮೆಲ್ಲರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಸಾಮಾನ್ಯ ಪದವಿದವರೊಂದಿಗೆ ನಮ್ಮನ್ನು ಸಹಜವಾಗಿ ಪರಿಗಣಿಸಿದರೆ ಫಾರೆಸ್ಟ್ ವಿಷಯದಲ್ಲಿ ಬಿ.ಎಸ್ಸಿ ಮಾಡಿದ್ದಕ್ಕೆ ಅರ್ಥವೇ ಇಲ್ಲವಾದಂತಾಗುತ್ತದೆ. ಫಾರೆಸ್ಟ್ ವಿಷಯದಲ್ಲಿ ವಿಶೇಷ ತರಬೇತಿಯೊಂದಿಗೆ ಪದವಿಯನ್ನು ನಾವು ಮುಗಿಸಿರುತ್ತೇವೆ ಹೀಗಾಗಿ ಫಾರೆಸ್ಟ್ ಇಲಾಖೆಯ ಆಶಯಗಳನ್ನು ಈಡೇರಿಸಲು ನಮ್ಮಂತವರಿಗೆ ಮಾತ್ರ ಸಾಧ್ಯ ಎಂಬ ಅಭಿಪ್ರಾಯ ನಮ್ಮದು.

ತಾವು ಸರ್ಕಾರದ ಗಮನ ಸೆಳೆದು ನಮ್ಮ ಸಮಸ್ಯೆಗಳಿಗೆ ಸ್ಪಂದಿಸಲು ವಿನಂತಿಸಿದರು. ನೇಮಕಾತಿಯಲ್ಲಿ ಕನಿಷ್ಠ 75% ಮೀಸಲಾತಿ ಕಲ್ಪಿಸುವಂತೆ ತಾವು ದಾರಿ ತೋರಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಸಮಸ್ಯೆಗಳನ್ನು ಆಲಿಸಿ ಖಂಡಿತವಾಗಿಯೂ ಸರ್ಕಾರದ ಗಮನ ಸೆಳೆದು ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ನಿಮ್ಮ ಜೊತೆ ನಾನು ಸದಾ ಇರುತ್ತೇನೆಂದು ಭರವಸೆ ನೀಡಿದರು.

## ಸನ್ಮಾನ್ಯ ಸಭಾಪತಿಯವರು ರೈತ ಬಂಧುಗಳೊಂದಿಗೆ ಸಂವಾದ





ನಾಡಿನ ರೈತ ಸಮೂಹದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ್ ಎಸ್. ಹೊರಟ್ಟಿ ಅವರು ಇಂದು ತಮ್ಮ ಕಚೇರಿಯಲ್ಲಿ ನಡೆದ ರೈತ ಬಂಧುಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ ಕಠಾರಿಯವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಪರಿಹಾರದ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಸೂಚಿಸಿದರು.

ಈ ಸಂದರ್ಭದಲ್ಲಿ ರೈತ ಬಂಧುಗಳು ತಮ್ಮ ಸಮಸ್ಯೆಗಳನ್ನು ಸಭೆಯಲ್ಲಿ ಮುಕ್ತವಾಗಿ ಹಂಚಿಕೊಳ್ಳಲು ಅವಕಾಶವನ್ನು ನೀಡಿದರು.

## ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿ ಸಭೆಗಳು





ದಿನಾಂಕ: 26.02.2024 ಸೋಮವಾರ ಬೆಳಿಗ್ಗೆ ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಧಾನ ಸಭೆ ಕಾರ್ಯಕಲಾಪಗಳ ಸಮಿತಿ ಸಭೆ ನಡೆದ ಸಂದರ್ಭ.







ದಿನಾಂಕ: 28.02.2024 ಬುಧವಾರದಂದು ಬೆಳಿಗ್ಗೆ ಸನ್ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಧಾನ ಸಭೆ ಕಾರ್ಯಕಲಾಪಗಳ ಸಮಿತಿ ಸಭೆ ನಡೆದ ಸಂದರ್ಭ.

## 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ






ದಿನಾಂಕ: 29.02.2024 ರಂದು ವಿಧಾನಸೌಧದ ಮುಂಭಾಗ ಪೂರ್ವದ್ವಾರ ಮೆಟ್ಟಿಲುಗಳ ಮೇಲೆ 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರಂಭವನ್ನು ಮಾನ್ಯ ಸಭಾಪತಿ

ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಘನ ಉಪಸ್ಥಿತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಚಲನಚಿತ್ರ ನಟರು, ಮಾನ್ಯ ಶಾಸಕರು ಭಾಗವಹಿಸಿದ್ದರು.

## ಪ್ರಮಾಣ ವಚನ ಸ್ವೀಕರಿಸಿದ ಮುಖ್ಯ ನ್ಯಾಯಮೂರ್ತಿಗಳಿಗೆ ಅಭಿನಂದನೆ







ದಿನಾಂಕ:25.02.2024 ರಂದು ಬೆಳಗ್ಗೆ 11.00 ಗಂಟೆಗೆ ರಾಜಭವನದಲ್ಲಿ ಕರ್ನಾಟಕದ ಸಿಜೆ ಆಗಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಪ್ರಮಾಣವಚನ ಸ್ವೀಕರಿಸಿದ ಶ್ರೀ ನಿಲಯ ವಿಪಿನ್ ಚಂದ್ರ ಅಂಜಾರಿಯಾ ಅವರನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಅಭಿನಂದಿಸಿದರು.

## ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶದ ಸಮಾರೋಪ ಸಮಾರಂಭ

ದಿನಾಂಕ: 25.02.2024 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಶ್ರೀ ರಣದೀಪ್ ಸಿಂಗ್ ಸುರ್ಜೇವಾಲಾ, ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರು ಹಾಗೂ ಮಾನ್ಯ ಶಾಸಕರುಗಳು ಪಾಲ್ಗೊಂಡಿದ್ದರು.

## ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ವತಿಯಿಂದ ಆಯೋಜಿಸಿದ ವಿಚಾರ ಸಂಕೀರ್ಣ




ದಿನಾಂಕ:23.02.2024 ರಂದು ಪುರಭವನ, ಪುಟ್ಟಣ್ಣಚಟ್ಟಿ ರಸ್ತೆ, ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ವತಿಯಿಂದ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಎದುರಿಸುತ್ತಿರುವ ಸವಾಲುಗಳ ಕುರಿತು ವಿಚಾರ ಸಂಕೀರ್ಣವನ್ನು ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಮತ್ತು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ವಿಶೇಷಾಧಿಕಾರಿ ಶ್ರೀಮತಿ ಶೈಲಾ ಕೆ.ಡಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರು ಪಾಲ್ಗೊಂಡಿದ್ದರು.

## ರಾಜ್ಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆಯ ಸಮಾರೋಪ ಸಮಾರಂಭ








ದಿನಾಂಕ: 05.03.2024 ರಂದು ವಿಕಾಸಸೌಧದಲ್ಲಿ ನಡೆದ 2023–24ನೇ ಸಾಲಿನ ರಾಜ್ಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆಯ ಸಮಾರೋಪ ಸಮಾರಂಭ ಮತ್ತು ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಮತ್ತು ಸನ್ಮಾನ್ಯ ವಿಧಾನ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ರವರು ವಿಜೇತರಿಗೆ ಶುಭಾಶಯ ತಿಳಿಸಿದರು.

## ಸಚಿವಾಲಯದ ವಾಹನ ಚಾಲಕರು ಸನ್ಮಾನ್ಯ ಸಭಾಧ್ಯಕ್ಷರ ಭೇಟಿ



ದಿನಾಂಕ:11.03.2024 ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಶಾಸಕರ ಭವನದ ವಾಹನ ಚಾಲಕರು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿದ ಸಂದರ್ಭ.

## ಬೆಳಗಾವಿಯ ಸುವರ್ಣ ವಿಧಾನ ಸೌಧಕ್ಕೆ ಭೇಟಿ









ದಿನಾಂಕ:19.03.2024ರಂದು ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್ತು ಹಾಗೂ ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಬೆಳಗಾವಿಯ ಸುವರ್ಣ ವಿಧಾನ ಸೌಧಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು ಹಾಗೂ ಈ ಸಂದರ್ಭದಲ್ಲಿ ದಿನಾಂಕ: 04.12.2023 ರಿಂದ 15.12.2023ರವರೆಗೆ ನಡೆದ ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಕಾರ್ಯನಿರ್ವಹಿಸಿ ಅಧಿವೇಶನವು ಯಶಸ್ವಿಯಾಗಿ ನಡೆಯಲು ಶ್ರಮಿಸಿದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಸೇವೆಯನ್ನು ಶ್ಲಾಘಿಸಿ ಅಭಿನಂದಿಸಿದರು.

## ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳ ಸಂಘದವರು ಸನ್ಮಾನ್ಯ ಸಭಾಪತಿಗಳ ಭೇಟಿ





ದಿನಾಂಕ: 15.03.2024 ರಂದು ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳ ಸಂಘದ ನಿಯೋಗ ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರನ್ನು ಭೇಟಿಯಾಗಿ ತಮಗಾಗುವ ಅನ್ಯಾಯ, ತಾರತಮ್ಯದ ಕುರಿತು ಸುದೀರ್ಘವಾಗಿ ನಿಯೋಗದ ಸದಸ್ಯರು ಸಭಾಪತಿಗಳ ಗಮನಕ್ಕೆ ತಂದರು. ಮಾನ್ಯ ಸಭಾಪತಿಗಳು ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರಿಗೆ ದೂರವಾಣಿ ಮೂಲಕ ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರುಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ತಿಳಿಸಿ ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖ್ಯಸ್ಥರಾದ ಜಗದೀಶ್ ದ್ಯಾವಪ್ಪನವರ್ ಸಭಾಪತಿ ಅವರ ವಿಶೇಷ ಕರ್ತವ್ಯಾಧಿಕಾರಿಯಾದ ಡಾ.ಮಹೇಶ್ ವಾಳ್ವೇಕರ್ ಸೇರಿದಂತೆ ಅನೇಕ ಪದಾಧಿಕಾರಿಗಳು ನಿವೃತ್ತ ಉಪನ್ಯಾಸಕರು ಮುಂತಾದವರು ಉಪಸ್ಥಿತರಿದ್ದರು.

## ಪತ್ರಾಗಾರ ಇಲಾಖೆಯ ಚಾರಿತ್ರಿಕ ದಾಖಲೆ ಶಾಖೆಗೆ ಸನ್ಮಾನ್ಯ ಸಭಾಪತಿಗಳು ಅನಿರೀಕ್ಷಿತ ಭೇಟಿ



ವಿಧಾನಸೌಧದ ನೆಲ ಮಹಡಿಯಲ್ಲಿರುವ ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆಯ ಚಾರಿತ್ರಿಕ ದಾಖಲೆಯ ಶಾಖೆಗೆ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲಿಸಿ ಕೆಲ ಮಾಹಿತಿಯನ್ನು ಪಡೆದರು. ಅತ್ಯಂತ ಮಹತ್ವದ ಚಾರಿತ್ರಿಕ ಸಂಗತಿಗಳನ್ನು ಹೊಂದಿದ ದಾಖಲೆಗಳ ಸಂರಕ್ಷಣೆಗೆ ಇನ್ನಷ್ಟು ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು. ಎಲ್ಲಿಯೂ ಮಹತ್ವದ ದಾಖಲೆಗಳು ಹಾನಿಯಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು. ಕೆಲ

ಮಾರ್ಪಾಡುಗಳಿಗೆ ಮಾರ್ಗದರ್ಶನ ಮಾಡಿದ ಸಭಾಪತಿಗಳು ಇಲಾಖೆಗಳ ಇನ್ನುಳಿದ ಕಾರ್ಯಗಳ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಭಾಪತಿ ಅವರ ವಿಶೇಷ ಕರ್ತವ್ಯಾಧಿಕಾರಿಯಾದ ಡಾ.ಮಹೇಶ್ ವಾಳ್ವೇಕರ್ ಸೇರಿದಂತೆ ವಿಧಾನ ಪರಿಷತ್ತಿನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಬೆಳಗಾವಿ ಸುವರ್ಣ ವಿಧಾನಸೌಧದ ನಿರ್ವಹಣೆ ಬಗ್ಗೆ ಪರಿಶೀಲನೆ**







19.03.2024 ರಂದು ಸುವರ್ಣವಿಧಾನ ಸೌಧದ ನಿರ್ವಹಣೆಯಲ್ಲಿ ಈ ಹಿಂದೆ ಕಂಡುಬಂದಿದ್ದ ಕೆಲವೊಂದು ನ್ಯೂನತೆಗಳನ್ನು ಸರಿಪಡಿಸಲು ನೀಡಲಾಗಿರುವ ನಿರ್ದೇಶನಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ವಿಧಾನಪರಿಷತ್‌ನ ಸನ್ಮಾನ್ಯ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಅವರು ಸೂಚನೆ ನೀಡಿದರು. ಮಂಗಳವಾರ (ಮಾರ್ಚ್ 19) ಭೇಟಿ ನೀಡಿದ ವಿಧಾನಪರಿಷತ್ತಿನ ಸಭಾಪತಿ ಹಾಗೂ ವಿಧಾನಸಭೆ ಸಭಾಧ್ಯಕ್ಷರು ಬೆಳಗಾವಿ ಸುವರ್ಣವಿಧಾನಸೌಧದ ನಿರ್ವಹಣೆಯನ್ನು ಪರಿಶೀಲಿಸಿದರು.

ಡಿಸೆಂಬರ್ 2003 ರಲ್ಲಿ ನಡೆದ ವಿಧಾನಮಂಡಲ ಅಧಿವೇಶನದ ಯಶಸ್ವಿಗೆ ವಿವಿಧ ಸಮಿತಿಗಳ ಮುಖ್ಯಸ್ಥರು ಹಾಗೂ ಸದಸ್ಯರುಗಳು ಶ್ರಮಿಸುವ ಮೂಲಕ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಸಭಾಪತಿ ಹೊರಟ್ಟಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾಡಳಿತ ಹಾಗೂ ವಿವಿಧ

ಇಲಾಖೆಯ ಅಧಿಕಾರಿಗಳು ಯಾವುದೇ ಅನಾನುಕೂಲ ಆಗದಂತೆ ಅಧಿವೇಶನವನ್ನು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ನಡೆಸಿದ್ದು, ಅವರೆಲ್ಲರೂ ಅಭಿನಂದನಾರ್ಹರು ಎಂದರು. ಬೆಳಗಾವಿಯಲ್ಲಿ ಪ್ರತಿವರ್ಷ ಅಧಿವೇಶನವು ಇದೇ ರೀತಿ ಯಶಸ್ವಿಯಾಗಿ ನಡೆಯಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ತಿಳಿಸಿದರು. ಕರ್ನಾಟಕ ವಿಧಾನಸಭಾ ಕಾರ್ಯದರ್ಶಿ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ, ವಿಧಾನಪರಿಷತ್ ಕಾರ್ಯದರ್ಶಿ ಶ್ರೀಮತಿ ಮಹಾಲಕ್ಷ್ಮೀ, ಲೋಕೋಪಯೋಗಿ ಇಲಾಖೆಯ ಅಧೀಕ್ಷಕ ಎಂಜಿನಿಯರ್ ಅರುಣ್ ಕುಮಾರ್ ಪಾಟೀಲ ಉಪಸ್ಥಿತರಿದ್ದರು.

## ಹುಬ್ಬಳ್ಳಿಯಲ್ಲಿ ಸನ್ಮಾನ್ಯ ಸಭಾಪತಿಗಳು ವಿಕಲಚೇತನರಿಗೆ ವಾಹನ ವಿತರಣೆ





ಗೌರವಾನ್ವಿತ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಅವರ ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನದ ಅಡಿಯಲ್ಲಿ ವಿಕಲಚೇತನರಿಗೆ ತ್ರಿಚಕ್ರ ವಾಹನವನ್ನು ಬಸವರಾಜ್ ಎಸ್. ಹೊರಟ್ಟಿ ದಂಪತಿಗಳು ಇಂದು ಹುಬ್ಬಳ್ಳಿಯಲ್ಲಿ ವಾಹನ ಕೀಲಿ ನೀಡುವ ಮೂಲಕ ಹಸ್ತಾಂತರಿಸಿದರು.

ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಅವರು ಮಾತನಾಡಿ ತ್ರಿಚಕ್ರ ವಾಹನವನ್ನು ಸದುಪಯೋಗ ಮಾಡಿಕೊಂಡು ಸ್ವಾವಲಂಬಿಗಳಾಗಿ ಸ್ವಾಭಿಮಾನದಿಂದ ಬದುಕಿರಿ ಎಂದು ಹೇಳಿದರು. ನಿಮ್ಮೊಂದಿಗೆ ಸದಾ ನಾನು ಇರುತ್ತೇನೆ. ಯಾವುದಕ್ಕೂ ಚಿಂತಿಸುವ ಅವಶ್ಯಕತೆ ಇಲ್ಲ ಎಂದು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಫಲಾನುಭವಿಗಳಾದ ಎಲ್ಲ ವಿಕಲಚೇತನರು ಬಸವರಾಜ ಹೊರಟ್ಟಿ ದಂಪತಿಗಳನ್ನು ಗೌರವಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಿಕಲಚೇತನ ಇಲಾಖೆಯ ಅಧಿಕಾರಿಗಳು ಇನ್ನಿತರರು ಉಪಸ್ಥಿತರಿದ್ದರು.

## ಕಡಲ ಕೊರೆತ ಬಗ್ಗೆ ಚರ್ಚೆ



ದಿನಾಂಕ:22.03.2024 ರಂದು ಸನ್ಮಾನ್ಯ ಸಭಾಧ್ಯಕ್ಷರು ಕಡಲ ಕೊರೆತ ಇತ್ಯಾದಿಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ಪೌರಾಡಳಿತ ಇಲಾಖೆ ನಿರ್ದೇಶಕರು, ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕರು ಹಾಗೂ ಇತರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂದರ್ಭ.

## 2. ಹೊರಟ್ಟಿಗೆ ಲಿಮ್ಕಾ ದಾಖಲೆ ಗರಿ

ಸಭಾಪತಿ ಬಸವರಾಜ ಹೊರಟ್ಟಿ ಅವರ ಮಡಿಲಿಗೆ ಲಿಮ್ಕಾ ದಾಖಲೆಯ ಗರಿ ಸೇರ್ಪಡೆಯಾಗಿದೆ. ವಿಧಾನ ಪರಿಷತ್ತಿನಲ್ಲಿ ಸತತ 43 ವರ್ಷಗಳಿಂದ ಸೋಲಿಲ್ಲದ ಸರದಾರರಾಗಿ ಪಶ್ಚಿಮ ಶಿಕ್ಷಕರ ಕ್ಷೇತ್ರವನ್ನು ಬಸವರಾಜ ಹೊರಟ್ಟಿ ಪ್ರತಿನಿಧಿಸುತ್ತಿದ್ದಾರೆ. 1970ರಿಂದ 2022ರವರೆಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗುತ್ತಿರುವ ಹೊರಟ್ಟಿ, ಒಟ್ಟು ಎಂಟು ಚುನಾವಣೆಗಳಲ್ಲಿ ಸ್ಪರ್ಧಿಸಿ ಅಜೇಯರಾಗಿದ್ದಾರೆ.

1970ರಲ್ಲಿ ಪಕ್ಷೇತರರಾಗಿ ಚುನಾಯಿತರಾಗಿದ್ದ ಅವರು, 1983 ರಿಂದ ಕಳೆದ ಚುನಾವಣೆಯವರೆಗೆ ಜನತಾ ಪಕ್ಷ, ಜನತಾ ದಳ(ಎಸ್) ಸೇರಿದಂತೆ ಜನತಾ ಪರಿವಾರದಲ್ಲಿದ್ದರು. 2022ರ ಚುನಾವಣೆಯಲ್ಲಿ ಬಿಜೆಪಿ ಸೇರ್ಪಡೆಯಾಗಿ ಆಯ್ಕೆಗೊಂಡಿದ್ದಾರೆ. ಮೇಲ್ಮನೆಯ ಸಭಾಪತಿ ಹೊರಟ್ಟಿಯವರ ಸತತ ಎಂಟು ಗೆಲುವುಗಳು ದೇಶದ ಚುನಾಯಿತ ವ್ಯವಸ್ಥೆಯಲ್ಲಿ ದಾಖಲೆ.

ಲೋಕಸಭೆ ಅಥವಾ ರಾಜ್ಯಸಭೆ ಇಲ್ಲವೇ ಯಾವುದೇ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ 43 ವರ್ಷ 201 ದಿನಗಳಿಂದ ಸೋಲಿಲ್ಲದೇ ಸದಸ್ಯರಾಗಿರುವ ಭಾರತದ ಏಕೈಕ ರಾಜಕಾರಣಿ ಹೊರಟ್ಟಿ. ಇಷ್ಟೊಂದು ಸುದೀರ್ಘ ಚುನಾವಣಾ ರಾಜಕಾರಣವನ್ನು ದೇಶದ ಇತಿಹಾಸದಲ್ಲಿ ಮತ್ತೊಬ್ಬರು ಮಾಡಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಭಾರತೀಯರು ಮಾಡುವ ವಿಶ್ವ ಮಟ್ಟದ ದಾಖಲೆಯನ್ನು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಪುಸ್ತಕ ಪ್ರತಿ ವರ್ಷದ ದಾಖಲಿಸಿ ಬಿಡುಗಡೆ ಮಾಡುತ್ತದೆ. ಪ್ರಸಕ್ತ ವರ್ಷದ ಪುಸ್ತಕವನ್ನು ಈಗ ಸಂಸ್ಥೆ ಬಿಡುಗಡೆ ಮಾಡಿದೆ.

ಬಸವರಾಜ ಹೊರಟ್ಟಿ ಅವರ ಈ ಸಾಧನೆ ಈಗಾಗಲೇ ಲಂಡನ್‌ನ್ನಿನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದೆ(2022) ಸಭಾಪತಿಗಳ ಈ ದೀರ್ಘ ಯಾನದ ಅಂಕಿಸಂಖ್ಯೆಗಳು ಭಾರತದ

ಚುನಾವಣಾ ಆಯೋಗದಲ್ಲಿ ದಾಖಲೀಕರಣಗೊಂಡು ಗೆಜೆಟ್‌ನಲ್ಲಿ ಪ್ರಕಟವಾಗಿದೆ. ಸಿಕ್ಕಿಂ ಮಾಜಿ ಮುಖ್ಯಮಂತ್ರಿ ಪವನಕುಮಾರ್ ಸಿಎಂ ಆಗಿ 24 ವರ್ಷ 165 ದಿನ ಆಡಳಿತ ನಡೆಸಿ, ಪಶ್ಚಿಮ ಬಂಗಾಳದ ಮಾಜಿ ಸಿಎಂ ಜ್ಯೋತಿ ಬಸು ಅವರ 23 ವರ್ಷ 137 ದಿನಗಳ ದಾಖಲೆಯನ್ನು ಅಳಿಸಿರುವುದನ್ನು ಕೂಡ ಈ ಬಾರಿಯ ಲಿಮ್ಕಾ ದಾಖಲೆ ಪುಸ್ತಕದಲ್ಲಿ ನಮೂದಿಸಲಾಗಿದೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 25.01.2024.

## 3. 'SCHOOL OF GOVERNANCE NEEDED TO TRAIN YOUNG MLAs ACROSS IDEOLOGIES DEBATE ISSUES'

Karnataka Assembly Speaker UT Khader is of the view that young MLAs need to participate more in healthy debates in the House, irrespective of which party or ideology they belong to. And for that, they need to be trained through a School of Governance. He also feels that although there should be no compromise with the Vidhana Soudha security people should be inside. Without people, there is no Vidhana Soudha and we must allow them," the Speaker told *The New Sunday Express* editors and staff during an interaction. Excerpts.

**You have been an active politician, and all of a sudden, you were made Speaker of the Assembly. How do you look at it**?

Initially, it was difficult. Before entering politics, I was a student leader. I have always been among people. When they offered me the Speaker's post, my condition was I should not be stopped from being among people. When my people learnt that I was made Speaker, they started hesitating to come near me. But I visited my constituency the next day, to make them feel that I was still there.

**A Workshop was conducted for the first time MLAs after you took over as speaker: how useful was it**?

As a Speaker; it was my duty to train the new MLAs. How many people take this forward is left to them. But I am seeing many of them confidently taking part in discussions during the proceedings in Assembly. Many first-time MLAs wanted to speak, but were hesitant. Even I faced the same issue, but I took MLA Dhruvanaryana's help, he used to guide me. Giving training or guidance will change them. Youngsters have knowledge an good suggestions can come from them. If we do not listen to them, it is a loss to the state. Now with the budget session ahead, I am planning one-day of training for them to discuss the budget.

**Junior MLAs learn from their seniors, but many seniors behave unruly in the house , what do you have to say**?

In the House, there are many well-mannered and some lazy MLAs too. As a student and fresher to the house, we have to look up to the good ones. That is the reason, we should start a School of Governance to train young leaders. Let them have their ideology, but proper training will make them successful. There is no institute to train political leaders. We will

start such an institute at the earliest. It will be a one-year course, including six months of theory and the remaining six months, they can work with leaders to get hands-on experience. They can contest and polls-right from Panchayat to Parliament. We will start such an institute in my constituency.

**You suspended ten MLAs of the BJP**...

Yes, it has sent a message. The fear will be there. There should be arguments, discussions and protests, which are part of democracy. But we need to put a full stop to tearing papers and copies of the bills. Even if the ruling party members had done this, I would have suspended them.

**How do you respond to criticism on inviting religious leaders to give lectures to new MLAs during the workshop**?

People question everything. History does not remember those who questioned, but remembers those who did the work. The new MLAs who were there for training represented all ideologies. If any speaker comes there, they will give good messages. I had invited Veerendra Heggade of Dharmasthala. He was the one who gave place for training. He is a great man who has done a wonderful job for the state and the country. He is also a Rajya Sabha member (nominated by BJP). If he is coming to talk to 70 MLAs, it is an honour for us. Why should we have enmity against anyone?

**What do you have to say about communal tension in coastal Karnataka?**

The right-wing ideology is over 100 years old. So is the Congress. In the coastal belt , it is not because of hatred, but due to fear. This should go.When you see the coastal belt from far, it looks different. But it is one of the best places where people live in harmony.

**As a Speaker what are the changes you want to see in the House**?

I wish to keep Vidhana Soudha, which is visited by thousands of people every day, clean and have given instructions, Also, I wish to start the assembly at 9am, instead of starting it after 11.30 am as in no time we adjourn for lunch and the discussions get postponed to late evening when the MLAs who come prepared lose interest and go out. MLAs should actively take part in the assembly and that is why he is elected. This will happen if he is given an opportunity. So I wish to start the session early by 9 am, which I feel will be productive.

**We see that many government officials who are supposed to take part in the session do not attend. Will you send instruction to them**?

The efficiency of the government and its performance directly depends on the active participation of government officials. Officers should have the fear of the government. If the Chief Minister and other Minister can attend, then what is stopping the officials from attending? If they do not attend,we will ask the government to take action against such officials.

**There was a proposal to digitise government documents. What is the status**?

Yes that proposal is there, and we do not wish to rush because some of the states which went ahead with the digitisation of documents are not able to practically use it. Each state has its own rules. Some states are bicameral, while others are not. We do not want to do this in a hurry just because the Union government is supporting this digitisation intiative with funds.

**What is the status of security arrangements in the House, as we saw a person enter the assembly, while we see common people waiting to enter Vidhana Soudha**?

We are taking steps to avoid such instances of security breaches. We are checking advanced security models that will be monitored by the police department. Also, security doesn't mean we should keep people away from Vidhana Soudha. Without people, there is no Vidhana Soudha. We must allow them. Just that we should have the data of all those who enter and exit and monitor them. Common people across the state visit Vidhana Soudha for various reasons. They come early in the morning and collect the visitor slips. As the current system allows them to enter only after 3 pm. They are made to wait. With all the security system, why can't common people be allowed inside Vidhana Soudha? This needs coordination by different departments, and the government has to bring in a system for this.

**Should anti-difection law need any amendments? What is your suggestion**?

There were many amendments made to the anti-defection law.However, a way is found to evade it. Earlier, politicians listened to their consciousness and maintained sanctity, which is not there anymore. In my opinion, if we have to stop politicians from hopping, the one who gets elected from a party and defecting to another, his (or her) membership should be cancelled and (that member) should not be allowed to contest elections for a few years.

**What is your opinion on women's reservation in the assembly**?

No country can go forward without considering the women, who are fifty per cent of the population. They have to be involved in every system. I welcome women's reservations in the Assembly. In the future, more women will be part of the cabinet. In terms of women's reservations, we are much ahead of other countries.

**Do you agree that in Assembly, the discussion on bills and important subjects do not get prominence and the quality of debates has come down**?

Yes, Sometimes good discussion takes place. But unfortunately, such issues get reported. There is a feeling among representatives that only if they do some 'drama', it will be highlighted. They think a good discussion for an hour will not get prominence whereas an unwanted thing can be a box item on paper. There was an incident where a leader removed his shirt saying the media will report it.

**Students also come to see the proceedings**..

In Belagavi we have a record that about 20,000 students had witnessed the session. In Bengaluru, we will make the provision. Anyone who wants to attend the session can contact our office. We want to tell you that for student who are inconvenienced, like waiting since 8

am to watch the session, seating arrangements will be made. I have asked officials to put carpet at a banquet hall. We want every section of society to be a part of Vidhana Soudha. I want pourkarmikas, farmers, daily wage workers, transgenders and others to come to Vidhana Soudha. Seats will be reserved accordingly. Every society will be involved this time during the session.

**Any suggestion that you have received so that the conduct is improved during the session?**

Whatever I suggest and say is the reflection of suggestions given by the people. People suggested cleanliness in Vidhana Soudha. I am implementing the things which are suggested by people. Even when I was a minister, most of the work I did was based on the good suggestions given by people. The government schemes that were implemented when I was a minister were the suggestions of people, and no government officials were involved at that time.

**There is a general perception that bills that are discussed or passed are not understood by the MLAs. Secondly, do discussions on the same not take place in the House?**

Many times the discussions get deviated and when someone gets a chance, they do not discuss. When I was an MLA, I wanted to participate in the debate on Bills. But when the copies of the Bills are given, most of the time we will not be able to understand them, when you read the bill, you will never be able to understand it. Officers will only tell good things about it as they are the ones who prepare the bills. Then we will have to talk to people concerned who are likely to be impacted by the bill to know their impact. Based on their suggestions, we will then have to come back and discuss. Most of the time first-time MLAs and a few others who do not understand, will not debate. Hence, I decided that only three days after tabling it, the bill would be taken up for discussion. We have deputed an officer in my office to explain the pros and cons of bills tabled in the house, but unfortunately, not even one MLA has consulted the officer. To motivate MLAs to participate in the discussion, we wanted to make a committee to give awards to MLAs performing better during sessions.

**Do you think bills need to be simplified**?

Yes, I would suggest, even if they cannot simplify the bills, let them give a detailed summary explaining it. Since only four to five subjects will be in the bill, it will not be difficult to make summary. This will help in better participation in the assembly. I will suggest this.

**Balabrooie's Guest House will be converted into a legislators's club...**

MLAs come from far away, they come to Vidhana Soudha and after work, they don't have a place to sit. Ruling party MLAs will come and sit in the minister 's office for some time, but where will the opposition MLAs go? If four or five MLAs have to discuss, they don't have a place. Legislature House is for the public, MLAs cannot sit and discuss there. If there is a Legislature Club, MLAs coming from far away can stay, relax, play sports, and read. We have decided to make a Legislature Institute where MLAs can conduct

conferences. There will be a Lounge for women. Balabroorie is a historical and prestigious place. In the last 15 years we do not know who sits there, or how it is being used. Painting and cleaning were not done, and some items were simply dumped. Who came here, no one knew. Now, when we take it up, there will be security for the building. Strictly no damage or major modification work will be done on the building and there will be accountability.

**What is the challenge as a Speaker before you?**

My challenge and duty is to ensure healthy discussion takes place and maximum time is devoted to good debates. My primary duty is to give confidence to opposition MLAs as they will feel inferior for not being in power I don't call them 'ruling' and 'opposition' MLAs as they will feel inferior for not being in power I don't call them 'ruling' and 'opposition' MLAs. I would like to call them 'Majority' and 'Minority' and I am with the 'Minority MLAs' (the opposition).

Courtesy: Indian Express, dated: 04.02.2024.

## 4. ಕರ್ನಾಟಕ ಸರ್ಕಾರದ ಲಾಂಛನಕ್ಕೆ ವಿಶೇಷ ಮನ್ನಣೆ

ಗಂಡಭೇರುಂಡ ಚಿತ್ರಕ್ಕೆ ನಮ್ಮಲ್ಲಿ ವಿಶೇಷ ಸ್ಥಾನವಿದೆ. ಪ್ರಾಚೀನಕಾಲದಿಂದಲೂ ಪ್ರಭುತ್ವದ ಲಾಂಛನವಾಗಿ ರಾಜ್ಯವನ್ನಾಳಿದ ಹಲವು ರಾಜವಂಶಗಳಲ್ಲಿ ಪ್ರಚಲಿತವಾಗಿದ್ದ ಗಂಡಭೇರುಂಡ ಶಕ್ತಿಯ ಪರಾಕಾಷ್ಠೆಯ ಚಿಹ್ನೆಯೂ ಹೌದು. ಇಂದಿಗೂ ಕರ್ನಾಟಕ ಸರ್ಕಾರದ ಅಧಿಕೃತ ಲಾಂಛನವಾಗಿರುವ ಇದಕ್ಕೆ ಸಚಿವಾಲಯದಲ್ಲಿ ವಿಶೇಷ ಸ್ಥಾನ ಕಲ್ಪಿಸಲಾಗುತ್ತಿದ್ದು, ಇದೇ ಮೊದಲ ಬಾರಿಗೆ ಉಭಯ ಸದನಗಳ ಸದಸ್ಯರಿಗೆ ಲಾಂಛನದ ಅಧಿಕೃತ ಸ್ಟಿಕ್ಕರ್ (ನ್ಯಾಪಲ್) ಸಿಗಲಿದೆ.

ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರ ವಿಶೇಷ ಆಸಕ್ತಿ ಮತ್ತು ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಅವರ ಒತ್ತಾಸೆ ಕಾರಣಕ್ಕೆ ಗಂಡಭೇರುಂಡ ಶಕ್ತಿಸೌಧದ ಆವರಣದಲ್ಲೂ ಸದ್ದು ಮಾಡುತ್ತಿದೆ. ಈಗಾಗಲೇ ವಿಧಾನಸೌಧ ಮುಂಭಾಗದಲ್ಲಿ ಪುಷ್ಪಾಲಂಕೃತ ಗಂಡಭೇರುಂಡ ಲಾಂಛನ ಕಣ್ಮನ ಸೆಳೆಯುತ್ತಿದೆ. ಇದೀಗ ಅಧಿಕೃತ ಚಿಹ್ನೆಗೆ ಇನ್ನಷ್ಟು ಮಹತ್ವದ ಸ್ಥಾನ ಕಲ್ಪಿಸುವ ನಿಟ್ಟಿನಲ್ಲಿ ಕೆಂಗಲ್ ಹನುಮಂತಯ್ಯ ಪ್ರತಿಮೆ ಇರುವ ಪಶ್ಚಿಮದ್ವಾರದ ಪ್ರವೇಶದ ಬಾಗಿಲು ಸಹಿತ ಎರಡು ಕಡೆಗಳಲ್ಲಿ ಗಂಡಭೇರುಂಡ ಬೃಹತ್ ವಿನ್ಯಾಸ ರಾರಾಜಿಸಲಿದೆ.

ಎರಡೂ ಸದನಗಳ ಪ್ರತಿಯೊಬ್ಬ ಸದಸ್ಯರಿಗೂ ಗಂಡಭೇರುಂಡ ಲಾಂಛನವಿರುವ ತಾಮ್ರದ ಸ್ಟಿಕ್ಕರ್‌ಗಳನ್ನು ಅಧಿವೇಶನದ ಸಂದರ್ಭದಲ್ಲಿ ಧರಿಸುವಂತೆ ಮಾಡುವ ಪ್ರಕ್ರಿಯೆಯೂ ಚಾಲನೆಯಲ್ಲಿದೆ. ಇತ್ತೀಚೆಗೆ ತಾನೂ ಶಾಸಕ ಎಂದು ಹೇಳಿಕೊಂಡು ವ್ಯಕ್ತಿಯೊಬ್ಬರು ವಿಧಾನಸಭೆ ಕಲಾಪ ಪ್ರವೇಶಿಸಿದ್ದ ಹಿನ್ನೆಲೆಯಲ್ಲಿ ಶಾಸಕರಿಗೆ ಅಧಿಕೃತ ಗುರುತಾಗಿ ಗಂಡಭೇರುಂಡ ಲಾಂಛನವನ್ನೇ ಧರಿಸುವ ಕುರಿತೂ ಕ್ರಮ ವಹಿಸಲಾಗುತ್ತಿದೆ. ಆಸ್ಟ್ರೇಲಿಯಾ ಸೇರಿದಂತೆ ಕೆಲವು ರಾಷ್ಟ್ರಗಳಲ್ಲಿ ಜನಪ್ರತಿನಿಧಿಗಳು ಬಳಸುತ್ತಿರುವಂತೆ ರಾಜ್ಯದಲ್ಲೂ ಅನುಷ್ಠಾನಗೊಳಿಸಲು ಸಭಾಧ್ಯಕ್ಷರು ಆಸಕ್ತಿ ವಹಿಸಿದ್ದಾರೆ. ಸುಮಾರು 15ಲಕ್ಷ ರೂ ವೆಚ್ಚದಲ್ಲಿ ಈ ಎಲ್ಲ ಯೋಜನೆಗಳು ಸಾಕಾರವಾಗುತ್ತಿವೆ.

ಇದಷ್ಟೇ ಅಲ್ಲದೆ ಉಭಯ ಸದನಗಳಲ್ಲಿ ಗಂಡಭೇರುಂಡ ಚಿಹ್ನೆಯನ್ನು ಒಳಗೊಂಡಿರುವ ಆರು ದೊಡ್ಡ ಗೋಡೆ ಗಡಿಯಾರಗಳನ್ನು ಅಳವಡಿಸುವ ಪ್ರಯತ್ನವೂ ನಡೆದಿದೆ. ಇದು ಸದಸ್ಯರ ಸಮಯಪಾಲನೆಯನ್ನು ಎಚ್ಚರಿಸುವುದರೊಂದಿಗೆ ಪ್ರತಿಷ್ಠಿತ ಲಾಂಛನಕ್ಕೂ ವಿಶೇಷ ಗೌರವ

ಸಿಕ್ಕಿದಂತಾಗಲಿದೆ. ಸಭಾಧ್ಯಕ್ಷರ ಮತ್ತು ಸಭಾಪತಿಗಳ ಪೀಠದ ಎರಡೂ ಬದಿಯಲ್ಲು ಸಂವಿಧಾನದ ಪೀಠಿಕೆ ಅಳವಡಿಕೆಯಾಗಿದೆ ಫೆಬ್ರವರಿ 12ರಿಂದ ನಡೆಯಲಿರುವ ಮುಂಗಡಪತ್ರ ಅಧಿವೇಶನದಲ್ಲಿ ಮೊದಲ ಬಾರಿಗೆ ಪ್ರದರ್ಶನವಾಗಲಿದೆ.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ: 05.02.2024.

## 5. ಸ್ಪೀಕರ್‌ರಿಂದ ಹರಕೆ ಕೋಲ ಸಮರ್ಪಣೆ

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಮ್ಮ ಹರಕೆಯ ಕೋಲವನ್ನು ಕಾರ್ಣಿಕ ಶ್ರೀ ಕ್ಷೇತ್ರ ಬಂಟ್ವಾಳದ ಪನೋಲಿ ಬೈಲ್‌ನಲ್ಲಿ ಕಲ್ಲುರ್ಟಿ ಕಲ್ಕುಡ ದೈವಗಳಿಗೆ ದಿನಾಂಕ: 06.02.2024 ರಂದು ಸಲ್ಲಿಸಿದ್ದಾರೆ.

ಹರಕೆ ಕೋಲದಲ್ಲಿ ವಿಧಾನಸಭಾಧ್ಯಕ್ಷರು ಭಾಗವಹಿಸಿ ಕಾರ್ಣಿಕ ದೈವಗಳಾದ ಕಲ್ಲುರ್ಟಿ ಕಲ್ಕುಡ ದೈವಗಳ ಆಶೀರ್ವಾದ ಪಡೆದರು. ಸಂಪ್ರದಾಯಬದ್ಧವಾಗಿ ಕೋಲ ನೆರವೇರಿಸಿ ಕಲ್ಲುರ್ಟಿ–ಕಲ್ಕುಡ ದೈವಗಳ ಆಶೀವಾದ ಪಡೆದಿದ್ದಾರೆ.

ಹರಕೆ ಕೋಲದಲ್ಲಿ ಭಾಗಿಯಾದ ಖಾದರ್ ವಿರುದ್ಧ ಮುಸ್ಲಿಂ ಧಾರ್ಮಿಕ ಮುಖಂಡ ಸಾಲೆತ್ತೂರು ಫೈಝಿ ಆಕ್ಷೇಪ ವ್ಯಕ್ತಪಡಿಸಿ ಸಾಮಾಜಿಕ ಜಾಲತಾಣದಲ್ಲಿ ಅವರ ವಿರುದ್ಧ ಬರೆದಿದ್ದರು. ಕೊರಗಜ್ಜನ ಭಕ್ತ ಯು.ಟಿ.ಖಾದರ್‌ನನ್ನು ಮುಸ್ಲಿಮರು ಬರೇ ರಾಜಕಾರಣಿಯಾಗಿ ಕಂಡರೆ ಸಾಕು. ಧಾರ್ಮಿಕ ಮುಖಂಡರಾಗಿ ಕಾಣುವುದು ಬೇಡ. ಉಲೆಮಾ, ಸಾತ್ವಿಕರು ತುಂಬಿದ ಧಾರ್ಮಿಕ ವೇದಿಕೆಗೆ ಮುಸ್ಲಿಂ ನಾಯಕನಾಗಿ ಹತ್ತಿಸುವುದು ತರವಲ್ಲ ಎಂದು ಬರೆದುಕೊಂಡಿದ್ದಾರೆ.

ಖಾದರ್ ಕೊರಗಜ್ಜನಿಗೂ, ಕಲ್ಲುರ್ಟಿ, ಪಂಜುರ್ಲಿಗೂ ಆರಾಧಿಸಲಿ. ಪ್ರಸಾದ ಪಡೆದು ತಲೆಗೆ ಮೆತ್ತಿಕೊಂಡು ನರಕಕ್ಕೆ ಹೋಗಲಿ, ಅದು ಆತನ ವೈಯಕ್ತಿಕ ಸ್ವತಂತ್ರ. ಅದನ್ನು ತಡೆಯುವ ಹಕ್ಕು ನನಗಿಲ್ಲ. ಉಲಮಾಗಳು ಅವನಿಗೆ ಗೌರವ ಕೊಡುವುದು ಮುಸ್ಲಿಂ ಸಮುದಾಯಕ್ಕೆ ಕೆಟ್ಟ ಸಂದೇಶವಾಗಿ ಪರಿಣಮಿಸುತ್ತದೆ ಎಂದಿದ್ದಾರೆ. ತಿರುಗೇಟು: ಈ ಕುರಿತು ಪ್ರತಿಕ್ರಿಯಿಸಿರುವ ಯು.ಟಿ.ಖಾದರ್, ಸಾಮಾಜಿಕ ಜಾಲತಾಣಗಳಲ್ಲಿ ಗೀಚುವವರನ್ನು ಇತಿಹಾಸ ನೆನಪಿಟ್ಟುಕೊಳ್ಳಲ್ಲ. ಪ್ರಶ್ನೆ ಕೇಳುವವರನ್ನು ಇತಿಹಾಸ ನೆನಪಿಗೆ ಇಟ್ಟುಕೊಳ್ಳಲ್ಲ. ಯಾರು ಕೆಲಸ ಮಾಡ್ತಾರೆ, ಯಾರು ಉತ್ತರ ಕೊಡ್ತಾರೆ ಅವರನ್ನು ಇತಿಹಾಸ ನೆನಪಿಟ್ಟುಕೊಳ್ಳುತ್ತೆ. ನಮ್ಮ ಪ್ರಾಚೀನ ಆಚರಣೆ ಅನುಗುಣವಾಗಿ ಅವರು ಹರಕೆ ಇಟ್ಟುಕೊಂಡಿದ್ದರು. ಅದಕ್ಕೆ ಹೋಗುವುದು ಗೌರವ ಕೊಡುವುದು, ನಮ್ಮ ಸಂಸ್ಕೃತಿ. ಹೀಗಾಗಿ ನಾನು ಹೋಗಿದ್ದೆ. ಯಾರೋ ಒಬ್ಬ ಗೀಚಿದರೆ, ನೂರು ಜನ ಒಪ್ಪಿಕೊಳ್ಳಲ್ಲ. ಅದಕ್ಕೆಲ್ಲ ನಾವು ಮಹತ್ವ ಕೊಡಬಾರದು ಎಂದಿದ್ದಾರೆ.

**ಆಧಾರ:**ಸಂಯುಕ್ತ ಕರ್ನಾಟಕ, ದಿನಾಂಕ:06.02.2024.

## 6. ಜನರಿಗೆ ನ್ಯಾಯ ಮುಖ್ಯ

ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ಜನರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಇದು ನಮ್ಮ ಸಂವಿಧಾನದ ಮೂಲ ಆಶಯವಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅಭಿಪ್ರಾಯ ವ್ಯಕ್ತಪಡಿಸಿದರು.

ದಿನಾಂಕ:07.02.2024 ರಂದು ಯರಮರಸ್ ಸರ್ಕ್ಯೂಟ್ ಹೌಸ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಸಭಾಧ್ಯಕ್ಷ ಹುದ್ದೆಯಲ್ಲಿದ್ದೇನೆ. ಎಲ್ಲ ಶಾಸಕರನ್ನು ಸಮಾನತೆಯಿಂದ ಕಾಣುವುದು, ಸದನವನ್ನು ಸಮರ್ಪಕ ಚರ್ಚೆಗೆ ಅನುಗುಣವಾಗಿ ಒಳ್ಳೆಯ ಕಾನೂನು ಯೋಜನೆಗಳನ್ನು ರೂಪಿಸಿ, ಉತ್ತಮ ವಾತಾವರಣ ನಿರ್ಮಾಣ ಮಾಡುವುದು ನನ್ನ ಕರ್ತವ್ಯವಾಗಿದೆ. ನಾನು ಸಭಾಧ್ಯಕ್ಷನಾಗಿದ್ದೇನೆ ಉಳಿದಂತೆ ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಎರಡೂ ಒಂದೇ ಎಂದು ವಿವರಿಸಿದರು. ಬಜೆಟ್ ಪೂರ್ವದಲ್ಲಿ ಮಾಹಿತಿ ನೀಡುವುದಕ್ಕಾಗಿ ಎಲ್ಲ ಶಾಸಕರಿಗೆ ದಿನಾಂಕ: 09.02.2024ರಂದು ಬೆಂಗಳೂರಿನ ಹೋಟೆಲ್ ಕ್ಯಾಪಿಟಲ್‌ನಲ್ಲಿ ಒಂದು ದಿನದ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗಿದೆ ಎಂದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ: 08.02.2024.

## 7. ಜನಪ್ರತಿನಿಧಿ, ಮಾಧ್ಯಮ ಒಗ್ಗೂಡಿ ಕೆಲಸ ಮಾಡ್ಬೇಕು: ಸ್ಪೀಕರ್

ಜನಪ್ರತಿನಿಧಿಗಳು ಹಾಗೂ ಮಾಧ್ಯಮದವರು ಸಂಪರ್ಕದಲ್ಲಿದ್ದಾಗ ಮಾತ್ರ ತಮ್ಮತಮ್ಮ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ಸಾಧ್ಯ ಎಂದು ಸ್ಪೀಕರ್ ಯು.ಟಿ.ಖಾದರ್ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಧಾನಮಂಡಲ ತರಬೇತಿ ಸಂಸ್ಥೆಯಿಂದ ಬಜೆಟ್ ಬಗ್ಗೆ ಶಾಸಕರಿಗೆ ಹಾಗೂ ವರದಿಗಾರಿಕೆ ಕುರಿತು ಮಾಧ್ಯಮದವರಿಗೆ ದಿನಾಂಕ: 09.02.2024ರಂದು ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಜನಪ್ರತಿನಿಧಿಗಳು ಹಾಗೂ ಮಾಧ್ಯಮದವರು ಒಟ್ಟಾಗಿ ಕೆಲಸ ಮಾಡಬೇಕು. ಆ ಮೂಲಕ ತಮ್ಮತಮ್ಮ ಕ್ಷೇತ್ರದಲ್ಲಿ ಬದಲಾವಣೆ ತರಲು ಸಾಧ್ಯ. ಅಲ್ಲದೆ, ಎರಡೂ ಕ್ಷೇತ್ರದಲ್ಲಿರುವವರು ತಮ್ಮ ಕ್ಷೇತ್ರದಲ್ಲಿ ಏಳಿಗೆಗೆ ಉತ್ತಮ ಸಂಪರ್ಕ ಹೊಂದಿರುವ ಅಗತ್ಯವಿದೆ. ಅದರಲ್ಲೂ ಮಾಧ್ಯಮದವರೊಂದಿಗಿನ ಬಾಂಧವ್ಯ ಶಾಸಕರ ಭವಿಷ್ಯಕ್ಕೆ ಅನುಕೂಲವಾಗಲಿದೆ. ಅದರ ಜತೆಗೆ ಎರಡೂ ಕ್ಷೇತ್ರದಲ್ಲಿರುವವರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು ಎಂದರು.

ಶಾಸಕರು ಬಜೆಟ್ ಅಧಿವೇಶನದಲ್ಲಿ ಭಾಗವಹಿಸುವುದು ಅಗತ್ಯ. ಆದರಿಂದ ರಾಜ್ಯದ ಆರ್ಥಿಕ ಸ್ಥಿತಿಗತಿ ತಿಳಿಯುವುದರ ಜತೆಗೆ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಲಿದೆ. ಅದರಿಂದ ಅಧಿಕಾರಿಗಳು ಹಾಗೂ ಸಚಿವರೊಂದಿಗೆ ಕ್ಷೇತ್ರದ ಅಭಿವೃದ್ಧಿ, ಅನುದಾನ ಪಡೆಯಲು ಮಾರ್ಗ ದೊರೆಯಲಿದೆ ಎಂದರು.

ಸಭಾಪತಿ ಬಸವರಾಜಹೊರಟ್ಟಿ ಮಾತನಾಡಿ ಹಿಂದೆಲ್ಲ ಶಾಸಕರು ಶಾಲಾ ಮಕ್ಕಳಂತೆ ಶಿಸ್ತಿನಿಂದ ಸದನಕ್ಕೆ ಹಾಜರಾಗುತ್ತಿದ್ದರು. ಆದರೀಗ, ಸಾಕಷ್ಟು ಬದಲಾವಣೆಯಾಗಿದೆ. ಶಾಸಕರು ಕಲಾಪಕ್ಕೆ ಹಾಜರಾಗುವುದಕ್ಕೂ ಮುನ್ನ ಆ ದಿನದ ಅಜೆಂಡಾವನ್ನು ಗಮನಿಸಬೇಕು. ಆದರಿಂದ ಕಾರ್ಯಕಲಾಪಗಳ ಬಗ್ಗೆ ಮಾಹಿತಿ ತಿಳಿಯುತ್ತದೆ. ಪ್ರಶ್ನೆಗಳನ್ನು ಕೇಳುವುದು ನಿಯಮಗಳ ಮೇಲೆ ಚರ್ಚೆ ನಡೆಸುವುದು ಸುಲಭವಾಗಲಿದೆ. ಒಮ್ಮೆ ಕಲಾಪಕ್ಕೆ ಹಾಜರಾದ ನಂತರ ಅದು ಪೂರ್ಣಗೊಳ್ಳುವವರೆಗೆ ಇರುವುದನ್ನು ಎಲ್ಲರೂ ಕಲಿಯಬೇಕು ಎಂದು ಕಿವಿಮಾತು ಹೇಳಿದರು.

ಏಷ್ಯಾನೆಟ್ ಸುವರ್ಣ ನ್ಯೂಸ್ ಹಾಗೂ ಕನ್ನಡಪ್ರಭದ ಪ್ರಧಾನ ಸಂಪಾಕ ರವಿ ಹೆಗಡೆ ಅವರು ಮಾತನಾಡಿ, ಬಜೆಟ್ ಕುರಿತ ತರಬೇತಿಗೆ ಹೆಚ್ಚಿನ ಶಾಸಕರು ಹಾಜರಾಗದಿರುವುದು ಕಳವಳಕಾರಿ ಸಂಗತಿ. ಅದೇ ಪಕ್ಷದ ಕಾರ್ಯಕ್ರಮ ಪ್ರತಿಭಟನೆಗಳೆಂದರೆ ಎಲ್ಲ ಶಾಸಕರೂ ಬರುತ್ತಾರೆ. ಅದರ ಜತೆಗೆ ಈ ರೀತಿಯ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವುದು ಬಹಳ ಮುಖ್ಯ. ಬಜೆಟ್ ಎಂಬುದು ಕೇವಲ ಯೋಜನೆಗಳ ಘೋಷಣೆಯಲ್ಲ. ಅದರಲ್ಲಿ ರಾಜ್ಯದ ಬೆಳವಣಿಗೆಗೆ ಗುರಿಗಳ ಅಂಶವಿರುತ್ತದೆ. ಅದನ್ನು ಶಾಸಕರು ಗಮನಿಸಬೇಕು ಎಂದರು.

ಶಾಸಕರು ಹಾಗೂ ಮಾಧ್ಯಮದವರಿಗೆ ಈ ರೀತಿಯ ತರಬೇತಿ ಕಾರ್ಯಕ್ರಮಗಳು ಪ್ರತಿ ಆರು ತಿಂಗಳಿಗೊಮ್ಮೆ ನಡೆಯಬೇಕು. ವಿಷಯ ತಜ್ಞರಿಂದ ತರಬೇತಿಯನ್ನು ಕೊಡಿಸಬೇಕು. ಅಲ್ಲದೆ, ಪತ್ರಿಕೋದ್ಯಮ ಕೋರ್ಸ್‌ನಲ್ಲಿ ಅಧಿವೇಶನದ ಕುರಿತಂತೆ ಪಾಠ ಸೇರ್ಪಡೆಗೆ ಸರ್ಕಾರ ಮುಂದಾಗಬೇಕು. ಅದರಿಂದ ಭವಿಷ್ಯದ ಪತ್ರಕರ್ತರಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಆಧಾರ: ಕನ್ನಡ ಪ್ರಭ, ದಿನಾಂಕ:10.02.2024.

## 8. ಶಾಸಕರು ನೀತಿ ನಿರೂಪಣೆಯಲ್ಲಿ ಸಕ್ರಿಯರಾಗಿ: ಸ್ಪೀಕರ್

ಶಾಸಕರು ತಮ್ಮ ತಮ್ಮ ಕ್ಷೇತ್ರ ರಸ್ತೆ, ಸೇತುವೆಗಳಿಗೆ ಸೀಮಿತವಾದ ನೀತಿ ನಿರೂಪಣೆ, ಶಾಸನ ರಚನೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ಸಲಹೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ವಿಧಾನ ಮಂಡಲ ತರಬೇತಿ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿದ್ದ ವಿಧಾನ ಸಭೆಯ ಸದಸ್ಯರಿಗೆ ಆಯವ್ಯಯದ ಕುರಿತು ಹಾಗೂ ಮಾಧ್ಯಮದವರಿಗೆ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಸಕರು ವಿವಿಧ ವಿಷಯಗಳ ಬಗ್ಗೆ ವಿಧಾನ ಮಂಡಲದ ಕಲಾಪಗಳ ಬಗ್ಗೆ ಅಧಿಕಾರಿಗಳು, ಹಿರಿಯ ಶಾಸಕರ ಜತೆ ಚರ್ಚೆ ಮಾಡಿ ಹೆಚ್ಚು ಹೆಚ್ಚು ಮಾಹಿತಿ ಸಂಗ್ರಹಿಸಿಕೊಳ್ಳಬೇಕು. ಅವಕಾಶ ಸಿಕ್ಕಾಗ ಆಕರ್ಷಕವಾಗಿ ತಮ್ಮ ವಿಚಾರ ಮಂಡನೆ ಮಾಡಲು ಪ್ರಯತ್ನಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಬೆರಳೆಣಿಕೆಯ ಶಾಸಕರಷ್ಟೆ ಪಾಲ್ಗೊಂಡಿದ್ದ ಹಿನ್ನೆಲೆಯಲ್ಲಿ ಪರೋಕ್ಷವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ ಸ್ಪೀಕರ್, “ಬುದ್ಧಿವಂತರು ಕಾರ್ಯಕ್ರಮಕ್ಕೆ ಬಂದಿದ್ದಾರೆ, “ಅತೀ ಬುದ್ಧಿವಂತರು ಬಂದಿಲ್ಲ” ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಪರಿಷತ್‌ನ ಸಭಾಪತಿ ಬಸವರಾಜಹೊರಟ್ಟಿ ಮಾತನಾಡಿ ಶಾಸಕರು ಉತ್ತಮ ರೀತಿಯಲ್ಲಿ ಅಧ್ಯಯನ ನಡೆಸಿಕೊಂಡು ಬಂದರೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು. ವಿಧಾನ ಮಂಡಲದ ಗ್ರಂಥಾಲಯದಲ್ಲಿ ಪುಸ್ತಕ ಭಂಡಾರವೇ ಇದೆ. ಜೊತೆಗೆ ಕಲಾಪಗಳ ಸಂಪೂರ್ಣ ಮಾಹಿತಿಯೇ ಇದೆ. ಶಾಸಕರು ಇದನ್ನು ಬಳಸಿಕೊಂಡು ಉತ್ತಮ ಸಂಸದೀಯ ಪಟುಗಳಾಗಿ ಹೊರಹೊಮ್ಮಬೇಕು ಎಂದು ಆಶಿಸಿದರು.

ಪೂರ್ಣ ಕಲಾಪದಲ್ಲಿ ಒಂದು ನೋಟ್ ಬುಕ್ ಹಿಡಿಕೊಂಡು ಕುಳಿತುಕೊಳ್ಳಬೇಕು. ಮುಖ್ಯ ಮಾಹಿತಿಯನ್ನು ಟಿಪ್ಪಣಿ ಮಾಡಿಕೊಳ್ಳಬೇಕು. ಬಜೆಟ್, ಮಸೂದೆಗಳ ಬಗ್ಗೆ ಅಧ್ಯಯನ ಪೂರ್ಣವಾಗಿ ಮಾತನಾಡುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಭೈರೇಗೌಡ, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ, ಕರ್ನಾಟಕ ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮತದ ಅಧ್ಯಕ್ಷ ಅಪ್ಪಾಜಿ ಸಿ.ಎಸ್. ನಾಡಗೌಡ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

**ಆಧಾರ:**ಉದಯವಾಣಿ, ದಿನಾಂಕ:10.02.2024.

## 9. ಕೌನ್ಸಿಲ್‌ನಲ್ಲೂ ಸುದ್ದಿ ಚಿತ್ರೀಕರಣವಿಲ್ಲ

ವಿಧಾನಸಭೆ ಕಲಾಪ ಚಿತ್ರೀಕರಣಕ್ಕೆ ಮಾಧ್ಯಮಗಳಿಗೆ ನಿರ್ಬಂಧ ಹೇರಿರುವ ಮಾದರಿಯನ್ನೇ ವಿಧಾನ ಪರಿಷತ್ತ್‌ಗೂ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ಈಗಾಗಲೇ ಸರ್ಕಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ವಿಧಾನ ಪರಿಷತ್ ಕಾರ್ಯಾಲಯದಿಂದ ಮೌಖಿಕ ಸೂಚನೆ ರವಾನೆಯಾಗಿದೆ. ಅಧಿಕೃತವಾಗಿ ಪತ್ರದ ಮುಖೇನ ಸೂಚಿಸುವಂತೆ ಇಲಾಖೆಯು ಪರಿಷತ್ ಕಾರ್ಯಾಲಯಕ್ಕೆ ತಿಳಿಸಿದೆ ಎಂಬುದನ್ನು ಉನ್ನತ ಮೂಲಗಳು ಖಚಿತಪಡಿಸಿವೆ.

ಇದರಿಂದ ಈ ಹಿಂದೆ ಬಿಜೆಪಿ ಸರ್ಕಾರ ವಿಧಾನ ಸಭೆಗೆ ಮಾಧ್ಯಮ ನಿರ್ಬಂಧ ಹೇರಿದ ಮಾದರಿಯಲ್ಲೇ ಕಾಂಗ್ರೆಸ್ ಸರ್ಕಾರ ವಿಧಾನ ಪರಿಷತ್‌ಗೂ ನಿರ್ಬಂಧ ಹಾಕಲು ತೀರ್ಮಾನಿಸಿದೆ. ವಿದ್ಯುನ್ಮಾನ ಮಾಧ್ಯಮಗಳು ಕೆಲವು ಮುಖ್ಯವಾದ ಚರ್ಚೆಗಳನ್ನು ತೋರಿಸದೇ, ಕೇವಲ ಗಲಾಟೆ ದೃಶ್ಯಾವಳಿಗಳನ್ನೇ ಹೆಚ್ಚು ಭಿತ್ತರಿಸುತ್ತವೆ. ಸದನದಲ್ಲಿ ನಡೆಯುವ ಚರ್ಚೆ, ಗಂಭೀರ ವಿಷಯಗಳ ಬಗ್ಗೆ ಸದಸ್ಯರು ಮಾಡಿದ ಪ್ರಸ್ತಾಪ ಸೇರಿದಂತೆ ಹಲವಾರು ವಿಷಯಗಳಿಗೆ ಹೆಚ್ಚಿನ ಪ್ರಚಾರ ಸಿಗುತ್ತಿಲ್ಲ ಎಂಬ ಆರೋಪದ ಮೇರೆಗೆ ಸದ್ಯ ಪ್ರವೇಶ ನಿರ್ಬಂಧಿಸಲು ತೀರ್ಮಾನಿಸಲಾಗಿದೆ ಎಂದು ತಿಳಿದು ಬಂದಿದೆ.

ವಿಧಾನಸಭೆ ಕಲಾಪದ ವೇಳೆ ಮೂವರು ಬಿಜೆಪಿ ಶಾಸಕರು ನೀಲಿ ಚಿತ್ರ ವೀಕ್ಷಣೆ ಮಾಡುತ್ತಿದ್ದುದ್ದನ್ನು ಖಾಸಗಿ ವಾಹಿನಿಯ ಕ್ಯಾಮೆರಾಮ್ಯಾನ್‌ಗಳು ಸೆರೆ ಹಿಡಿದು ವಾಹಿನಿಗಳಲ್ಲಿ ಪ್ರದರ್ಶಿಸಿದರು. ಇದು ಸರ್ಕಾರವನ್ನು ಮುಜುಗರಕ್ಕೀಡು ಮಾಡಿತ್ತು. ಈ ಪ್ರಕರಣದಿಂದ ಮಾಧ್ಯಮದ ಮೇಲೆ ನಿರ್ಬಂಧ ಹೇರಿಕೆ ಮಾಡುವುದಕ್ಕಾಗಿಯೇ ಕಾಯುತ್ತಿದ್ದ ಸರ್ಕಾರ 2019ರಲ್ಲಿ ನಿರ್ಬಂಧ ಹೇರಿತ್ತು.

ಸಂಸತ್ ಹಾಗೂ ಬೇರೆ ರಾಜ್ಯಗಳ ಶಾಸನ ಸಭೆಗಳ ಮಾದರಿಯಲ್ಲಿ ರಾಜ್ಯ ವಿಧಾನಸಭೆ ಹಿಂದೆ ಬೀಳಬಾರದು ಎಂಬ ಕಾರಣಕ್ಕೆ ನಿರ್ಬಂಧ ಹೇರಿಕೆ ಮಾಡಿದ್ದೇವೆಂದು ಅಂದಿನ ವಿಧಾನಸಭೆ ಸ್ಪೀಕರ್ ಆಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಮರ್ಥಿಸಿಕೊಂಡಿದ್ದರು. ಅನಂತರ ಅದೇ ಪರಂಪರೆ ಮುಂದುವರಿಯಿತು.

ಕಳೆದ ಎರಡು ವರ್ಷಗಳ ಹಿಂದೆ ವಿಧಾನಸಭೆ ಕಲಾಪ ಚಿತ್ರೀಕರಣಕ್ಕೆ ನಿರ್ಬಂಧ ಹೇರಿದ್ದ ಬೆನ್ನಲ್ಲೇ ವಿಧಾನಸಭೆಯ ಆಡಳಿತ ಮತ್ತು ಪ್ರತಿಪಕ್ಷದ ಮೊಗಸಾಲೆಯಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ನಿರ್ಬಂಧ ಹೇರುವುದಕ್ಕೆ ಸಚಿವಾಲಯ ಮುಂದಾಗಿ ಆನಂತರ ಅದರಿಂದ ಹಿಂದೆ ಸರಿದಿತ್ತು. ನಿರ್ಬಂಧದ

ನಂತರ ಕೇವಲ ದೂರದರ್ಶನ ಮೂಲಕ ಕಲಾಪಗಳ ಪ್ರಸಾರಕ್ಕೆ ಅವಕಾಶ ಕಲ್ಪಿಸಿದೆ. ಆ ದೃಶ್ಯಗಳನ್ನು ಪ್ರಸಾರ ಮಾಡಬೇಕಾದ ಅನಿವಾರ್ಯತೆ ಖಾಸಗಿ ಸುದ್ದಿವಾಹಿನಿಗಳಿಗೆ ಸೃಷ್ಟಿಯಾಗಿದೆ.

**ಆಧಾರ**: ವಿಜಯ ಕರ್ನಾಟಕ, ದಿನಾಂಕ:10.02.2024.

## 10. ಬಾಲಬ್ರೂಯಿ ಇನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್'

ರಾಜ್ಯದಲ್ಲೂ ಕಾನ್‌ಸ್ಟಿಟ್ಯೂಷನ್ ಕ್ಲಬ್(ಶಾಸಕರ ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ನಿರ್ಮಿಸುವಂತೆ ಬಹಳ ದಿನಗಳಿಂದ ಸಚಿವರು, ಶಾಸಕರು, ಮಾಜಿ ಶಾಸಕರಿಂದ ಬೇಡಿಕೆ ಇತ್ತು. ಹೀಗಾಗಿ, ಸರ್ಕಾರದ ವಶದಲ್ಲಿದ್ದ ಬಾಲಬ್ರೂಯಿ ಕಟ್ಟಡವನ್ನು ವಿಧಾನಮಂಡಲ ಸಂಸ್ಥೆಗೆ ವರ್ಗಾಯಿಸಿ ಕ್ಲಬ್ ಮಾಡಲಾಗುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಿಧಾನಮಂಡಲ ಸಂಸ್ಥೆಯ ಉದ್ಘಾಟನೆ ಹಾಗೂ ಬಾಲಬ್ರೂಯಿ ಕಟ್ಟಡವನ್ನು ಪಾರಂಪರಿಕ ವಿನ್ಯಾಸಕ್ಕೆ ಒಳಪಟ್ಟು ನವೀಕರಿಸುವ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ದಿನಾಂಕ: 12.02.2024 ರಂದು ಅವರು ಮಾತನಾಡಿದರು.

ಸಂಜೆ ವೇಳೆಯಲ್ಲಿ ಸಮಯ ಕಳೆಯಲು, ಚರ್ಚೆ ನಡೆಸಲು, ಪತ್ರಿಕೆ ಓದಲು ಶಾಸಕರಿಗೆ ಪ್ರತ್ಯೇಕ ಜಾಗ ಇರಲಿಲ್ಲ. ಬಾಲಬ್ರೂಯಿ ಇದಕ್ಕೆ ಸೂಕ್ತ ಜಾಗ ಅನಿಸಿದೆ. ಮುಖ್ಯಮಂತ್ರಿ ಆಗಿರುವ ಕಾರಣಕ್ಕೆ ನನ್ನನ್ನು ವಿಧಾನ ಮಂಡಲ ಸಂಸ್ಥೆಗೆ ಗೌರವ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಎಂದರು.

**ಆಧಾರ:** ಪ್ರಜಾವಾಣಿ, ದಿನಾಂಕ:13.02.2024.

## 11. ಜಾಮರ್ ತೆರವು; 5ಜಿ ಇಂಟರ್‌ನೆಟ್ ಸೌಲಭ್ಯ

ವಿಧಾನಸಭೆಯ ಸಭಾಂಗಣದ ಮೊಗಸಾಲೆ ಹಾಗೂ ವಿಕಾಸಸೌಧದಲ್ಲಿರುವ ನೆಟ್‌ವರ್ಕ್ ಸಮಸ್ಯೆ ಸರಿಪಡಿಸಲು 5ಜಿ ಇಂಟರ್‌ನೆಟ್ ಸೇವೆಗೆ ಚಾಲನೆ ನೀಡಲಾಗಿದೆ.

ಈ ಮೂಲಕ ದಶಕದ ನಂತರ ವಿಧಾನಮಂಡಲದೊಳಗೆ ಹಾಗೂ ಸುತ್ತಮುತ್ತ ಜಾಮರ್‌ಗಳಿಲ್ಲದೆ ಮೊಬೈಲ್ ಫೋನ್‌ಗಳನ್ನು ಬಳಸಬಹುದಾಗಿದೆ. ಈ ಬಗ್ಗೆ ಮಾತನಾಡಿರುವ ಸ್ಪೀಕರ್ ಯು.ಟಿ.ಖಾದರ್, ದಶಕಗಳಿಂದ ವಿಧಾನಸಭೆ ಮತ್ತು ವಿಧಾನಪರಿಷತ್ ಅಧಿವೇಶನದಲ್ಲಿದ್ದ ಜಾಮರ್‌ಗಳನ್ನು ತೆಗೆದುಹಾಕಲಾಗಿದೆ. ಈಗ ಕರೆ ಮಾಡಲು ಅಥವಾ ಸ್ವೀಕರಿಸಲು ಯಾವುದೇ ಸಮಸ್ಯೆಯಿಲ್ಲ ಎಂದು ತಿಳಿಸಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಸಭಾಪತಿ ಬಸವರಾಜ ಹೊರಟ್ಟಿ ಅವರು 5ಜಿ ಅಂತರ್ಜಾಲ ಸೇವೆಗೆ ಚಾಲನೆ ನೀಡಿದರು. ಈ ಹಿಂದೆ ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಅಂತರ್ಜಾಲ ಸಂಪರ್ಕ ದುರ್ಬಲವಾಗಿದ್ದು, ಸಾಕಷ್ಟು ಸಮಸ್ಯೆ ಉಂಟಾಗಿತ್ತು. ವಿಧಾನಸೌಧದೊಳಗೆ 5ಜಿ ವೈಫೈ ಸೇವೆಯನ್ನು ಸಕ್ರಿಯಗೊಳಿಸಲಾಗಿದೆ. ಶಾಸಕರು ತಮ್ಮ ಟ್ಯಾಬ್ಲೆಟ್ ಮತ್ತು ಮೊಬೈಲ್ ಸಾಧನಗಳನ್ನು ಸಕ್ರಿಯವಾಗಿ ಬಳಸಬಹುದು. ಇದು ಆಡಳಿತ ಮತ್ತು ಸಂವಹನವನ್ನು ಇನ್ನಷ್ಟು ಸುಗಮಗೊಳಿಸಲಿದೆ.

**ಆಧಾರ**:ವಿಶ್ವವಾಣಿ, ದಿನಾಂಕ:13.02.2024.

## 12. ಉಭಯ ಸದನಗಳಲ್ಲಿ ಇದೇ ಮೊದಲ ಬಾರಿಗೆ ಸಂವಿಧಾನದ ಪೀಠಿಕೆ ಬೋಧನೆ

ವಿಧಾನಮಂಡಲದ ಉಭಯ ಸದನಗಳಲ್ಲಿ ಇದೇ ಮೊದಲ ಬಾರಿಗೆ ಸಂವಿಧಾನದ ಪೀಠಿಕೆಯನ್ನು ಶಾಸಕರಿಗೆ ಬೋಧಿಸಲಾಯಿತು. ದಿನಾಂಕ: 12.02.2024ರಂದು ರಾಜ್ಯಪಾಲರ ಭಾಷಣದ ನಂತರ ಪ್ರತ್ಯೇಕವಾಗಿ ಸಮಾವೇಶಗೊಂಡ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಕಲಾಪದ ಆರಂಭದಲ್ಲಿಯೇ ವಂದೇ ಮಾತರಂ ಗೀತೆಗೆ ಗೌರವ ಸಲ್ಲಿಸಲಾಯಿತು. ಬಳಿಕ ಎಲ್ಲ ಶಾಸಕರು ಸಿಬ್ಬಂದಿಗೂ ಸಂವಿಧಾನದ ಪ್ರಸ್ತಾವನೆಯ ಪ್ರತಿಯನ್ನು ನೀಡಿ, ವಿಧಾನಸಭೆಯಲ್ಲಿ ಸ್ಪೀಕರ್ ಖಾದರ್ ಅವರು ಸಂವಿಧಾನದ ಪ್ರಸ್ತಾವನೆ ಭೋದಿಸಿದರೆ, ಅತ್ತ ಮೇಲ್ಮನೆಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಬೋಧಿಸಿದರು.

**ಆಧಾರ:** :ವಿಶ್ವವಾಣಿ, ದಿನಾಂಕ:13.02.2024.

## 13. ಗ್ಯಾರಂಟಿಗಳ ಜಾರಿ ಜಾಗತಿಕ ದಾಖಲೆ

ರಾಜ್ಯ ಸರ್ಕಾರದ ಗ್ಯಾರಂಟಿಗಳ ಯಶಸ್ವಿ ಅನುಷ್ಠಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಈ ಯೋಜನೆಗಳ ಜಾರಿಯಿಂದ 1.20 ಕೋಟಿ ಕುಟುಂಬಗಳ 5 ಕೋಟಿಗೂ ಹೆಚ್ಚು ಜನರು ಮಧ್ಯಮ ವರ್ಗದ ಸ್ಥಿತಿಗೆ ಏರಿರುವುದು ಜಾಗತಿಕ ದಾಖಲೆ, ಎಂದು ಬಣ್ಣಿಸಿದ್ದಾರೆ.

ಅಲ್ಪಾವಧಿಯಲ್ಲಿ ಸಣ್ಣ ಗೊಂದಲಕ್ಕೂ ಅವಕಾಶ ನೀಡದೆ ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿದ್ದು ಸಾರ್ವತ್ರಿಕ ದಾಖಲೆ. ಗ್ಯಾರಂಟಿಗಳಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಿ ಆರ್ಥಿಕ ಚಟುವಟಿಕೆಗಳಿಗೆ ವೇಗ ಸಿಕ್ಕಿದೆ. ನನ್ನ ಸರ್ಕಾರದ ಗ್ಯಾರಂಟಿ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗಿದ್ದು, ಈ ಯೋಜನೆಗಳನ್ನು ಅಳವಡಿಸಿಕೊಳ್ಳಲು ಬೇರೆ ರಾಜ್ಯ ಸರ್ಕಾರಗಳು ಪೈಪೋಟಿ ನಡೆಸಿವೆ ಎಂದು ಶ್ಲಾಘಿಸಿದರು.

ದಿನಾಂಕ: 12.02.2024ರಂದು ಆರಂಭವಾದ ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಯಿಂದಾಗಿ ಬಸವಳಿದ ಜನರಿಗೆ ನನ್ನ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಸಾಂತ್ವನ ನೀಡಿವೆ. ಇವು ಜನರ ಜೀವನದಲ್ಲಿ ಪರೋಕ್ಷವಾಗಿ ಗಮನಾರ್ಹ ಬದಲಾವಣೆ ತಂದಿದ್ದು, ರಾಜ್ಯದಲ್ಲಿ ಬರಗಾಲವಿದ್ದರೂ ಕಳೆದ ವರ್ಷಕ್ಕಿಂತ ರೈತರ ಆತ್ಮಹತ್ಯೆ ಕಡಿಮೆಯಾಗಿದೆ ಎಂದರು.

ಸುಸ್ಥಿರ ಅಭಿವೃದ್ಧಿ ಮತ್ತು ಸಾಮಾಜಿಕ ಸಾಮರಸ್ಯದ ಹೊಸ ಕರ್ನಾಟಕ ಮಾದರಿಯನ್ನು ಸರ್ಕಾರ ಅನುಸರಿಸುತ್ತಿದ್ದು, ಈ ಮಾದರಿಯನ್ನು ಇನ್ನಷ್ಟು ಸಶಕ್ತಗೊಳಿಸಿ ರಾಜ್ಯವನ್ನು ಇಡೀ ದೇಶದಲ್ಲೇ ವಿಶಿಷ್ಟವಾಗಿ ರೂಪಿಸುವುದು ನನ್ನ ಸರ್ಕಾರದ ಗುರಿಯಾಗಿದೆ ಎಂದು ಘೋಷಿಸಿದರು.

ಕಳೆದ ಜನವರಿ ಅಂತ್ಯದವರೆಗೆ ರಾಜ್ಯದ ಜಿಎಸ್‌ಟಿ ಸಂಗ್ರಹ ಬೆಳವಣಿಗೆಯಲ್ಲಿ ಇಡೀ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಕಳೆದ 8 ತಿಂಗಳಿಂದ ಅಭಿವೃದ್ಧಿಯ ಹೊಸ ಶಕೆ ಆರಂಭವಾಗಿದ್ದು, 77 ಸಾವಿರ ಕೋಟಿ ರೂ.ದೇಶೀಯ ಮತ್ತು ವಿದೇಶಿ ಬಂಡವಾಳ ಹರಿದುಬಂದಿದೆ. ನನ್ನ ಸರ್ಕಾರವು ಖಾತರಿ ಯೋಜನೆಗಳ ಮೂಲಕ ಜನರ ಜೀವನದಲ್ಲಿ ಪರೋಕ್ಷವಾಗಿ ಗಮನಾರ್ಹ ಬದಲಾವಣೆಗಳನ್ನು ಗಮನಿಸುತ್ತಿದೆ ಎಂದರು.

ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಖ್ಯೆಯನ್ನು ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.

ಹೊಸ ಶಿಕ್ಷಣ ನೀತಿ ರೂಪಿಸಲಾಗುತ್ತಿದೆ. ಉದ್ದೇಶಿತ ನೀತಿಯು ಈಗಾಗಲೇ ರಾಜ್ಯ ಸಾಧಿಸಿರುವ ಶೈಕ್ಷಣಿಕ ಪ್ರಗತಿಯೊಂದಿಗೆ ವಾಸ್ತವಿಕ ಹಾಗೂ ಭವಿಷ್ಯದ ಅಗತ್ಯಗಳಿಗೆ ಪೂರಕ ಶಿಕ್ಷಣ ನೀಡುವ ಹೊಸ ಸಾಧ್ಯತೆಗಳನ್ನು ತೆರೆದಿಡಲಿದೆ. ಶಿಕ್ಷಣ ರಂಗದ ಕೊರತೆಗಳನ್ನು ಸರಿಪಡಿಸುವ ಜತೆಗೆ, ಅದನ್ನು ಕಾಲಮಾನದ ಅಗತ್ಯಗಳಿಗೆ ಅನುಗುಣವಾಗಿ ಪುನರ್ ರಚಿಸುವ ಅನಿವಾರ್ಯತೆಯನ್ನು ಸರ್ಕಾರ ಮನಗಂಡಿದೆ. ರಾಜ್ಯ ಶಿಕ್ಷಣ ನೀತಿಯು ಈ ನಿಟ್ಟಿನಲ್ಲಿ ದೇಶಕ್ಕೆ ಒಂದು ಹೊಸ ಹಾದಿಯನ್ನು ತೋರಲಿದೆ, ಎಂದು ರಾಜ್ಯಪಾಲರು ಹೇಳಿದರು.

ಗ್ಯಾರಂಟಿಗಳ ಅನುಷ್ಠಾನದ ಜತೆಗೆ ಅಭಿವೃದ್ಧಿ ವಿಚಾರಗಳಲ್ಲೂ ನನ್ನ ಸರ್ಕಾರ ಅಪ್ರತಿಮ ಸಾಧನೆ ಮೂಡಿದೆ, ಬರಗಾಲವಿದ್ರೂ ರಸ್ತೆ, ನೀರು, ಶಿಕ್ಷಣ, ಆರೋಗ್ಯ, ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ದಾಖಲಾರ್ಹ ಅಭಿವೃದ್ಧಿ ಸಾಧಿಸುತ್ತಿದೆ. ಪ್ರಸಕ್ತ ಸಾಲಿನ ಬಜೆಟ್‌ನ ಶೇ 97 ರಷ್ಟು ಘೋಷಣೆಗಳಿಗೆ ಅಧಿಸೂಚನೆ ಹೊರಡಿಸಿ ಅನುಷ್ಠಾನಕ್ಕೆ ತರಲಾಗಿದೆ ಎಂದು ತಿಳಿಸಿದರು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 13.02.2024.

## 14.ಅಭಿನಂದನಾ ನಿರ್ಣಯ ಅಂಗೀಕಾರ

ಅತ್ಯಧಿಕ ಅವಧಿಗೆ ವಿಧಾನಪರಿಷತ್ ಸದಸ್ಯರಾಗಿ ಲಿಮ್ಕಾ ದಾಖಲೆ ಪುಸ್ತಕದಲ್ಲಿ ನಮೂದಾಗಿರುವ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಇಡೀ ಸದನವೇ ಅಭಿನಂದಿಸಿ ನಿರ್ಣಯ ಅಂಗೀಕರಿಸಿದ ಅಪರೂಪದ ಘಟನೆಗೆ ಮೇಲ್ಮನೆ ದಿನಾಂಕ: 13.02.2024ರಂದು ಸಾಕ್ಷಿಯಾಯಿತು.

ಕಾಂಗ್ರೆಸ್ ಹಿರಿಯ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಮಂಡಿಸಿದ ನಿರ್ಣಯದ ಮೇಲೆ ಸದನದಲ್ಲಿದ್ದ ಬಹುತೇಕ ಸದಸ್ಯರು ಮಾತನಾಡಿ ಬಸವರಾಜ ಹೊರಟ್ಟಿ ಅವರ ವ್ಯಕ್ತಿತ್ವದ ನಾನಾ ಮುಖಗಳನ್ನು ಅನಾವರಣಗೊಳಿಸಿ ಗುಣಗಾನ ಮಾಡಿದ್ದು ಮೇಲ್ಮನೆ ಇತಿಹಾಸದಲ್ಲೇ ಅವಿಸ್ಮರಣೀಯ ಕ್ಷಣವಾಗಿ ದಾಖಲಾಯಿತು.

ಅಭಿನಂದನಾ ನುಡಿಗೆ ಮುನ್ನುಡಿ ಬರೆದ ಬಿ.ಕೆ.ಹರಿಪ್ರಸಾದ್ ಲಿಮ್ಕಾ ದಾಖಲೆ ಪುಸ್ತಕ ಅಪರೂಪದಲ್ಲಿ ಅಪರೂಪವೆನ್ನುವ ಸಾಧಕರನ್ನು ಗುರುತಿಸಿ ನಮೂದಾಗಿಸುತ್ತದೆ. ಹೊಗೆರಹಿತ ಗ್ರಾಮ ವಾಚರಹಳ್ಳಿ ಹತ್ತು ಲಕ್ಷಕ್ಕೂ ಅಧಿಕ ಪುಸ್ತಕಗಳುಳ್ಳ ಮಂಡ್ಯದ ಅಣ್ಣೇಗೌಡ, ಪುತ್ತೂರಿನ ಮಾನವ ಕಂಪ್ಯೂಟರ್ ಸುರೇಶ್ ನಾಯ್ಕ, ಅತ್ಯಧಿಕ ಕಾಫಿ ಬೆಳೆಯುವ ಕೊಡುಗೆಯನ್ನು ಹೆಸರಿಸಲಾಗಿದೆ. ಈಗ ಸತತ 8 ಬಾರಿ ಪರಿಷತ್ತಿಗೆ ಆಯ್ಕೆಯಾಗಿರುವ ಸಭಾಪತಿ ಹೊರಟ್ಟಿ ಅವರ ಹೆಸರು ಲಿಮ್ಕಾ ದಾಖಲೆ ಪುಸ್ತಕದಲ್ಲಿ ನಮೂದಾಗಿರುವುದು ಸದನಕ್ಕೆ ಸಂದ ಗೌರವ, ಸರಳಜೀವಿ, ಮುಖ್ಯಮಂತ್ರಿ ಹುದ್ದೆಯನ್ನು ನಿರಾಕರಿಸಿದ ಅಪರೂಪದ ರಾಜಕಾರಣಿ ಹೊರಟ್ಟಿ ಅವರ ಹೆಸರು ಗಿನ್ನೀಸ್ ದಾಖಲೆ ಪುಸ್ತಕದಲ್ಲೂ ದಾಖಲಾಗಲಿ ಎಂದು ಬಣ್ಣಿಸಿದರು.

ಅನಂತರ ಯು.ಬಿ.ವೆಂಕಟೇಶ್ ಅಭಿನಂದಿಸಿ, ಶಿಕ್ಷಕರ ಕ್ಷೇತ್ರದಲ್ಲಿ 8 ಬಾರಿ ಗೆದ್ದ ಏಕೈಕ ಕನ್ನಡಿಗ ಹೊರಟ್ಟಿ ಅವರು ಸದನ ಪ್ರವೇಶಿಸಿ 43 ವರ್ಷ 201 ದಿನವಾಗಿದೆ. ಇದೊಂದು ಅಚ್ಚಳಿಯದ ದಾಖಲೆ. ಮೇಲ್ಮನೆಗೆ ಅವರು ಭೀಷ್ಮ ಇದ್ದಂತೆ, ಶಿಕ್ಷಕರ ಹಲವು ಸಮಸ್ಯೆಗಳಿಗೆ ಸ್ಪಂದಿಸಿ ಪರಿಹರಿಸಿದ್ದಾರೆ. ಕ್ಷೇತ್ರದ

ಮತದಾರರು ಪಕ್ಷದ ಮುಖ ನೋಡದೆ ಹೊರಟ್ಟಿ ಅವರನ್ನೇ ಗೆಲ್ಲಿಸುತ್ತಾ ಬಂದಿದಾರೆ. ಬೇರೆ ಯಾರೂ ಈ ದಾಖಲೆಯ ಸಾಧನೆ ಮಾಡುವುದು ಕಷ್ಟಕರ. ಇನ್ನಷ್ಟು ವರ್ಷ ಅವರು ಮೇಲ್ಮನೆಯಲ್ಲಿ ನಮಗೆಲ್ಲಾ ಮಾರ್ಗದರ್ಶನ ಮಾಡಲಿ ಎಂದು ಹಾರೈಸಿದರು.

**ಆಧಾರ:** ಸಂಯುಕ್ತ ಕರ್ನಾಟಕ, ದಿನಾಂಕ:14.02.2024.

## 15. ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ: ಮಸೂದೆ ಮಂಡನೆ

ನಾಮಫಲಕಗಳಲ್ಲಿ ಶೇ.60 ಕನ್ನಡ ಬಳಕೆ ಮಾಡಬೇಕೆಂಬ ನಿಯಮ ಜಾರಿ ಸಲುವಾಗಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ–2024 ಅನ್ನು ದಿನಾಂಕ: 13.02.2024ರಂದು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಕನ್ನಡಪರ ಸಂಘಟನೆಗಳು ನಾಮಫಲಕಗಳ ವಿಚಾರದಲ್ಲಿ ಹೋರಾಟ ಕೈಗೊಂಡಾಗ ಸಂಪುಟಸಭೆಯಲ್ಲಿ ಸುಗ್ರೀವಾಜ್ಞೆ ಮೂಲಕ ನಿಯಮಕ್ಕೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿತ್ತು. ಸಂಪುಟದ ನಿರ್ಣಯವನ್ನು ರಾಜ್ಯಪಾಲರಿಗೂ ರವಾನಿಸಿತ್ತು. ಆದರೆ, ಇದರಲ್ಲಿ ಅಂತಹ ತುರ್ತು ಏನಿದೆ ಎಂದು ಪ್ರಶ್ನಿಸಿದ್ದ ರಾಜ್ಯಪಾಲರು ಸಂಪುಟ ನಿರ್ಣಯವನ್ನು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು. ಅಲ್ಲದೇ, ಅಧಿವೇಶನದಲ್ಲಿ ವಿಧೇಯಕ ಮಂಡಿಸಿ ಕಾನೂನು ಮಾಡುವಂತೆ ಸಲಹೆ ನೀಡಿದ್ದರು. ಆ ಪ್ರಕಾರ ದಿನಾಂಕ: 13.02.2024ರಂದು ಸರ್ಕಾರ ಮಸೂದೆ ಮಂಡನೆ ಮಾಡಿದೆ.

ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ದಿನಾಂಕ: 13.02.2024ರಂದು ವಿಧಾನಸಭೆಯಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ–2024ನ್ನು ಸರ್ಕಾರ ಮಂಡಿಸಿದೆ. ಸಚಿವಾಲಯದ ಪ್ರತಿಯೊಂದು ಇಲಾಖೆ ಅಧೀನದಲ್ಲಿ ಬರುವ ಅಧಿಕಾರಿಗಳು, ಕನ್ನಡ ಬಳಕೆಗೆ ಹೆಚ್ಚಿನ ಆದ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ರಚಿಸಿದ್ದ ರಾಜ್ಯಮಟ್ಟದ ಸಮಿತಿಗೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರನ್ನು ಸದಸ್ಯರನ್ನಾಗಿಯೂ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯನ್ನು ಸಂಚಾಲಕರನ್ನಾಗಿಯೂ ಮಾಡಲು ಅವಕಾಶ ಕಲ್ಪಿಸಿದೆ.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಪಡೆದು ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ, ಕೈಗಾರಿಕೆ, ವ್ಯವಹಾರ ಉದ್ಯಮ, ಟ್ರಸ್ಟ್ ಸಮಾಲೋಚನಾ ಕೇಂದ್ರ ಆಸ್ಪತ್ರೆ, ಪ್ರಯೋಗಾಲಯ, ಮನೋರಂಜನಾ ಕೇಂದ್ರ, ಹೋಟೆಲ್ ಮುಂತಾದವು ತಮ್ಮ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರದರ್ಶಿಸಿವೆಯೇ ಇಲ್ಲವೇ ಎಂಬುದು ಈ ಸಮಿತಿಯು ಖಚಿತಪಡಿಸಿಕೊಳ್ಳಬೇಕು ಎಂಬುದನ್ನು ಪ್ರಸ್ತಾಪಿಸಲಾಗಿದೆ.

**ಆಧಾರ**: ಉದಯವಾಣಿ, ದಿನಾಂಕ:14.02.2024.

## 16. ಸಾಧಕರನ್ನು ಗ್ಯಾಲರಿಗೆ ಕರೆಸಿ ಅಭಿನಂದನೆ

ಕ್ರೀಡೆ ಸೇರಿ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿರುವ ಐವರು ಯುವಕರನ್ನು ದಿನಾಂಕ: 12.02.2024ರಂದು ವಿಧಾನಸಭೆಯ ಪ್ರೇಕ್ಷಕರ ಗ್ಯಾಲರಿಗೆ ಕರೆಸಿ ಅಭಿನಂದನೆ ಸಲ್ಲಿಸಲಾಯಿತು. ಭಾರತದ ಚೆಫ್ ಸೀಸನ್ 8ರಲ್ಲಿ ಮೊದಲನೇ ಸ್ಥಾನ ಪಡೆದ ಮೊಹಮ್ಮದ್ ಆಶಿಕ್, 15ನೇ ವಯಸ್ಸಿನಲ್ಲಿ 76ನೇ ಚೆಸ್ ಗ್ರ್ಯಾಂಡ್ ಮಾಸ್ಟರ್ ಆಫ್ ಇಂಡಿಯಾ ಬಿರುದನ್ನು ಪಡೆದ ಹಾಗೂ 2024ರ ಮೊದಲನೇ ಬೆಂಗಳೂರು ಇಂಟರ್ ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದ ಮಾಸ್ಟರ್

ಪ್ರಣವ್ ಆನಂದ್, ಸೈಕ್ಲಿಂಗ್ ವಿಭಾಗದಲ್ಲಿ 24 ಸಾವಿರ ಕಿ.ಮೀಗಳನ್ನು 245 ದಿನಗಳಲ್ಲಿ ಭಾರತದ 24 ರಾಜ್ಯ ಮತ್ತು 4 ಕೇಂದ್ರಾಡಳಿತ ಪ್ರದೇಶಗಳನ್ನು ಸುತ್ತಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಮಾಡಿರುವ ಧನುಶ್ ಮಂಜುನಾಥ್, ಗಸ್ತು ಅರಣ್ಯ ಪಾಲಕರಾಗಿದ್ದು ಪರ್ವತಾರೋಹಣ ವಿಭಾಗದಲ್ಲಿ ಮೌಂಟ್ ಎವರೆಸ್ಟ್ ಏರಿದ ಪ್ರಥಮ ಕನ್ನಡಿಗ ವಿಕ್ರಮ್ ಸಿ. ಹಾಗೂ ಬೈಕ್ ಸವಾರ ಮತ್ತು ಸ್ಟಂಟ್ ಮ್ಯಾನ್ ಆಗಿರುವ ಪಲ್ಸರ್ ಮಿನೇರಿಯಾ ರೈಡರ್ ಮತ್ತು ಸ್ಕಿಲ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ನೋಮೆನ್ ಪಜೀರ್ ಅವರನ್ನು ವಿಧಾನಸಭೆಯಲ್ಲಿ ಅಭಿನಂದಿಸಲಾಯಿತು. ಸದನದಲ್ಲಿ ಸ್ಪೀಕರ್ ಯು.ಟಿ.ಖಾದರ್ ಮಂಡಿಸಿದ ಅಭಿನಂದನಾ ನಿರ್ಣಯವನ್ನು ಸರ್ಕಾರದ ಪರವಾಗಿ ಸಚಿವ ಎಚ್.ಕೆ.ಪಾಟೀಲ್ ಪ್ರತಿಪಕ್ಷದ ಪರವಾಗಿ ಅರವಿಂದ ಬೆಲ್ಲದ್ ಸ್ವಾಗತಿಸಿ, ಸಾಧಕರನ್ನು ಅಭಿನಂದಿಸಿದರು.

**ಆಧಾರ**: ವಿಜಯವಾಣಿ, ದಿನಾಂಕ:20.02.2024.

## 17. ಶಿಕ್ಷಕರ ಕ್ಷೇತ್ರ ಪುಟ್ಟಣ್ಣ ಗೆಲುವು

ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಗೆಲುವು ಸಾಧಿಸಿದ್ದಾರೆ. ಶಿಕ್ಷಕರೇ ಮತದಾರರಾಗಿರುವ ಈ ಚುನಾವಣೆಯಲ್ಲಿ, ಚಲಾಯಿತ 16,541 ಮತಗಳ ಪೈಕಿ 1,239 ಮತಗಳು ತಿರಸ್ಕೃತವಾಗಿವೆ.

ಬಿಜೆಪಿ–ಜೆಡಿಎಸ್ ಜಂಟಿಯಾಗಿ ಈ ಚುನಾವಣೆ ಎದುರಿಸಿದ್ದು, ಮೈತ್ರಿ ಬಳಿಕ ನಡೆದ ಮೊದಲ ಚುನಾವಣೆಯಲ್ಲಿ ಮೈತ್ರಿಕೂಟಕ್ಕೆ ಸೋಲಾಗಿದೆ. ಎ.ಪಿ. ರಂಗನಾಥ್ ಅವರನ್ನು 1,507 ಮತಗಳ ಅಂತರದಿಂದ ಪುಟ್ಟಣ್ಣ ಸೋಲಿಸಿದ್ದಾರೆ.

ಪುಟ್ಟಣ್ಣ 8,260 ಮತಗಳನ್ನು ಪಡೆದರೆ, ರಂಗನಾಥ್ 6,753 ಮತಗಳನ್ನು ಗಳಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರ ಉಪ ಚುನಾವಣೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ಮತದಾರರು ಫೆಬ್ರವರಿ 16 ರಂದು ಮತದಾನ ಮಾಡಿದ್ದರು.

ಹಿಂದೆ ಇದೇ ಕ್ಷೇತ್ರದಿಂದ ಬಿಜೆಪಿಯಿಂದ ಆಯ್ಕೆಯಾಗಿದ್ದ ಪುಟ್ಟಣ್ಣ ಅವರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ 2022ರ ಮಾರ್ಚ್‌ನಲ್ಲಿ ರಾಜೀನಾಮೆ ನೀಡಿದ್ದರು. ರಾಜಾಜಿನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋಲು ಕಂಡಿದ್ದರು. ಪುಟ್ಟಣ್ಣ ರಾಜೀನಾಮೆಯಿಂದ ಖಾಲಿಯಾಗಿದ್ದ ಬೆಂಗಳೂರು ಶಿಕ್ಷಕರ ವಿಧಾನ ಪರಿಷತ್ ಕ್ಷೇತ್ರಕ್ಕೆ ಫೆಬ್ರವರಿ 16 ರಂದು ಉಪ ಚುನಾವಣೆ ನಡೆದಿತ್ತು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಪುಟ್ಟಣ್ಣ ಇದೀಗ ಮತ್ತೆ ಗೆಲುವು ಸಾಧಿಸಿದ್ದು, ಈ ಸ್ಥಾನದ ಅವಧಿ 2026 ನವೆಂಬರ್ 11ರವರೆಗಿದೆ. 2002ರಿಂದ ನಿರಂತರವಾಗಿ ಜೆಡಿಎಸ್‌ನಿಂದ ಮೂರು ಬಾರಿ, ಬಿಜೆಪಿಯಿಂದ ಒಂದು ಬಾರಿ ಹಾಗೂ ಈಗ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಪುಟ್ಟಣ್ಣ ಗೆದ್ದಿದ್ದಾರೆ.

**ಆಧಾರ:** ಪ್ರಜಾವಾಣಿ, ದಿನಾಂಕ:21.02.2024.

## 18. ಕನ್ನಡ ಭಾಷೆ ತಿದ್ದುಪಡಿ ವಿಧೇಯಕ ಅಂಗೀಕಾರ

ಕರ್ನಾಟಕದಲ್ಲಿ ವಾಣಿಜ್ಯ ಸೇರಿದಂತೆ ಎಲ್ಲ ನಾಮಫಲಕದಲ್ಲಿ ಶೇ. 60ರಷ್ಟು ಕನ್ನಡ ಕಡ್ಡಾಯಗೊಳಿಸುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ತಿದ್ದುಪಡಿ ವಿಧೇಯಕ 2024 ಅನ್ನು ಒಂದೂವರೆ ಗಂಟೆ ಕಾಲ ಚರ್ಚೆ ಬಳಿಕ ಪರಿಷತ್‌ನಲ್ಲಿ ಅಂಗೀಕೃತಗೊಂಡಿತು.

ದಿನಾಂಕ: 20.02.2024ರಂದು ಕಲಾಪ ಆರಂಭವಾಗುತ್ತಿದ್ದಂತೆ ಸಚಿವ ಶಿವರಾಜ ತಂಗಡಗಿ ಅವರು ವಿಧೇಯಕ ಪರ್ಯಾಲೋಚನೆ ಪ್ರಸ್ತಾವ ಮಂಡಿಸಿದರು. ವಿಧೇಯಕದ ಬಗ್ಗೆ ಮಾಹಿತಿ ನೀಡಿದ ಅವರು ರಾಜ್ಯದಲ್ಲಿ ಕನ್ನಡ ನಾಮಫಲಕ ಕಡ್ಡಾಯ ಜಾರಿ ಪ್ರಾಧಿಕಾರಗಳಾಗಿ ರಾಜ್ಯಮಟ್ಟದ ಜಾಗೃತ ಸಮಿತಿ ರಚಿಸಲಾಗಿದೆ. ಅದರಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಸದಸ್ಯರನ್ನಾಗಿ ಮಾಡಲಾಗುತ್ತದೆ ಎಂದರು.

ಪ್ರತಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಪ್ರತಿಪಕ್ಷದ ಮುಖ್ಯ ಸಚೇತಕ ಎನ್ ರವಿಕುಮಾರ್, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಸದಸ್ಯರಾದ ನವೀನ್ ತಳವಾರ್ ಸಾಬಣ್ಣ. ಕೆ.ಎ.ತಿಪ್ಪೇಸ್ವಾಮಿ ನಾಗರಾಜ ಯಾದವ್, ಕೇಶವಪ್ರಸಾದ್, ಸಂಕನೂರ, ಶಾಂತಾರಾಮ್ ಸಿದ್ದಿ, ಡಾ. ತಿಮ್ಮಯ್ಯ, ಉಮಾಶ್ರೀ, ಬಿ.ಕೆ.ಹರಿಪ್ರಸಾದ್, ಹನುಮಂತ ನಿರಾಣಿ, ತೇಜಸ್ವಿನಿಗೌಡ, ಹೇಮಲತಾ ನಾಯಕ್, ಅವರು ವಿಧೇಯಕದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡರು.

ನಾಮಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಕಡ್ಡಾಯಗೊಳಿಸುವ ವಿಧೇಯಕ ತಂದರಷ್ಟೇ ಸಾಲದು. ಅದನ್ನು ಶೇ. 100ರಷ್ಟು ಅನುಷ್ಠಾನಕ್ಕೆ ತರಬೇಕು. ವಿಧೇಯಕ ಅನುಸರಿಸದವರಿಗೆ ದಂಡ ಶಿಕ್ಷೆ ವಿಧಿಸಬೇಕು. ಹೊರ ರಾಜ್ಯದವರಿಗೆ ನಮ್ಮ ರಾಜ್ಯ ಭಾಷೆಗೆ ಗೌರವ ಕೊಡುವಂತಹ ವಾತಾವರಣ ನಿರ್ಮಿಸಬೇಕು ಎಂದು ಸದಸ್ಯರು ಸಲಹೆ ನೀಡಿದರು.

ಇದಕ್ಕೆ ಉತ್ತರಿಸಿದ ಸಚಿವ ತಂಗಡಗಿ ನಾಮಫಲಕ ಪರಿಶೀಲನೆಗೆ ಎಲ್ಲ ಜಿಲ್ಲೆಗೂ ಸಮಿತಿ ರಚಿಸಲಾಗುವುದು. ಕನ್ನಡ ಫಲಕ ಜಾರಿಗೂ ಪ್ರತ್ಯೇಕ ವಿಭಾಗ ರಚಿಸಲಾಗುತ್ತದೆ. ಜಿಲ್ಲೆಗೊಂದು ಹಾಗೂ ಬೆಂಗಳೂರಿನ ಬಿಬಿಎಂಪಿ ವಲಯಕ್ಕೊಂದು ವಾಹನ ನೀಡಲಾಗುತ್ತದೆ. ನಿಯಮ ಉಲ್ಲಂಘಿಸಿದರೆ ದಂಡ ವಿಧಿಸುವ ಜತೆಗೆ ಕೇಸ್ ಹಾಕಿ ಪರವಾನಗಿ ನವೀಕರಿಸದಂತೆ ಕ್ರಮವಹಿಸಲಾಗುತ್ತದೆ ಎಂದು ವಿವರಿಸಿದರು.

**ಆಧಾರ:**ವಿಜಯ ಕರ್ನಾಟಕ, ದಿನಾಂಕ:21.02.2024.

## 19. ತೆರಿಗೆ ಬಾಕಿ: ಶೇ.50 ರಷ್ಟು ದಂಡ ಇಳಿಕೆ

ಬಿಬಿಎಂಪಿಯಲ್ಲಿ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆ ಮೇಲಿನ ದಂಡದ ಪ್ರಮಾಣ ಶೇ 50 ರಷ್ಟು ಕಡಿತಗೊಳಿಸಲು ಅವಕಾಶ ಕಲ್ಪಿಸುವ ಬಿಬಿಎಂಪಿ(ತಿದ್ದುಪಡಿ) ಮಸೂದೆ 2024 ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು.

ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನೂ ಹೊಂದಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಮಸೂದೆ ಮಂಡಿಸಿದರು.

ಮಸೂದೆಯ ಕುರಿತು ವಿವರಣೆ ನೀಡಿದ ಶಿವಕುಮಾರ್, ಬಡ ಮತ್ತು ದುರ್ಬಲ ವರ್ಗದವರಿಗೆ ಇದರಿಂದ ಅನುಕೂಲ ಆಗಲಿದೆ. ಸರ್ಕಾರದ ವಸತಿ ಯೋಜನೆಯ ಆಸ್ತಿಗಳು ಹಾಗೂ ಕೊಳೆಗೇರಿ ಪ್ರದೇಶದ ಕಟ್ಟಡಗಳಿಗೆ ಬಡ್ಡಿ ಮೇಲೆ ದಂಡ ಇರುವುದಿಲ್ಲ ಒಂದು ಸಾವಿರ ಚದರ ಅಡಿವರೆಗಿನ ಸ್ವಯಂ ಬಳಕೆ ಆಸ್ತಿದಾರರಿಗೆ ಸಂಪೂರ್ಣ ದಂಡ ವಿನಾಯಿತಿ ನೀಡಲಾಗಿದೆ, ಎಂದರು.

ವಸತಿ ಮತ್ತು ಮಿಶ್ರ ಆಸ್ತಿದಾರರ (ವಸತಿ ಮತ್ತು ವಾಣಿಜ್ಯ) ಬಾಕಿಯನ್ನು ಎಷ್ಟೇ ವರ್ಷದಿಂದ ಉಳಿಸಿಕೊಂಡಿದ್ದರೂ ಹಿಂದಿನ 5 ವರ್ಷಕ್ಕೆ ಮಾತ್ರ ಲೆಕ್ಕಾಚಾರ ಹಾಕಲು ನಿರ್ಧರಿಸಲಾಗಿದೆ. 5 ವರ್ಷಕ್ಕಿಂತ ಹಿಂದಿನ ಅವಧಿಗೆ ಬಡ್ಡಿ ಮನ್ನಾ ಮಾಡಲಾಗಿದೆ. ಇದೊಂದು ಜನಸ್ನೇಹಿ ತಿದ್ದುಪಡಿ ಮಸೂದೆ ಸರ್ಕಾರಕ್ಕೆ ನಷ್ಟವಾದರೂ ಪರವಾಗಿಲ್ಲ. ಜನರಿಗೆ ಅನುಕೂಲ ಆಗಲಿ ಎಂದು ಮಸೂದೆ ಮಂಡಿಸಲಾಗಿದೆ ಎಂದೂ ತಿಳಿಸಿದರು.

ಈ ತಿದ್ದುಪಡಿ ಮಸೂದೆಯಿಂದ ಬೆಂಗಳೂರಿನ ನಾಗರಿಕರಿಗೆ ತೆರಿಗೆ ಬಾಬ್ತು, ದಂಡ ವಿನಾಯಿತಿ ಸೇರಿ ಸುಮಾರು ರೂ.2,700 ಕೋಟಿ ಅನುಕೂಲ ಆಗಲಿದೆ. ಜೊತೆಗೆ ಪಾಲಿಕೆಗೆ ಸುಮಾರು ರೂ. 1 ಸಾವಿರ ಕೋಟಿಯಷ್ಟು ಆಸ್ತಿ ತೆರಿಗೆ ಬರಲಿದೆ. ಸುಮಾರು 5.51 ಲಕ್ಷ ತೆರಿಗೆ ಬಾಕಿದಾರರು, ಸುಮಾರು 5 ರಿಂದ 7 ಲಕ್ಷ ತೆರಿಗೆ ವ್ಯಾಪ್ತಿಗೆ ಬಾರದವರು ಹಾಗೂ 3 ಲಕ್ಷದಷ್ಟು ಮಂದಿ ಭಾಗಶ: ತೆರಿಗೆ ಪಾವತಿದಾರರು ಸೇರಿ 13 ರಿಂದ 15 ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:21.02.2024.

## 20. ಕೇರಳ ಮಾದರಿಯಲ್ಲಿ ಎನ್‌ಆರ್‌ಐ ಸಚಿವಾಲಯ

ಕೇರಳ ಮಾದರಿಯಲ್ಲಿ ರಾಜ್ಯದಲ್ಲೂ ಅನಿವಾಸಿ ಭಾರತೀಯರ ಸಚಿವಾಲಯ ತೆರೆಯಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಗೃಹ ಸಚಿವ ಡಾ:ಜಿ.ಪರಮೇಶ್ವರ್ ತಿಳಿಸಿದರು.

ವಿಧಾನಸಭೆಯ ಗ್ಯಾಲರಿಯಲ್ಲಿ ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆ ಆರತಿ ಕೃಷ್ಣ ನೇತೃತ್ವದಲ್ಲಿ 15ಕ್ಕೂ ಹೆಚ್ಚು ರಾಷ್ಟ್ರಗಳ ಅನಿವಾಸಿ ಭಾರತೀಯರು ಹಾಗೂ ಕನ್ನಡಿಗರು ಸದನದ ಕಾರ್ಯಕಲಾಪ ವೀಕ್ಷಣೆ ಮಾಡಿದರು. ಈ ವೇಳೆ ಅವರನ್ನು ಸ್ವಾಗತಿಸಿ ಪರಮೇಶ್ವರ್ ಮಾತನಾಡಿದರು.

"ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ ಸ್ಥಾಪಿಸುವ ವಿಚಾರ ಸೇರಿಸಿದ್ದೆವು. ಹಾಗಾಗಿ ಸಚಿವಾಲಯ ತೆರೆದು, ಅವರ ಸಮಸ್ಯೆ ಬೇಡಿಕೆಗಳಿಗೆ ಸ್ಪಂದಿಸಲು ಪ್ರಯತ್ನಿಸಲಾಗುವುದು" ಎಂದರು. ಉದ್ಯೋಗ ಅರಸಿಕೊಂಡು ನಾನಾ ದೇಶಗಳಲ್ಲಿ ಜೀವನ ಕಟ್ಟಿಕೊಂಡಿದ್ದಾರೆ. ಅನೇಕರು ಉದ್ಯಮಿಗಳಾಗಿ ಯಶಸ್ವಿಯಾಗಿದ್ದಾರೆ. ಶೇ 60 ರಿಂದ 80ರಷ್ಟು ಅನಿವಾಸಿ ಭಾರತೀಯವರು ಹೊರರಾಷ್ಟ್ರಗಳಲ್ಲಿ ಗಳಿಸಿದ ಆದಾಯವನ್ನು ಭಾರತಕ್ಕೆ ಮರಳಿ ತರುತ್ತಿದ್ದಾರೆ. ಹೊರದೇಶಕ್ಕೆ ಹೋದವರು ಮರಳಿ ಬರುವುದಿಲ್ಲವೆಂಬ ಪರಿಸ್ಥಿತಿ ಈಗ ಇಲ್ಲ ಸಿಎಸ್‌ಆರ್ ನಿಧಿಯಡಿ ಅಭಿವೃದ್ಧಿಗೆ ಹಣ ನೀಡುತ್ತಿದ್ದಾರೆ ಎಂದು ಹೇಳಿದರು.

ಇದಕ್ಕೂ ಮೊದಲು ಮಾತನಾಡಿದ ಸಭಾಧ್ಯಕ್ಷ ಯು.ಟಿಖಾದರ್ ವಿಧಾನಸಭಾ ಕಾರ್ಯಕಲಾಪ ವೀಕ್ಷಣೆಗೆ ವಿಶೇಷ ಅತಿಥಿಗಳಾಗಿ ನಾನಾ ರಾಷ್ಟ್ರಗಳಿಂದ ಅನಿವಾಸಿ ಕನ್ನಡಿಗರು ಬಂದಿದ್ದಾರೆ. ವ್ಯಾಪಾರ, ಉದ್ಯೋಗ ಸೇರಿದಂತೆ ಇತರೆ ಕಾರಣಗಳಿಗೆ ವಿದೇಶಗಳಿಗೆ ತೆರಳಿ ನೆಲೆಸಿರುವ ಕನ್ನಡಿಗರು ನಮ್ಮ ಸಂಸ್ಕೃತಿ, ಆಚಾರ-ವಿಚಾರ ಮರೆತಿಲ್ಲ ಆ ರಾಷ್ಟ್ರಗಳಲ್ಲಿ ಗಳಿಸಿದ ಆದಾಯದ ಒಂದು ಪಾಲನ್ನು ನಮ್ಮ ಸಮಾಜದ ಅಭಿವೃದ್ಧಿಗೆ ಕೊಡುಗೆಯಾಗಿ ನೀಡುತ್ತಿದ್ದಾರೆ ಎಂದು ಶ್ಲಾಘಿಸಿದರು.

**ಆಧಾರ:**ವಿಜಯಕರ್ನಾಟಕ, ದಿನಾಂಕ:22.02.2024.

## 21. ಆಸ್ತಿ ನೋಂದಣಿಗೆ ಇ–ಖಾತೆ ಕಡ್ಡಾಯ

ಸಬ್ ರಿಜಿಸ್ಟಾರ್ ಕಚೇರಿಯಲ್ಲಿನ ನೋಂದಣಿ ಪ್ರಕ್ರಿಯೆಯಲ್ಲಿ ನಾಗರಿಕ ಸೇವೆಯನ್ನು ಮತ್ತಷ್ಟು ಸರಳ ಮತ್ತು ಜನಸ್ನೇಹಿಗೊಳಿಸುವ ಉದ್ದೇಶ ಮತ್ತು ಪೇಪರ್ ಖಾತೆಯನ್ನು ತೆಗೆದು ಕಡ್ಡಾಯವಾಗಿ ಇ–ಆಸ್ತಿ ಕಡ್ಡಾಯಗೊಳಿಸುವ ನೋಂದಣಿ(ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಲಾಯಿತು.

ದಿನಾಂಕ: 21.02.2024ರಂದು ಸದನದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧೇಯಕದ ಮಹತ್ವದ ಕುರಿತು ಮಾಹಿತಿ ನೀಡಿದ ಬಳಿಕ ಧ್ವನಿ ಮತದ ಮೂಲಕ ಅಂಗೀಕಾರ ನೀಡಲಾಯಿತು. ವಿಧೇಯಕ ಬಗ್ಗೆ ವಿವರಣೆ ನೀಡಿದ ಸಚಿವರು, ನೋಂದಣಿ ಕಚೇರಿಗಳಲ್ಲಿ ಜನಸಂದಣಿಯನ್ನು ನಿಯಂತ್ರಿಸುವ ಸಲುವಾಗಿ ಎರಡು ಮಹತ್ವದ ತಿದ್ದುಪಡಿಗಳನ್ನು ತರಲಾಗಿದೆ. ಆಸ್ತಿ ಮಾರಾಟಗಾರರು ಹಾಗೂ ಖರೀದಿಸುವವರು ಇಬ್ಬರ ಉಪಸ್ಥಿತಿ ಇಲ್ಲದೆ ತಾವಿದ್ದ ಸ್ಥಳದಿಂದಲೇ ತಾಂತ್ರಿಕವಾಗಿ ಆಸ್ತಿ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. ಅಲ್ಲದೇ, ಪೇಪರ್ ಖಾತೆಯನ್ನು ತೆಗೆದು ಕಡ್ಡಾಯವಾಗಿ ಇ–ಖಾತೆ ಕಡ್ಡಾಯಗೊಳಿಸಲು ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಉಪ ನೋಂದಣಾಧಿಕಾರಿ ಕಚೇರಿಗೆ ಎರಡೂ ಕಡೆಯವರ ಉಪಸ್ಥಿತಿ ಅನಿವಾರ್ಯವಾಗಿದ್ದ ಕಾರಣ ಜನಸಂದಣಿ ಹೆಚ್ಚಾಗಿತ್ತು. ಎಲ್ಲರಿಗೂ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು ಕಷ್ಟಕರವಾಗಿತ್ತು. ಹೀಗಾಗಿ ಜನಸಾಮಾನ್ಯರು ಅನಗತ್ಯವಾಗಿ ಉಪ ನೋಂದಣಾಧಿಕಾರಿ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ತಾಂತ್ರಿಕ ನೋಂದಣಿಗಾಗಿ ಕ್ರಮ ಕೈಗೊಳ್ಳಲಾಗಿದೆ. ಕೆಐಎಡಿಬಿ ಕರ್ನಾಟಕ ವಸತಿ ನಿಗಮ ಮಂಡಳಿ, ಕೊಳಚೆ ನಿರ್ಮೂಲನ ಮಂಡಳಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಂತಹ ನಂಬಿಕಾರ್ಯ ಮೂಲಗಳ ಸಹಾಯದಿಂದ ನಾಗರಿಕರು ತಾಂತ್ರಿಕವಾಗಿಯೇ ಆಸ್ತಿ ನೋಂದಣಿ ಮಾಡಿಕೊಳ್ಳಬಹುದು. ಈ ಹೊಸ ಮಾದರಿ ಈಗಾಗಲೇ ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿದ್ದು, ಕರ್ನಾಟಕದಲ್ಲೂ ಸಹ ಜನರಿಗೆ ಉತ್ತಮ ಆಡಳಿತ ನೀಡಲು ಸಹಕಾರಿಯಾಗಲಿದೆ ಎಂದರು.

ನಗರ ಪ್ರದೇಶದಲ್ಲಿ ಪೇಪರ್ ಖಾತಾ ಮೂಲಕ ನೊಂದಣಿ ನಡೆಸಲಾಗುತ್ತಿದೆ. ಇದರಿಂದ ಅಕ್ರಮಗಳು ನಡೆಯುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ವಿಧೇಯಕ ತರಲಾಗಿದೆ. ಇನ್ನು ಮುಂದೆ ಇ–ಆಸ್ತಿ ಮೂಲಕ ಖಾತೆ ಆಗಿದ್ದರೆ ಮಾತ್ರ ನೋಂದಣಿ ಪ್ರಕ್ರಿಯೆಗೆ ಚಾಲನೆ ಸಿಗಲಿದೆ ಎಂದು ತಿಳಿಸಿದರು.

ಇದೇ ವೇಳೆ ರಾಜಸ್ವ ಸೋರಿಕೆಯನ್ನು ತಡೆಯಲು ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕ ಅಂಗೀಕರಿಸಲಾಯಿತು. ನೋಂದಣಿಗೆ ನಗದು ಪಾವತಿಯ ಬದಲು ಆನ್‌ಲೈನ್ ಮೂಲಕ ಹಣ ಪಾವತಿ ಮಾಡುವ ಉದ್ದೇಶದಿಂದ ಈ ವಿಧೇಯಕ ತರಲಾಗಿದೆ ಎಂದು ಹೇಳಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ:22.02.2024.

## 22. ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ನೋಂದಣಿ ಇನ್ನು ಕಡ್ಡಾಯ

ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳಿಗೂ ನೋಂದಣಿ ಹಾಗೂ ವೃತ್ತಿ ಪ್ರಮಾಣಪತ್ರ ನೀಡಲು ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಪರಿಷತ್ ರಚಿಸಲು ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ವಿಧೇಯಕ 2024ಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ದೊರೆತಿದೆ.

ಒಂದೊಮ್ಮೆ ಉಭಯ ಸದನಗಳಲ್ಲಿ ಅನುಮೋದನೆಯಾಗಿ ಕಾಯ್ದೆಯ ಅಧಿಕೃತ ಆದೇಶ ಹೊರಬಿದ್ದರೆ, ಕಾಯಿದೆ ಜಾರಿಯಾದ ಒಂದು ವರ್ಷದೊಳಗೆ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಳ್ಳದೆ ಕಟ್ಟಡ ನಿರ್ಮಾಣ, ನಕ್ಷೆ, ವಿನ್ಯಾಸ ಸಿದ್ದಪಡಿಸುವ ಕೆಲಸ ಮಾಡಿದರೆ ಆರು ತಿಂಗಳ ಜೈಲು ಹಾಗೂ 50 ಸಾವಿರ ರೂ.ವರೆಗೆ ದಂಡ ಅಥವಾ ಎರಡೂ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ವಿಧೇಯಕ ಪರ್ಯಾಲೋಚನೆಗೆ ಮಂಡಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ವಕೀಲರು, ಲೆಕ್ಕಪರಿಶೋಧಕರಂತೆ ವೃತ್ತಿಪರ ಎಂಜಿನಿಯರ್‌ಗಳಿಗೂ ನೋಂದಣಿ, ವೃತ್ತಿ ಪ್ರಮಾಣಪತ್ರ ಹಾಗೂ ವೃತ್ತಿಯಲ್ಲಿ ಯಾವುದೇ ತಪ್ಪು ಮಾಡಿದರೂ ಕ್ರಮ ಕೈಗೊಳ್ಳಬಲ್ಲ ವ್ಯವಸ್ಥೆ ಜಾರಿ ಮಾಡಲು ವಿಧೇಯಕ ಮಂಡಿಸಲಾಗಿದೆ ಎಂದು ಹೇಳಿದರು.

ನೋಂದಣಿಗಾಗಿ ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಪರಿಷತ್ ರಚಿಸಲಾಗುವುದು. ಇದರಲ್ಲಿ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಕರ್ನಾಟಕದಲ್ಲಿ ವೃತ್ತಿ ನಡೆಸಲು ಉದ್ದೇಶಿಸಿರುವ ಪ್ರತಿಯೊಬ್ಬ ಸಿವಿಲ್ ಎಂಜಿನಿಯರ್ ಈ ಕಾಯಿದೆ ಜಾರಿಗೆ ಬಂದ ಒಂದು ವರ್ಷದ ಒಳಗಾಗಿ ನೋಂದಣಿ ಮಾಡಿಕೊಳ್ಳಬೇಕು. ಡಿಪ್ಲೊಮಾ, ಎಂಜಿನಿಯರಿಂಗ್ ಪದವಿ, ಸ್ನಾತಕೋತ್ತರ ಪದವಿ ಪಡೆದವರು ನೋಂದಾಯಿಸಿಕೊಳ್ಳಬಹುದು. ವೃತ್ತಿಪರ ದುರ್ನಡತೆ ತೋರಿದರೆ ಪರಿಷತ್ತಿನ ಶಿಸ್ತು ಸಮಿತಿಯು ವಿಚಾರಣೆ ನಡೆಸುತ್ತದೆ ಎಂದು ತಿಳಿಸಿದರು.

**ಆಧಾರ:**ಕನ್ನಡ ಪ್ರಭ, ದಿನಾಂಕ:22.02.2024.

## 23. ಅಧಿವೇಶನಕ್ಕೆ ಬರಲು ಬ್ಯಾಡ್ಜ್ ಕಡ್ಡಾಯ

ಶಾಸಕರು ಇನ್ಮುಂದೆ ಅಧಿವೇಶನಕ್ಕೆ ಬರುವಾಗ ಗಂಡಬೇರುಂಡ ಲಾಂಛನದ ಬ್ಯಾಡ್ಜ್ ಧರಿಸಿ ಬರುವುದು ಒಳಿತೆಂದು ಸ್ಪೀಕರ್ ಯು.ಟಿ.ಖಾದರ್ ಅಭಿಪ್ರಾಯಪಟ್ಟರು. ಕಲಾಪ ಆರಂಭವಾಗುತ್ತಿದ್ದಂತೆ ಮಾಹಿತಿ ನೀಡಿದ ಸ್ಪೀಕರ್, ಎಲ್ಲ ಶಾಸಕರಿಗೆ ಬ್ಯಾಡ್ಜ್ ನೀಡುವ ಕಾರ್ಯ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ಧರಿಸಿ ಬರುವಂತಾಗಬೇಕು ಎಂದರು. ಶಾಸಕರು ಬ್ಯಾಡ್ಜ್ ಧರಿಸಿಕೊಂಡು ಬಂದಾಗ ಜನಪ್ರತಿನಿಧಿಯಾಗಿ ಗುರುತಿಸಲು ಸಾಧ್ಯವಾಗುತ್ತದೆ. ವಿಧಾನಸಭೆಯಿಂದಲೇ ವಿತರಿಸಿರುವ ಕಾರಣ ಬ್ಯಾಡ್ಜ್ ಮಹತ್ವವೂ ಹೆಚ್ಚಿರುತ್ತದೆ. ಶಾಸನ ಸಭೆ ವೀಕ್ಷಿಸಲು ಆಗಮಿಸಿದ್ದ ಘಾನಾ ಹಾಗೂ ಮತ್ತೊಂದು ದೇಶದ ಪಾರ್ಲಿಮೆಂಟೇರಿಯನ್‌ಗಳು ಬ್ಯಾಡ್ಜ್ ಧರಿಸಿದರು. ಇದನ್ನು ಗಮನಿಸಿದ್ದ ಸ್ಪೀಕರ್, ನಮ್ಮ ಶಾಸಕರಿಗೂ ಕೊಡಬಹುದು ಎಂದು ಹೊಸ ಸಂಪ್ರದಾಯಕ್ಕೆ ಮುನ್ನಡಿ ಬರೆದಿದ್ದಾರೆ.

**ಆಧಾರ:**ವಿಜಯವಾಣಿ, ದಿನಾಂಕ:22.02.2024.

## 24. ಕನ್ನಡ ನಾಮಫಲಕ ಕಾನೂನು ಜಾರಿ

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕಕ್ಕೆ ರಾಜ್ಯಪಾಲರ ಒಪ್ಪಿಗೆ ಸಿಕ್ಕಿದ್ದು, ರಾಜ್ಯಪತ್ರ ಪ್ರಕಟವಾಗಿದೆ. ಈ ಮೂಲಕ ನಾಮಫಲಕದಲ್ಲಿ ಕನ್ನಡಕ್ಕೆ ಶೇ.60 ಪ್ರಾಶಸ್ತ್ಯ ಒಳಗೊಂಡಂತೆ ಕೆಲ ಬದಲಾವಣೆ ಮಾಡಲ್ಪಟ್ಟ ಕಾನೂನು ಜಾರಿಗೆ ಬಂದಿದೆ. ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಮತ್ತು ಮಂಜೂರಾತಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು ಟ್ರಸ್ಟ್‌ಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯ, ಮನೋರಂಜನಾ ಕೇಂದ್ರ, ಹೋಟೆಲ್ ಮುಂತಾದವುಗಳ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ 60 ರಷ್ಟು ಹಾಗೂ ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿಸಬೇಕಾಗುತ್ತದೆ. ಇದನ್ನು ಖಚಿತಪಡಿಸಲು ರಚಿಸಲಾಗುವ ಸಮಿತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯದ ನಿರ್ದೇಶಕರಿಗೆ ಸದಸ್ಯ ಸ್ಥಾನ ನೀಡಿದರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗೆ ಸಮಿತಿಯ ಸಂಚಾಲಕರಾಗಿ ಜವಾಬ್ದಾರಿ ನೀಡಲಾಗಿದೆ.

**ಆಧಾರ:**ವಿಜಯವಾಣಿ, ದಿನಾಂಕ:27.02.2024.

## 25. ಮಕ್ಕಳಿಗಾಗಿ ನೆಹರು ಸ್ಟ್ರೀಮ್ ಲ್ಯಾಬ್

ವಿದ್ಯಾರ್ಥಿಗಳಿಗೆ ನೂತನ ಕೌಶಲ ಕಲ್ಪಿಸಲು ಸಂಶೋಧನೆಗೆ ಪ್ರೇರಣೆ ನೀಡುವ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ನೆಹರು ಸ್ಟ್ರೀಮ್ ಲ್ಯಾಬ್‌ಗಳನ್ನು ಸ್ಥಾಪಿಸಲು ಚಿಂತನೆ ನಡೆದಿದೆ ಎಂದು ಸಚಿವ ಎನ್.ಎಸ್.ಬೋಸರಾಜು ಹೇಳಿದ್ದಾರೆ.

ನಗರದ ಜವಾಹರಲಾಲ್ ನೆಹರು ತಾರಾಲಯದ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳಿಗೆ ಕುತೂಹಲ, ಸೃಜನಶೀಲತೆ ಮತ್ತು ಕಲ್ಪನೆ ಬೆಳೆಸುವುದು ನೆಹರು ಸ್ಟ್ರೀಮ್ ಲ್ಯಾಬ್‌ನ ಉದ್ದೇಶ, ಆಧುನಿಕ ಕೌಶಲ ಕಲಿಕೆಗೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಪಠ್ಯಕ್ರಮ ಅಳವಡಿಸಲಾಗುವುದ. ನೆಹರು ಸ್ಟ್ರೀಮ್ ಲ್ಯಾಬ್ ಒಂದು ಪ್ರಯೋಗಾಲಯ ಸ್ಥಳ, ವಿಜ್ಞಾನ, ತಂತ್ರಜ್ಞಾನ, ರೋಬೋಟಿಕ್ಸ್, ಪರಿಸರ, ವಿಜ್ಞಾನ ಖಗೋಳಶಾಸ್ತ್ರ ಮತ್ತು ಗಣಿತ ವಿಷಯಗಳ ಕುರಿತು ಚೆನ್ನಾಗಿ ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಲಕರಣೆಗಳೊಂದಿಗೆ ಕೆಲಸ ಮಾಡಲು ಅವಕಾಶ ನೀಡಲಾಗುವುದು ಎಂದರು. ರಾಜ್ಯದಲ್ಲಿ ಸೈನ್ಸ್ ಸಿಟಿ ಮತ್ತು ಶಾಲಾ ಮಕ್ಕಳಿಗೆ ಟೆಲಿಸ್ಕೋಪ್ ನೀಡಲು ನಮ್ಮ ಸರ್ಕಾರ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇದು ಸದ್ಯದಲ್ಲೇ ಕಾರ್ಯರೂಪಕ್ಕೆ ಬರಲಿದೆ ಎಂದು ಬೋಸರಾಜು ತಿಳಿಸಿದರು.

ಸಚಿವ ಡಾ.ಎಂ.ಸಿ ಸುಧಾಕರ್ ಮಾತನಾಡಿ, ವಿಜ್ಞಾನ ಇಲ್ಲದಿದ್ದರೆ ಪ್ರಪಂಚ ಎಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನ ಎರಡು ಮುಖ್ಯ. ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ಕೇಂದ್ರಗಳು ಪ್ರಾರಂಭವಾದರೆ ಸ್ಥಳೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದರು.

ದೇಶದಲ್ಲಿ ವಿಜ್ಞಾನ ಕ್ಷೇತ್ರ ಬೆಳೆಯಲು ಭದ್ರ ಅಡಿಪಾಯ ಹಾಕಿಕೊಟ್ಟವರು ಜವಾಹರಲಾಲ್ ನೆಹರು, ಬಾಹ್ಯಾಕಾಶ ಕ್ಷೇತ್ರದಲ್ಲಿ ನಮ್ಮ ದೇಶದ ಅಮೋಘ ಸಾಧನೆಗೈದಿದೆ. ವಿಜ್ಞಾನದಲ್ಲಿ ನಿರಂತರವಾಗಿ ಅಧ್ಯಯನ ನಡೆಯುತ್ತದೆ. ಇದರಿಂದಾಗಿ ಹೊಸ ಹೊಸ ವಿಷಯಗಳ ಕಲಿಸಲು ಸಾಧ್ಯವಾಗುತ್ತದೆ. ಶಾಲಾ ಮಕ್ಕಳು ವಿಜ್ಞಾನ ಬಗ್ಗೆ ಕಲಿಯಲು ಹೆಚ್ಚು ಆಸಕ್ತಿ ಬೆಳೆಸಬೇಕು. ವೈಚಾರಿಕತೆ ಹಾಗೂ ತಾರ್ಕಿಕ ಯೋಚನೆ

ಬೆಳೆಸಿಕೊಂಡರೆ ಮೂಢನಂಬಿಕೆಯಿಂದ ನಾವೆಲ್ಲರೂ ಹೊರಬಹುದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದೇಶದಲ್ಲಿ ಸಿ.ವಿ.ರಾಮನ್‌ನಂತ ವ್ಯಕ್ತಿಗಳು ಅಪರೂಪಕೊಮ್ಮೆ ಹುಟ್ಟುತ್ತಾರೆ. ವಿಜ್ಞಾನಕ್ಕೆ ಶ್ರೇಷ್ಠ ಕೊಡುಗೆ ಕೊಟ್ಟಿದ್ದಾರೆ. ಶಾಲಾ ಮಕ್ಕಳು ಇವರಂತೆ ಸಾಧನೆ ಮಾಡಲು ಮುಂದಾಗಬೇಕು. ಪಾಲಕರು ತಮ್ಮ ಮಕ್ಕಳ ಭವಿಷ್ಯ ರೂಪಿಸಲು ದೊಡ್ಡ ತ್ಯಾಗವನ್ನು ಮಾಡುತ್ತಿದ್ದಾರೆ. ಹಾಗಾಗಿ ಮಕ್ಕಳು ಒಳ್ಳೆಯ ವಿದ್ಯೆ ಕಲಿತು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜಹೊರಟ್ಟಿಯವರು ಹೇಳಿದರು.

**ಆಧಾರ**:ವಿಜಯವಾಣಿ, ದಿನಾಂಕ:29.02.2024.

## 26. ಚಾನೆಲ್‌ಗಳು ರಾಜ್ಯದ ಟಿಆರ್‌ಪಿ ಹೆಚ್ಚಿಸಲಿ: ಖಾದರ್

ಸಮಾಜದಲ್ಲಿ ಜನರು, ಜನಪ್ರತಿನಿಧಿಗಳು ಸೇರಿದಂತೆ ಮಾಧ್ಯಮಗಳೂ ಅದರದ್ದೆ ಆದ ನೈತಿಕತೆ ಹೊಂದಿರಬೇಕು ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ವಿಶ್ವವಿದ್ಯಾಲಯವು ಜ್ಞಾನಜ್ಯೋತಿ ಸಭಾಂಗಣದಲ್ಲಿ ದಿನಾಂಕ05.03.2024 ರಂದು ಹಮ್ಮಿಕೊಂಡಿದ್ದ ನಿಷ್ಪಕ್ಷಪಾತ ಚುನಾವಣೆ ಮತ್ತು ಮಾಧ್ಯಮ ಎಂಬ ವಿಷಯ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಚುನಾವಣಾ ಸಂದರ್ಭದಲ್ಲಿ ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗದೇ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ನಾಯಕತ್ವ ಗುಣಗಳನ್ನು ಹೊಂದಿರುವ ವ್ಯಕ್ತಿಯನ್ನು ಆರಿಸಬೇಕು. ಜತೆಗೆ ಮಾಧ್ಯಮಗಳು ಮತದಾನದ ಮಹತ್ವವನ್ನು ಜನರಿಗೆ ಅರ್ಥೈಸುವ ಕೆಲಸ ಮಾಡಬೇಕು ಎಂದು ಹೇಳಿದರು.

ರಾಜ್ಯದಲ್ಲಿ ನಡೆಯುವ ಕೆಲವೊಂದು ಸೂಕ್ಷ್ಮಗಳನ್ನು ಇಂದಿನ ಮಾಧ್ಯಮರಂಗವು ಬ್ರೇಕಿಂಗ್ ನ್ಯೂಸ್ ಹೆಸರಿನಲ್ಲಿ ಸುದ್ದಿಯ ಮಹತ್ವವನ್ನು ಕಳೆಯುತ್ತಿವೆ. ರಾಜ್ಯದ ಟಿಆರ್‌ಪಿ ಹೆಚ್ಚಿಸುವ ಕೆಲಸವನ್ನು ಮಾಡಬೇಕೇ ಹೊರತು ತಮ್ಮ ಚಾನೆಲ್‌ನ ಟಿಆರ್‌ಪಿ ಹೆಚ್ಚಿಸುವುದು ಮಾತ್ರ ಆಗಬಾರದು ಎಂದು ಯು.ಟಿ.ಖಾದರ್ ಬೇಸರ ವ್ಯಕ್ತಪಡಿಸಿದರು. ಚುನಾವಣೆ ರಾಜಕೀಯ, ಮಾಧ್ಯಮಗಳ ಕಾರ್ಯವೈಖರಿ, ಸಾಮಾಜಿಕ ಪ್ರಜ್ಞೆಯೊಂದಿಗೆ ವಿದ್ಯಾರ್ಥಿಗಳಿಗೆ ಜ್ಞಾನ ಬಂಡಾರ ಹೆಚ್ಚಿಸಲು ಇಂತಹ ಕಾರ್ಯಕ್ರಮಗಳ ಅಗತ್ಯವಿದೆ. ಯುವಕರು ಮುಂದಿನ ದಿನಗಳಲ್ಲಿ ಪತ್ರಿಕೋದ್ಯಮ ಅಥವಾ ರಾಜಕೀಯದಲ್ಲಿ ಆಸಕ್ತಿಯುಳ್ಳವರು ಆಯಾ ಕ್ಷೇತ್ರದಲ್ಲಿ ' ದಿ' ಬೆಸ್ಟ್ ಆಗಿ ಹೊರಹೊಮ್ಮಿ ಎಂದು ಕಿವಿಮಾತು ಹೇಳಿದರು.

**ಆಧಾರ**:ಉದಯವಾಣಿ, ದಿನಾಂಕ:06.03.2024.

## 27. ರಾಜಕೀಯ ತರಬೇತಿಗೆ ಕೋರ್ಸ್ ತೆರೆಯಲು ಚಿಂತನೆ: ಖಾದರ್

ರಾಜಕೀಯ ತರಬೇತಿಗಾಗಿ ರಾಜ್ಯದಲ್ಲಿ ಸ್ಕೂಲ್ ಆಫ್ ಗವರ್ನೆನ್ಸ್ ಆರಂಭಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಸ್ಪೀಕರ್ ಯು.ಟಿ. ಖಾದರ್ ತಿಳಿಸಿದರು.

ಕಾನೂನು ವಿದ್ಯಾರ್ಥಿಗಳಿಗಾಗಿ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯು ವಿಕಾಸಸೌಧದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ–2024 ಸಮಾರೋಪದಲ್ಲಿ ಮಾತನಾಡಿದರು.

ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು ಸೇರಿದಂತೆ ಎಲ್ಲ ವಿಷಯಗಳಿಗೂ ಕಾಲೇಜು ವಿಶ್ವವಿದ್ಯಾಲಯಗಳು ಇವೆ. ಆದರೆ, ಉತ್ತಮ ರಾಜಕಾರಣಿಗಳಾಗಬೇಕು ಎಂಬ ಆಸಕ್ತಿ ಇಟ್ಟುಕೊಂಡವರಿಗೆ ಪ್ರತ್ಯೇಕ ಶಿಕ್ಷಣದ ವ್ಯವಸ್ಥೆ ಇಲ್ಲ. ಹೀಗಾಗಿ ರಾಜಕೀಯ ತರಬೇತಿ ನೀಡಲು ಸ್ಕೂಲ್ ಆಫ್ ಗವರ್ನೆನ್ಸ್ ಆರಂಭಿಸಬೇಕು ಎಂದು ವಿಧಾನ ಮಂಡಲದ ಉಭಯಸದನಗಳ ಮುಖ್ಯಸ್ಥರೂ ಚಿಂತನೆ ನಡೆಸಿದ್ದೇವೆ ಎಂದರು.

ನಮ್ಮಪ್ಪ ನನ್ನನ್ನು ಡಾಕ್ಟರ್ ಮಾಡಬೇಕೆಂದು ಸೈನ್ಸ್‌ಗೆ ಹಾಕಿದ್ದರು. ಗಣಿತ ವಿಷಯದಲ್ಲಿ 25 ಅಂಕ ತೆಗೆದೆ ಎಂದು ಆರ್ಟ್ಸ್‌ಗೆ ಹಾಕಿದರು. ನಂತರ ಎಲ್‌ಎಲ್‌ಬಿ ಅರ್ಧಕ್ಕೆ ಬಿಟ್ಟು ಕೆಲಸಕ್ಕೆ ಹೋದೆ. ರಾಜಕಾರಣಕ್ಕೆ ಬಂದೆ. ಎಲ್‌ಎಲ್‌ಬಿ ಮಾಡದೆಯೇ ಕಾನೂನು ಮಂತ್ರಿ ಆದೆ. ರಾಜಕಾರಣ ಇಂತಹವರೇ ಬರಬೇಕೆಂದೇನೂ ಇಲ್ಲ. ಆದರೆ, ಸರಿಯಾದ ತರಬೇತಿ ಬೇಕು. ಅದನ್ನು ಕೊಡುವ ಕೆಲಸ ಮಾಡುತ್ತೇವೆ. ಸಭಾಧ್ಯಕ್ಷ ಸಭಾಪತಿ ಆಗಲು ಹಿಂಜರಿಯುವವರೇ ಹೆಚ್ಚು ಇದೊಂದು ಗೌರವದ ಸ್ಥಾನ ಎಂದು ವಿಧಾನಪರಿಷತ್ತಿನ ಸನ್ಮಾನ್ಯ ಸಭಾಪತಿಯವರು ಬಸವರಾಜ ಹೊರಟ್ಟಿ.

**ಆಧಾರ**:ಉದಯವಾಣಿ, ದಿನಾಂಕ:06.03.2024.

## 28. ಮರಿತಿಬ್ಬೇಗೌಡ ರಾಜೀನಾಮೆ

ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ರಾಜೀನಾಮೆ ಪತ್ರವನ್ನು ಅಂಗೀಕರಿಸಿದರು.

ಈ ಸಂದರ್ಭದಲ್ಲಿ ಮರಿತಿಬ್ಬೇಗೌಡ ಮಾತಾಡಿ, 'ವೈಯಕ್ತಿಕ ಕಾರಣಗಳಿಗೆ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು, ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುವೆ. ಕಾಂಗ್ರೆಸ್ ಸೇರುವ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ' ಎಂದರು

'ನನ್ನ ಹಿತೈಷಿಗಳು ಹಾಗೂ ನನ್ನ ಕ್ಷೇತ್ರದ ಶಿಕ್ಷಕ ಮತದಾರರ ಜೊತೆ ಸಮಾಲೋಚನ ನಡೆಸಿ, ಮುಂದಿನ ನಿರ್ಧಾರ ತೆಗೆದುಕೊಳ್ಳುವೆ. ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಆಲೋಚನೆ ಇಲ್ಲ' ಎಂದರು.

**ಆಧಾರ**:ಪ್ರಜಾವಾಣಿ, ದಿನಾಂಕ:22.03.2024.

## 29. ಪರಿಷತ್ ಸ್ಥಾನಕ್ಕೆ ತೇಜಸ್ವಿನಿಗೌಡ ರಾಜೀನಾಮೆ

ವಿಧಾನಪರಿಷತ್‌ನ ಬಿಜೆಪಿ ಸದಸ್ಯೆ ತೇಜಸ್ವಿಗೌಡ ಅವರು ಪರಿಷತ್‌ನ ಸದಸ್ಯತ್ವಕ್ಕೆ ದಿನಾಂಕ: 27.03.2024ರಂದು ರಾಜೀನಾಮೆ ನೀಡಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ಮನೆಯಲ್ಲೇ ತೇಜಸ್ವಿನಿ ರಾಜೀನಾಮೆ ಪತ್ರ, ನೀಡಿದ್ದು, ಸಭಾಪತಿಯವರು ಅಂಗೀಕರಿಸಿದ್ದಾರೆ. ಅವರ ಸದಸ್ಯತ್ವದ ಅವಧಿ ಜೂನ್ 24ರವರೆಗೆ ಇದೆ.

ರಾಜೀನಾಮೆ ಕುರಿತು ಮಾತನಾಡಿದ ಬಸವರಾಜ ಹೊರಟ್ಟಿ ತೇಜಸ್ವಿನಿ ಅವರ ಅವಧಿ ಜೂನ್‌ವರೆಗೆ ಇದ್ದು, ಅವರ ಮನವೊಲಿಕೆಗೆ ಸಾಕಷ್ಟು ಪ್ರಯತ್ನಿಸಿದೆ. ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದರು. ಅಂಗೀಕರಿಸಿದ್ದೇನೆ ಎಂದರು.

ತೇಜಸ್ವಿನಿಯವರು ಮೈಸೂರು– ಕೊಡಗು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಇದಕ್ಕಾಗಿ ಪ್ರಯತ್ನ ನಡೆಸಿದ್ದರು. ಪ್ರಯತ್ನ ಫಲನೀಡದೇ ಇರುವುದಕ್ಕೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಕಡೆ ಮುಖ ಮಾಡಿದ್ದಾರೆ.

**ಆಧಾರ**:ವಿಶ್ವವಾಣಿ, ದಿನಾಂಕ:28.03.2024.

# ಭಾಗ–2

## ಕರ್ನಾಟಕ ವಿಧಾನಮಂಡಲದ ಕಾರ್ಯಚಟುವಟಿಕೆಗಳು

# 1. ವಿಧಾನ ಪರಿಷತ್ತಿನ 152ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**<u>ಮಾನ್ಯ ಸಭಾಪತಿಯವರು:</u>**

ವಿಧಾನ ಪರಿಷತ್ತಿನ 152ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:12.02.2024 ರಿಂದ 29.02.2024 ರವರೆಗೆ ಒಟ್ಟು 13 ದಿನಗಳು ಅಂದರೆ, 69.25 ಗಂಟೆಗಳು ನಡೆಸಲಾಗಿರುತ್ತದೆ.

ದಿನಾಂಕ:12.02.2024ರಂದು ಬೆಳಗ್ಗೆ 11.00 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಪ್ರಾರಂಭಗೊಂಡಿತು. ವಂದನಾ ನಿರ್ಣಯದ ಮೇಲೆ 06 ಗಂಟೆ 25 ನಿಮಿಷಗಳು ಚರ್ಚೆ ನಡೆಸಿ ದಿನಾಂಕ:21.02.2024 ರಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ದಿನಾಂಕ: 16.02.2024ರಂದು ಮಾನ್ಯ ಮುಖ್ಯಮಂತ್ರಿಯವರು 2024–25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು. ಆಯವ್ಯಯ ಅಂದಾಜುಗಳ ಮೇಲೆ ಸುಮಾರು 8 ಗಂಟೆ 18 ನಿಮಿಷಗಳ ಕಾಲ ಚರ್ಚೆ ನಡೆಸಿ, ದಿನಾಂಕ:29.02.2024 ರಂದು ಸರ್ಕಾರದಿಂದ ಉತ್ತರಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 07 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಮಾನ್ಯ ಸಭಾಪತಿಯವರು ಒಂದೇ ಕ್ಷೇತ್ರದಿಂದ ಸತತವಾಗಿ ಎಂಟು ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ವಿಶ್ವ ದಾಖಲೆ ಗಳಿಸಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ಗೆ ದಾಖಲೆಯಾಗಿರುವುದಕ್ಕೆ ಸದನದಲ್ಲಿ ಅಭಿನಂದನೆಯನ್ನು ಸಲ್ಲಿಸಲಾಯಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ನಡೆದ ಉಪ ಚುನಾವಣೆಯಲ್ಲಿ ವಿಧಾನ ಪರಿಷತ್ತಿಗೆ ಚುನಾಯಿತರಾದ ಶ್ರೀ ಪುಟ್ಟಣ್ಣ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 01, 02 ಮತ್ತು 03 ಪಟ್ಟಿಗಳನ್ನು ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1144 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 120 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 72 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 43 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1012 ಪ್ರಶ್ನೆಗಳ ಪೈಕಿ 792 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ. ಒಂದು ಸೂಚನೆಯನ್ನು ಚರ್ಚಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 115 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 22 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 47 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 87 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 09 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 46 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ಎ ಅಡಿಯಲ್ಲಿ ಒಟ್ಟು 8 ಸೂಚನೆಗಳನ್ನು ಪ್ರಸ್ತಾಪಿಸಲಾಗಿದ್ದು, ಒಂದು ಸೂಚನೆಗೆ ಉತ್ತರಿಸಲಾಯಿತು.

ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್ ಅವರು ನೀಡಿರುವ ಖಾಸಗಿ ಸದಸ್ಯರುಗಳ ವಿಧೇಯಕವನ್ನು ಮಂಡಿಸಲಾಯಿತು ಹಾಗೂ ಮಾನ್ಯ ಶಾಸಕರಾದ ಶ್ರೀ ಯು.ಬಿ.ವೆಂಕಟೇಶ್ ಅವರು ಮಂಡಿಸಿದ ಖಾಸಗಿ ನಿರ್ಣಯದ ಮೇಲೆ ಚರ್ಚಿಸಲಾಯಿತು.

ಶೂನ್ಯ ವೇಳೆ ಪ್ರಸ್ತಾವನೆಯ ಒಟ್ಟು 46 ಸೂಚನೆಗಳ ಪೈಕಿ 24 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಒಟ್ಟು 27 ವಿಧೇಯಕಗಳ ಪೈಕಿ ಎರಡು ವಿಧೇಯಕಗಳನ್ನು ಪರಿಶೀಲನಾ ಸಮಿತಿಗೆ ವಹಿಸಲಾಯಿತು. ಉಳಿದ 25 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

## 2. 16ನೇ ವಿಧಾನಸಭೆ 3ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹದಿನಾರನೇ ವಿಧಾನಸಭೆಯ ಮೂರನೇ ಅಧಿವೇಶನವು ದಿನಾಂಕ 12ನೇ ಫೆಬ್ರವರಿ, 2024 ರಿಂದ 29ನೇ ಫೆಬ್ರವರಿ, 2024ರವರೆಗೆ ಒಟ್ಟು 13 ದಿನಗಳ ಕಾಲ ಸುಮಾರು 60 ಗಂಟೆ 10 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ದಿನಾಂಕ:12.02.2024 ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 12 ಮಾನ್ಯ ಸದಸ್ಯರುಗಳು ಒಟ್ಟು 10 ಗಂಟೆ 17 ನಿಮಿಷಗಳ ಕಾಲ ಭಾಗವಹಿಸಿದ್ದು, ವಂದನಾ ನಿರ್ಣಯದ ಪ್ರಸ್ತಾವವನ್ನು ದಿನಾಂಕ:20.02.2024 ರಂದು ಅಂಗೀಕರಿಸಲಾಗಿದೆ.
- 2024–25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:16.02.2024 ರಂದು ಮಂಡಿಸಿರುತ್ತಾರೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 25 ಮಾನ್ಯ ಸದಸ್ಯರುಗಳು ಒಟ್ಟು 08 ಗಂಟೆ 33 ನಿಮಿಷಗಳ ಕಾಲ ಭಾಗವಹಿಸಿದ್ದು, ದಿನಾಂಕ: 29.02.2024ರಂದು ಮಾನ್ಯ ಮುಖ್ಯಮಂತ್ರಿಯರು ಉತ್ತರ ನೀಡಿದ ನಂತರ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- 2012–13, 2013–14, 2014–15, 2015–16, 2016–17 ಮತ್ತು 2017–18ನೇ ವರ್ಷಗಳ ಅವಧಿಯಲ್ಲಿನ ಅನುದಾನಕ್ಕಿಂತ ಹೆಚ್ಚುವರಿ ವೆಚ್ಚಗಳನ್ನು ಸಕ್ರಮಗೊಳಿಸುವ ಬೇಡಿಕೆಗಳನ್ನು ದಿನಾಂಕ:20.02.2024 ರಂದು ಮಂಡಿಸಿದ್ದು, ದಿನಾಂಕ:29.02.2024 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.
- 2023–24ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಹಾಗೂ ಅಂತಿಮ ಕಂತನ್ನು ದಿನಾಂಕ:21.02.2024 ರಂದು ಮಂಡಿಸಿದ್ದು, ದಿನಾಂಕ:29.02.2024 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.
- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- ಭಾರತ ಸಂವಿಧಾನದ 151(2) ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2022–23ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ) ಸದನದಲ್ಲಿ ಮಂಡಿಲಾಗಿದೆ.
- ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2023–24ನೇ ಸಾಲಿನ ಎರಡನೇ ವರದಿ, ಹಾಗೂ 2024–25ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಎರಡನೇ ವರದಿ, ಹಾಗೂ ಸರ್ಕಾರಿ ಭರವಸೆಗಳ ಸಮಿತಿಯ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- ಒಟ್ಟು 43 ಅಧಿಸೂಚನೆಗಳು ಮತ್ತು 162 ವಾರ್ಷಿಕ ವರದಿಗಳು, 163 ಲೆಕ್ಕ ಪರಿಶೋಧನಾ ವರದಿಗಳು, 04 ಅನುಪಾಲನ ವರದಿಗಳು, 06 ಅನುಸರಣಾ ವರದಿ ಹಾಗೂ 03 ಲೆಕ್ಕ ತಪಸಣಾ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.
- ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳೂ ಸೇರಿದಂತೆ ಒಟ್ಟು 26 ವಿಧೇಯಕಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ. 2024ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.
- ನಿಯಮ 60ರಡಿಯಲ್ಲಿ ನೀಡಿದ್ದ 05 ಸೂಚನೆಗಳ ಪೈಕಿ 02ನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, ಒಂದು ಸೂಚನೆಯನ್ನು ತಿರಸ್ಕರಿಸಲಾಗಿದೆ ಹಾಗೂ ಒಂದು ಸೂಚನೆಯನ್ನು ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸಲು ಅವಕಾಶ ಕಲ್ಪಿಸಲಾಗಿದೆ.
- ನಿಯಮ 69ರಡಿಯಲ್ಲಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 02 ಸೂಚನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.
- ಈ ಅವಧಿಯಲ್ಲಿ ಒಟ್ಟು 41 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

- ಒಟ್ಟು 1955 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 120 ಪ್ರಶ್ನೆಗಳ ಪೈಕಿ 117 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 1653 ಪ್ರಶ್ನೆಗಳ ಪೈಕಿ 1461 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ನಿಯಮ 351ರಡಿಯಲ್ಲಿ ಸ್ವೀಕೃತವಾದ 160 ಸೂಚನೆಗಳ ಪೈಕಿ 77 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಗಮನ ಸೆಳೆಯುವ 157 ಸೂಚನೆಗಳ ಪೈಕಿ 120 ಸೂಚನಾ ಪತ್ರಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.
- ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ ಕೆ. ಕೋಳಿವಾಡರವರು ನೀಡಿರುವ 01 ಖಾಸಗಿ ವಿಧೇಯಕವನ್ನು ಸದನದಲ್ಲಿ ಮಂಡಿಸಲಾಗಿದೆ.
- ಶೂನ್ಯ ವೇಳೆಯಲ್ಲಿ ಒಟ್ಟು 21 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 12 ಸೂಚನೆಗಳನ್ನು ಚರ್ಚಿಸಲಾಗಿದೆ.
- ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಮತ್ತು ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಮಾನ್ಯ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿರುತ್ತದೆ.
- ಕರ್ನಾಟಕ ಅಭಿವೃದ್ಧಿಯ ವಿಷಯದಲ್ಲಿ ನಾಗರೀಕರ ಹಿತರಕ್ಷಣೆಯಲ್ಲಿ ಸಮಾನ ಹಂಚಿಕೆಯ ಮತ್ತು ತಾರತಮ್ಯರಹಿತ ಆರ್ಥಿಕ ಸಂಪನ್ಮೂಲಗಳ ಹಂಚಿಕೆಯ ನಿಲುವುಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಹಾಗೂ ರೈತರು ಬೆಳೆದ ಎಲ್ಲಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕೇಂದ್ರ ಸರ್ಕಾರ ಶಾಸನ ರೂಪಿಸುವಂತೆ ಶಿಫಾರಸ್ಸು ಮಾಡುವ ಅಧಿಕೃತ ನಿರ್ಣಯಗಳನ್ನು ದಿನಾಂಕ:22.02.2024 ರಂದು ಸದನವು ಅಂಗೀಕರಿಸಿದೆ.

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಉಪ ಸಭಾಧ್ಯಕ್ಷರಿಗೆ, ಸರ್ಕಾರಿ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಮಾನ್ಯ ಸಭಾಧ್ಯಕ್ಷರು ತಿಳಿಸಿದರು.

## 3. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ ಲಘು ಪ್ರಕಟಣೆ

**ಕರ್ನಾಟಕ ವಿಧಾನ ಪರಿಷತ್ತು**

**152ನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:13ನೇಫೆಬ್ರವರಿ, 2024**

ಸಂಖ್ಯೆ:12

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

1. ಶ್ರೀ ಶಶೀಲ್ ಜಿ ನಮೋಶಿ
2. ಡಾ: ತೇಜಸ್ವಿನಿ ಗೌಡ
3. ಶ್ರೀ ಮರಿತಿಬ್ಬೇಗೌಡ
4. ಶ್ರೀ ಮಂಜುನಾಥ್ ಭಂಡಾರಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯಶಾಸಕರುಗಳಿಗೆ,

## 4. ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಗೆ ಸದಸ್ಯರ ನಾಮನಿರ್ದೇಶನದ ಲಘುಪ್ರಕಟಣೆ

**ಕರ್ನಾಟಕ ವಿಧಾನಸಭೆ**

**(ಹದಿನಾರನೇ ವಿಧಾನಸಭೆ)**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ 11 ನೇ ಜನವರಿ, 2024**

**ಸಂಖ್ಯೆ: 62**

2023–24 ನೇ ಸಾಲಿನ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸದಸ್ಯರಾಗಿದ್ದ ಶ್ರೀ ಬಿ. ಸುರೇಶ್‌ಗೌಡ ಅವರು ರಾಜೀನಾಮೆ ನೀಡಿದ್ದರಿಂದ ತೆರವಾಗಿರುವ ಸದಸ್ಯತ್ವ ಸ್ಥಾನಕ್ಕೆ ಶ್ರೀ ಉದಯ್ ಬಿ. ಗರುಡಾಚಾರ್ ಅವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 209ರ ಮೇರೆಗೆ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

**5. ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ಸದಸ್ಯರ ನಾಮನಿರ್ದೇಶನದ ಲಘುಪ್ರಕಟಣೆ**

# ಕರ್ನಾಟಕ ವಿಧಾನಸಭೆ

**(ಹದಿನಾರನೇ ವಿಧಾನಸಭೆ)**

## ಲಘು ಪ್ರಕಟಣೆ ಭಾಗ–2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ 02 ಫೆಬ್ರವರಿ 2024**

**ಸಂಖ್ಯೆ: 69**

2023–24ನೇ ಸಾಲಿನ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ ಸದಸ್ಯರಾಗಿದ್ದ ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ ಅವರು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಆಯ್ಕೆಗೊಂಡಿರುವುದರಿಂದ ತೆರವಾದ ಸ್ಥಾನಕ್ಕೆ ಶ್ರೀ ರವಿಸುಬ್ರಮಣ್ಯ ಎಲ್.ಎ. ಇವರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 209ರ ಮೇರೆಗೆ ಸಮಿತಿಯ ಸದಸ್ಯರನ್ನಾಗಿ ಸನ್ಮಾನ್ಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

**ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸದಿರುವಂತೆ ಸನ್ಮಾನ್ಯ ಸಭಾಧ್ಯಕ್ಷರು ನಿರ್ದೇಶಿಸಿರುವ ಬಗ್ಗೆ ಲಘು ಪ್ರಕಟಣೆ**

# ಕರ್ನಾಟಕ ವಿಧಾನಸಭೆ

## (ಹದಿನಾರನೇ ವಿಧಾನಸಭೆ)

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

## ಗುರುವಾರ, ದಿನಾಂಕ 21 ಮಾರ್ಚ್, 2024

---

**ಸಂಖ್ಯೆ: 79**

ಭಾರತ ಚುನಾವಣಾ ಆಯೋಗವು ಲೋಕಸಭೆಯ ಸಾರ್ವತ್ರಿಕ ಚುನಾವಣೆಯ ಪ್ರಯುಕ್ತ ದಿನಾಂಕ: 16.03.2024ರಂದು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಸದರಿ ಚುನಾವಣೆಯು ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ವಿವಿಧ ಹಂತಗಳಲ್ಲಿ ನಡೆದು ಜೂನ್ 4 ರಂದು ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿದೆ. ಈ ಚುನಾವಣಾ ಕಾರ್ಯದಲ್ಲಿ ಕಾಯಾಂಗದ ವಿವಿಧ ಇಲಾಖೆಗಳ ಮುಖ್ಯಸ್ಥರುಗಳು ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಮತ್ತು ವಿಧಾನಸಭೆಯ ಅಧಿಕಾರಿ/ನೌಕರರುಗಳನ್ನು ಸಹ ಚುನಾವಣಾ ಕಾರ್ಯಕ್ಕೆ ನಿಯೋಜಿಸುವಂತೆ ಕೋರಿಕೆ ಬಂದಿರುವ ಹಿನ್ನೆಲೆಯಲ್ಲಿ ದಿನಾಂಕ: 21.03.2024 ರಿಂದ ಚುನಾವಣಾ ಪ್ರಕ್ರಿಯೆಯು ಮುಕ್ತಾಯಗೊಳ್ಳುವವರೆಗೂ ವಿಧಾನಮಂಡಲದ/ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳ ಸಭೆಗಳನ್ನು ನಡೆಸದಿರುವಂತೆ ಸನ್ಮಾನ್ಯ ಸಭಾಧ್ಯಕ್ಷರು ನಿರ್ದೇಶಿಸಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಸದಸ್ಯರುಗಳಿಗೆ ತಿಳಿಯಪಡಿಸಲಾಗಿದೆ.

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

**ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

# ಭಾಗ–3

# ಸಂಸತ್ ಸುದ್ದಿಗಳು

## 1. ಸರ್ಕಾರಿ ನೇಮಕಾತಿ ಪರೀಕ್ಷೆ ಅಕ್ರಮ ತಡೆಗೆ ಮಸೂದೆ

ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಪ್ರಶ್ನೆ ಪೇಪರ್ ಸೋರಿಕೆ ಮತ್ತು ನಕಲಿ ವೆಬ್‌ಸೈಟ್‌ಗಳಂತಹ ಅವ್ಯವಹಾರಗಳನ್ನು ತಡೆಯಲು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಿದ್ದು, ಅಪರಾಧಿಗಳಿಗೆ ಕನಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ಗರಿಷ್ಠ ಒಂದು ಕೋಟಿ ರೂ.ದಂಡ ವಿಧಿಸುವ ಪ್ರಸ್ತಾಪ ಮುಂದಿಟ್ಟಿದೆ. ಪ್ರಸ್ತುತ ಕೇಂದ್ರ ಸರ್ಕಾರ ಮತ್ತು ಅದರ ಏಜೆನ್ಸಿಗಳು ನಡೆಸುವ ಸಾರ್ವಜನಿಕ ಪರೀಕ್ಷೆಗಳಲ್ಲಿ ಅಕ್ರಮ, ಅನ್ಯಾಯ ನಡೆದರೆ ಈ ಅಪರಾಧಕ್ಕೆ ಶಿಕ್ಷೆ ನೀಡಲು ನಿರ್ದಿಷ್ಟವಾದ ಕಾನೂನು ಇಲ್ಲ. ಈ ಕೊರತೆ ನೀಗಿಸಲು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ ಸಿಂಗ್ ಅವರು ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ಮಾರ್ಗಗಳ ತಡೆ) ಮಸೂದೆ, 2024ನ್ನು ಮಂಡಿಸಿದ್ದಾರೆ.

**ಆಧಾರ**: ವಿಜಯವಾಣಿ, ದಿನಾಂಕ:06.02.2024.

## 2. ಸೋನಿಯಾ ಸೇರಿ 41 ಮಂದಿ ಅವಿರೋಧ ಆಯ್ಕೆ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಎಲ್. ಮುರುಗನ್ ಸೇರಿದಂತೆ 41 ಮಂದಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಮಪತ್ರಗಳ ವಾಪಸಾತಿಗೆ ದಿನಾಂಕ:2.02.2024 ರಂದು ಕಡೆಯ ದಿನವಾಗಿತ್ತು. ಚುನಾವಣೆ ನಡೆದ ಸ್ಥಾನಗಳಷ್ಟೇ ಅಭ್ಯರ್ಥಿಗಳು ಕಣದಲ್ಲಿದ್ದ ರಾಜ್ಯಗಳಲ್ಲಿ ಅಭ್ಯರ್ಥಿಗಳ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು. ಉಳಿದಂತೆ ಹೆಚ್ಚುವರಿ ಅಭ್ಯರ್ಥಿ ಕಣದಲ್ಲಿರುವ ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಫೆಬ್ರವರಿ 27ರಂದು ಚುನಾವಣೆ ನಡೆಯಲಿದೆ.

ಈ ಮೂರು ರಾಜ್ಯಗಳಿಂದ ರಾಜ್ಯಸಭೆಯ ಒಟ್ಟು 15 ಸ್ಥಾನಗಳಿಗೆ ಫೆಬ್ರವರಿ 27 ರಂದು ಮತದಾನ ನಡೆಯಲಿದೆ ಏಪ್ರಿಲ್ ಮೊದಲ ವಾರ ತೆರವಾಗಲಿರುವ 56 ಸ್ಥಾನಗಳಿಗೆ ಚುನಾವಣೆ ಘೋಷಿಸಲಾಗಿತ್ತು.

ಉತ್ತರ ಪ್ರದೇಶದಿಂದ ರಾಜ್ಯಸಭೆಯ 10 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, 11 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಜೆಪಿ ಇಲ್ಲಿ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಅಂತೆಯೇ ಕರ್ನಾಟಕದಲ್ಲಿ ನಾಲ್ಕು ಸ್ಥಾನಗಳಿಗೆ ಐವರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಒಂದು ಸ್ಥಾನಕ್ಕೆ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಕ್ರಮವಾಗಿ ಜೆಡಿಎಸ್ ಮತ್ತು ಬಿಜೆಪಿ ಇಲ್ಲಿ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿವೆ. ಹೀಗಾಗಿ, ಚುನಾವಣೆ ಕುತೂಹಲ ಕೆರಳಿಸಿದೆ.

ಇದುವರೆಗೂ ಬಿಜೆಪಿಯು 20 ಸ್ಥಾನ ಗೆದ್ದುಕೊಂಡಿದೆ ಕಾಂಗ್ರೆಸ್ 6, ತೃಣಮೂಲ ಕಾಂಗ್ರೆಸ್ 4, ವೈಎಸ್‌ಆರ್ ಕಾಂಗ್ರೆಸ್ 3, ಆರ್‌ಜೆಎಡಿ 2, ಎನ್‌ಸಿಪಿ, ಶಿವಸೇನೆ, ಬಿಆರ್‌ಎಸ್, ಜೆಡಿಯು ತಲಾ ಒಂದು ಸ್ಥಾನ ಗೆದ್ದುಕೊಂಡಿದೆ. ಒಟ್ಟಾರೆಯಾಗಿ ಬಿಜೆಪಿ ನೇತೃತ್ವದ ಎನ್‌ಡಿಎ 29 ಸ್ಥಾನ, ಇಂಡಿಯಾ ಮೈತ್ರಿಕೂಟ 12 ಸ್ಥಾನ ಗೆದ್ದುಕೊಂಡಂತಾಗಿದೆ.

ರಾಜಸ್ಥಾನದಿಂದ ಅವಿರೋಧವಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಈ ಮೂಲಕ ಲೋಕಸಭೆಯ ಸದಸ್ಯೆಯಾಗಿ 25 ವರ್ಷಗಳ ಪಯಣವನ್ನು ಅಂತ್ಯಗೊಳಿಸಲಿದ್ದಾರೆ. ಬಿಜೆಪಿಯ ಮದನ್ ರಾಠೋಡ್ ಮತ್ತು ಚುನ್ನಿ ಲಾಲ್ ಗರಾಸಿಯಾ ಅವರು ಇದೇ ಮೊದಲಿಗೆ ರಾಜ್ಯಸಭೆ ಪ್ರವೇಶಿಸುತ್ತಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಈ ಬಾರಿ ಗುಜರಾತ್‌ನಿಂದ ಅವಿರೋಧವಾಗಿ ರಾಜ್ಯಸಭೆ ಪ್ರವೇಶಿಸುತ್ತಿದ್ದಾರೆ. ಇವರೊಂದಿಗೆ ಜಸ್ವಂತ್ ಸಿನ್ಹಾ ಪಾರ್ಮರ್, ಮಯಂಕ್ ನಾಯಕ್ ಮತ್ತು ಗೋವಿಂದ್ ಢೋಲಕಿಯ ಅವರು ಆಯ್ಕೆಯಾದರು.

ಗುಜರಾತ್‌ನಲ್ಲಿ ಎಲ್ಲ ನಾಲ್ಕು ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿದೆ. ವಿಧಾನಸಭೆಯಲ್ಲಿ ಸಂಖ್ಯಾಬಲದ ಕೊರತೆಯಿಂದಾಗಿ ಕಾಂಗ್ರೆಸ್ ತನ್ನ ಹಾಲಿ ಸದಸ್ಯರ ಸ್ಥಾನವನ್ನು ಕಳೆದುಕೊಂಡಿದೆ.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಒಡಿಶಾದಿಂದ ಆಯ್ಕೆಯಾದರು. ಹಲವು ಪಕ್ಷಾಂತರ ಬೆಳವಣಿಗೆಗೆ ಸಾಕ್ಷಿಯಾದ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್‌ನ ಮಾಜಿ ನಾಯಕ, ಈಚೆಗೆ ಬಿಜೆಪಿಗೆ ಸೇರ್ಪಡೆಯಾಗಿದ್ದ ಅಶೋಕ್ ಚವಾಣ್ ಮತ್ತು ಮಿಲಿಂದ್ ದೇವ್ರಾ ಅವರ ಕ್ರಮವಾಗಿ ಬಿಜೆಪಿ ಮತ್ತು ಶಿವಸೇನೆ ಅಭ್ಯರ್ಥಿಗಳಾಗಿ ರಾಜ್ಯಸಭೆಗೆ ಆಯ್ಕೆಯಾದರು. ಇದರೊಂದಿಗೆ ಎನ್‌ಸಿಪಿ ಪ್ರಫುಲ್ ಪಟೇಲ್, ಬಿಜೆಪಿ ಅಭ್ಯರ್ಥಿಗಳಾದ ಮೇಧಾ ಕುಲಕರ್ಣಿ ಅಜಿತ್ ಘೋರ್ಪಡೆ ಅವರು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದರು.

ಪಶ್ಚಿಮ ಬಂಗಾಳದಲ್ಲಿ ಪತ್ರಕರ್ತೆ ಸಾಗರಿಕಾ ಘೋಷ್ ಸೇರಿದಂತೆ ತೃಣಮೂಲ ಕಾಂಗ್ರೆಸ್ ಪಕ್ಷದ ನಾಲ್ವರು ಹಾಗೂ ಬಿಜೆಪಿಯ ಒಬ್ಬರು ಆಯ್ಕೆಯಾದರು. ಸದಸ್ಯ ಬಲವಿಲ್ಲದ ಕಾಂಗ್ರೆಸ್ ರಾಜ್ಯದಲ್ಲಿ ಒಂದು ಸ್ಥಾನ ಕಳೆದುಕೊಂಡಿತು.

ನೆರೆಯ ಆಂಧ್ರಪ್ರದೇಶದಲ್ಲಿ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಎಲ್ಲ ಮೂರು ಸ್ಥಾನ ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ರೇಣುಕಾ ಚೌದರಿ, ಅನಿಲ್‌ಕುಮಾರ್ ಯಾದವ್ ಆಯ್ಕೆಯಾದರು.

**ಆಧಾರ**:ಪ್ರಜಾವಾಣಿ, ದಿನಾಂಕ:21.02.2024.

## 3. ಜುಲೈ 1ರಿಂದ ಹೊಸ ಕ್ರಿಮಿನಲ್ ಕಾಯ್ದೆ ಜಾರಿಗೆ

ಬ್ರಿಟಿಷರ ಕಾಲದ ಕ್ರಿಮಿನಲ್ ಕಾಯ್ದೆಗಳನ್ನು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಜುಲೈ ಒಂದರಿಂದ ಹೊಸ ಕಾಯ್ದೆಗಳನ್ನು ಜಾರಿಗೊಳಿಸಲಿದೆ. ಹಳೆಯ ಭಾರತೀಯ ದಂಡಸಂಹಿತೆಯನ್ನು ಬದಲಿಸಿ ಅದರ ಜಾಗದಲ್ಲಿ ಮೂರು ಅಪರಾಧ ತಡೆ ಕಾನೂನು ಜಾರಿಯಾಗಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಮೂರು ಮಸೂದೆಗಳಿಗೆ 2023ರ ಡಿಸೆಂಬರ್ 21 ರಂದು ಸಂಸತ್ತಿನ ಅಧಿವೇಶನದಲ್ಲಿ ಅನುಮೋದನೆ ದೊರೆತ್ತಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಡಿಸೆಂಬರ್ 25ರಂದು ಮಸೂದೆಗಳಿಗೆ ಸಹಿ ಹಾಕಿದ್ದರು.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ:25.02.2024

## 4. President Murmu nominates Sudha Murty to Rajya Sabha

President Droupadi Murmu on 08.03.2024 nominated acclaimed philanthropist and author Sudha Murty to the Upper House from the President's quota. It comes a day after the country celebrated Women's Day glorifying the power of Nari-Shakti (wome-power).

Sharing it on his X account, Prime Minister Narendra Modi posted. I am delighted that the president of India has nominated Sudha Murty Ji to the Rajaya Sabha, Sudha Ji's contributions to diverse fields including social work, philanthropy and education have been immense and inspiring. The president can nominate 12 personalities from different fields to the Rajaya Sabha.

Murty, wife of Infosys cofounder NR Narayana Murthy, is a recipient of Padma Shri in 2006 and Padma Bhushan in 2023, recognizing her work in philanthropy.

Murty posted on X, Thank you, Hon'ble Prime Minister shri ! narendramodi Ji. It is my privilege and honour to be nominated to the Rajya Sabha by our Hon'ble president of India Smt. Droupadi Murmu Ji@rashtrapatibhvn. I am very grateful for the opportunity to serve our nation. She said her nomination was a double surprise as it came on Women's Day.

" Iam grateful for the opportunity to server our country and its people, both of whom have taught me so much about life and have given my family and me ar more than we could ever imagine.

In a statement Murty said, I shall strive to live up to what my elders taught me when I was growing up, that the purpose of this life and body is to serve others."

BJP state president BY Vijayendra posted on X. It's a moment of great pride for the entire Karnataka to witness Sudha Murth Ji's remarkable contributions to society. Philanthropy, and education being recognized. This nomination truly embodies the essence of Nari Shakti under the guidance of our Prime Minister shri@narendramodi ji. Heartily wishing her a successful tenure in Parliament.

**Courtesy:** Indian Express, date:09.03.2024.

## 5. ಪೌರತ್ವ ತಿದ್ದುಪಡಿ ಕಾಯ್ದೆ ಕಡೆಗೂ ಜಾರಿ

ವಿವಾದಾತ್ಮಕ ಪೌರತ್ವ ತಿದ್ದುಪಡಿ ಕಾಯ್ದೆ ಸಂಸತ್ತಿನಲ್ಲಿ ಅನುಮೋದನೆಗೊಂಡ ನಾಲ್ಕು ವರ್ಷಗಳ ನಂತರ ಜಾರಿಗೆ ತರಲಾಗಿದೆ. ಕಾಯ್ದೆಗೆ ನಿಯಮಗಳನ್ನು ರಚಿಸಿ, ಅಧಿಸೂಚನೆ ಹೊರಡಿಸಲಾಗಿದೆ.

ಚುನಾವಣೆಗೆ ಮುಂಚಿತವಾಗಿಯೇ ಪೌರತ್ವ ಕಾಯ್ದೆ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕೆಲವು ವಾರಗಳ ಹಿಂದೆ ಪ್ರಕಟಿಸಿದ್ದರು. ಅದರಂತೆ ಅಧಿಸೂಚನೆ ಹೊರಬಿದ್ದಿದೆ. ಈ ನಿಯಮಗಳನ್ನು ಪೌರತ್ವ ತಿದ್ದುಪಡಿ ನಿಯಮಗಳು 2024 ಎಂದು ಕರೆಯಲಾಗಿದ್ದು, ಪೌರತ್ವ ತಿದ್ದುಪಡಿ ಕಾಯ್ದೆ–2019ರ ಅನುಷ್ಠಾನವನ್ನು ಈ ಮೂಲಕ ಮಾಡಲಾಗುತ್ತದೆ ಎಂದು ಗೃಹ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ. ಇದಕ್ಕಾಗಿ ವಿಶೇಷವಾಗಿ ರಚಿಸಲಾಗುವ ವೆಬ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕವೇ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಆಧಾರ**: ಸಂಯುಕ್ತ ಕರ್ನಾಟಕ, ದಿನಾಂಕ:12.03.2024

# ಭಾಗ–4

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಇಸ್ರೋ ಮತ್ತೊಂದು ವಿಕ್ರಮ: ಕಕ್ಷೆ ಸೇರಿದ ಆದಿತ್ಯ ಸೌರ ನೌಕೆ

ಇಸ್ರೋ(ಭಾರತೀಯ ಬಾಹ್ಯಾಕಾಶ ಸಂಸ್ಥೆ) ಇದೇ ಮೊದಲ ಬಾರಿಗೆ ಕೈಗೊಂಡಿರುವ ಆದಿತ್ಯಯಾನ ಯೋಜನೆ ಯಶಸ್ವಿಯಾಗಿದೆ. ಸೂರ್ಯನ ಅಧ್ಯಯನಕ್ಕಾಗಿ ಉಡಾಯಿಸಿದ್ದ ಆದಿತ್ಯ ಎಲ್–1 ನೌಕೆಯನ್ನು ನಿಗದಿತ ಕಕ್ಷೆಯಾದ ಲಾಗ್ರೇಂಜ್ ಪಾಯಿಂಟ್–1ಗೆ ತಲುಪಿಸುವಲ್ಲಿ ಭಾರತೀಯ ವಿಜ್ಞಾನಿಗಳು ಸಫಲರಾಗಿದ್ದಾರೆ. ಇಂತಹ ಮಹೋನ್ನತ ಸಾಧನೆ ಮಾಡಿದ ಜಗತ್ತಿನ 2ನೇ ದೇಶ ಎಂಬ ಹೆಗ್ಗಳಿಕೆಯನ್ನು ಭಾರತ ಪಡೆದುಕೊಂಡಿದೆ.

ಕಳೆದ ವರ್ಷ ಚಂದ್ರಯಾನ– 3 ನೌಕೆಯನ್ನು ಚಂದ್ರನ ದಕ್ಷಿಣ ಧ್ರುವದಲ್ಲಿಳಿಸಿ ಭಾರತ ದಾಖಲೆ ನಿರ್ಮಿಸಿತ್ತು. ಆದಿತ್ಯನನ್ನು ಉಡಾವಣೆ ಮಾಡಿತ್ತು. ಇದೀಗ ಆದಿತ್ಯ ತನ್ನ ಗುರಿ ತಲುಪಿದೆ. ಈ ಎರಡೂ ಸಾಧನೆಗಳು ಇಡೀ ವಿಶ್ವವನ್ನೇ ನಿಬ್ಬೆರಗಾಗಿಸಿವೆ.

ಆದಿತ್ಯ ಎಲ್–1 ನೌಕೆಯನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿದ ಬಳಿಕ ಈವರೆಗೆ ನಾಲ್ಕು ಬಾರಿ ಉಪಗ್ರಹದ ಕಕ್ಷೆಯನ್ನು ಎತ್ತರಕ್ಕೇರಿಸುವಲ್ಲಿ ಇಸ್ರೋ ವಿಜ್ಞಾನಿಗಳು ಯಶಸ್ವಿಯಾಗಿದ್ದರು. ಆದಿತ್ಯ ಎಲ್–1 ನೌಕೆಯನ್ನು ಅದರ ನಿಗದಿತ ಕಕ್ಷೆಯಾದ ಲಾಗ್ರೇಂಜ್ ಪಾಯಿಂಟ್‌ಗೆ ತಳ್ಳುವ ಅತ್ಯಂತ ಕಠಿಣ ತಮ್ಮ ಪ್ರಯತ್ನ ನಡೆಸಿ, ವಿಜ್ಞಾನಿಗಳು ಯಶಸ್ಸು ಕಂಡಿದ್ದಾರೆ. ಅದರಂತೆ ಬಾಹ್ಯಾಕಾಶ ನೌಕೆಯನ್ನು ಮತ್ತಷ್ಟು ಎತ್ತರಕ್ಕೇರಿಸಿ, ಲಾಂಗ್ರೇಜ್ ಪಾಯಿಂಟ್‌ನಲ್ಲಿ ಅದನ್ನು ಸುತ್ತು ಹೊಡೆಯುವಂತೆ ಮಾಡಲಾಗಿದೆ.

**ಆಧಾರ:** ಉದಯವಾಣಿ, ದಿನಾಂಕ:07.01.2024

## 2. ಅಟಲ್ ಸೇತು ಲೋಕಾರ್ಪಣೆ

ಅಭಿವೃದ್ಧಿ ಹೊಂದಿದ ಭಾರತ ಹೇಗಿರಲಿದೆ ಎಂಬುದನ್ನು ಭಾರತದ ಅತಿ ಉದ್ದದ ಸಮುದ್ರ ಸೇತುವೆಯಾದ ಅಟಲ್ ಸೇತು ಜಗತ್ತಿಗೆ ಹೇಳುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವಿ ಮುಂಬೈನಲ್ಲಿ ಸೇತುವೆ ಉದ್ಘಾಟಿಸಿದ ನಂತರ ಮಾತನಾಡಿದ ಪ್ರಧಾನಿ, ಅಭಿವೃದ್ಧಿ ಹೊಂದಿದ ಭಾರತದಲ್ಲಿ ಎಲ್ಲರಿಗೂ ಸೌಲಭ್ಯಗಳು ಸಿಗಲಿದೆ. ಎಲ್ಲರಿಗೂ ಸಮೃದ್ಧಿ ಮತ್ತು ಪ್ರಗತಿ ಲಭ್ಯವಾಗಲಿದೆ. ಜನರು ಮತ್ತು ಸ್ಥಳಗಳ ನಡುವೆ ದೂರಗಳು ಕಡಿಮೆಯಾಗಲಿದ್ದು, ದೇಶದ ಮೂಲೆ ಮೂಲೆಗಳನ್ನು ಸಂಪರ್ಕಿಸಲಾಗುತ್ತದೆ. ಜೀವನ ಅಥವಾ ಜೀವನೋಪಾಯ ಅಡೆತಡೆಯಿಲ್ಲದೆ ನಿರಂತರವಾಗಿ ನಡೆಯಲಿದೆ. ಇದು ಅಟಲ್ ಸೇತು ಸಂದೇಶವಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು. ಸೇತುವೆ ನಿರ್ಮಾಣಕ್ಕೆ ಜಪಾನ್ ನೀಡಿದ ಸಹಾಯ ಮತ್ತು ಬೆಂಬಲಕ್ಕಾಗಿ ಪ್ರಧಾನಿ ಮೋದಿ ಧನ್ಯವಾದ ಹೇಳಿದರು. ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಅವರೊಂದಿಗೆ ಈ ಸೇತುವೆ ನಿರ್ಮಾಣದ ಬಗ್ಗೆ ಚರ್ಚಿಸಿದ್ದೆ. ಮಹಾರಾಷ್ಟ್ರದಲ್ಲಿ ಮೊದಲ ಬಾರಿಗೆ ಡಬಲ್ ಇಂಜಿನ್ ಸರ್ಕಾರ ಬಂದಾಗ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಾಯಿತು. ಅಟಲ್ ಸೇತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನದ ಫಲ ಎಂದರು.

ಸೇತುವೆಯ ಮೇಲೆ ಬಳಸಲಾದ ದೀಪಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಲಾಗಿದೆ. ಜಲಚರ, ಪರಿಸರಕ್ಕೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಈ ಸೇತುವೆ ನಿರ್ಮಾಣದಲ್ಲಿ ಹಲವಾರು ಆತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ.

ಅಟಲ್ ಸೇತು ತೆರೆದ ರಸ್ತೆ ಟೋಲಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದ ಭಾರತದ ಮೊದಲ ಸಮುದ್ರ ಸೇತುವೆಯಾಗಿದೆ. ವಾಹನಗಳನ್ನು ನಿಲ್ಲಿಸದೆ ಗಂಟೆ 100 ಕಿಲೋಮೀಟರ್ ವೇಗದಲ್ಲಿ ಟೋಲ್ ಬೂತ್‌ಗಳ ಮೂಲಕ ಹಾದುಹೋಗಲು ಅನುವು ಮಾಡಿಕೊಡುತ್ತದೆ.

**ಆಧಾರ:** ವಿಜಯವಾಣಿ, ದಿನಾಂಕ:13.01.202

## 3. PM releases stamps, book on Lord Ram

As the countdown for the Ram temple consecration ceremony in Ayodhya nears its end, Prime Minister Narendra Modi dated: 18.01.2024 released six commemorative postage stamps on the temple along with a book of stamps depicting the life of Lord Ram released in other countries.

After releasing the stamps and the book, titled ‘Ramayana Modi remarked in a post on X. “ The impact of Prabhu shri Ram is global . Here is an album which showcases the various stamps in his honour released all around the world.

Later, in a video message, the PM said that these tickets are the smallest form of history books, artefacts and historical sites and serve as a miniature form of epics and great ideas.

The stamps contain designs of the Ram temple the chaupai Mangal Bhavan Amangal Hari Sun the Saryu river and sculptures in and around the temple. I am confident that the commemorative postage stamps and the book will continue to remind many generations to come of this auspicious occasion of the consecration of the Shri Ram Janmabhoomi temple, the PM said.

The appeal of Ram Sit and Ramayana goes beyond the boundaries of time, society caste, religion and region and connects with everyone, the PM stated in his message. Quoting Valmiki, the author of Ramayana, Modi said the epic and the Ram’s personality will live on among people as long as there are mountains and rivers on the earth.

The epic Ramayana gives the message of the victory of love and teaches people sacrifice, unity and bravery in the most difficult of times while connecting humanity, the PM said, adding that is why the epic has been a centre of global attraction and is looked at with respect everywhere.

The six stamps depict the Ram temple Lord Ganesh, Lord Hanuman. Jatayu, kevagtraj and mata  Shabari. Tagging details on X post, Modi said the book Ramayana which pays tribute to Lord Ram through stamps from all over the world, is an attempt to showcase the global appeal of the diety. This 48 page book covers stamps issued by more than of 20 countries, including the US, New Zealand Singapore, Canada, Cambodia and organisation like the  UN.

**Courtesy**: Indian express ದಿನಾಂಕ:19.01.2024.

## 4. ಸತತ 6ನೇ ಬಾರಿ ಬಜೆಟ್ ಮೊರಾರ್ಜಿ ದಾಖಲೆ ಸಮಕ್ಕೆ ನಿರ್ಮಲಾ ಸಜ್ಜು

ಸತತ 6ನೇ ಬಾರಿ ಆಯವ್ಯಯ ಮಂಡಿಸಿ ಮೊರಾರ್ಜಿ ದೇಸಾಯಿ ದಾಖಲೆ ಸರಿಗಟ್ಟಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಜ್ಜಾಗಿದ್ದಾರೆ. ಈಗಾಗಲೇ ಸತತ 5 ಪೂರ್ಣ ಬಜೆಟ್ ಮಂಡಿಸಿದ ಮೊದಲ ಪೂರ್ಣವಧಿ ಮಹಿಳಾ ಹಣಕಾಸು ಸಚಿವೆ ಎಂಬ ದಾಖಲೆ ನಿರ್ಮಲಾಗೆ ಸಂದಿದೆ. ಮುಂಬರುವ ಫೆಬ್ರವರಿ 1 ರಂದು ವಿತ್ತ ಸಚಿವೆ ನಿರ್ಮಲಾ ಸೀತಾಮನ್ ಮಧ್ಯಂತರ ಬಜೆಟ್ ಮಂಡಿಸಲಿದ್ದಾರೆ. ಈ ಮೂಲಕ ಸತತ 6 ಬಜೆಟ್ ಮಂಡಿಸಿದ್ದ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ದಾಖಲೆ ಸರಿಗಟ್ಟಿದಂತಾಗಲಿ. ಮೊರಾರ್ಜಿ ದೇಸಾಯಿ 1959–64ರ ಅವಧಿಯಲ್ಲಿ ಸತತ 6 ಬಾರಿ ಬಜೆಟ್ ಮಂಡಿಸಿದ್ದಾರೆ.

**ಆಧಾರ:** ಕನ್ನಡ ಪ್ರಭ ದಿನಾಂಕ:27.01.2024.

## 5. ಸುಪ್ರೀಂ ಸಂಕೀರ್ಣಕ್ಕೆ ರೂ. 800 ಕೋಟಿ

ಸುಪ್ರೀಂ ಕೋರ್ಟ್‌ನ ಕಟ್ಟಡ ಸಂಕೀರ್ಣದ ವಿಸ್ತರಣೆಗಾಗಿ ಕೇಂದ್ರ ಸರ್ಕಾರವು ರೂ.800 ಕೋಟಿ ಮೊತ್ತದ ಯೋಜನೆಗೆ ಅನುಮೋದನೆ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಸುಪ್ರೀಂ ಕೋರ್ಟ್‌ನ ವಜ್ರ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸುಲಲಿತ ನ್ಯಾಯವು ಪ್ರತಿಯೊಬ್ಬ ಭಾರತೀಯ ನಾಗರಿಕನ ಹಕ್ಕು ಸುಪ್ರೀಂ ಕೋರ್ಟ್ ಇದನ್ನು ಒದಗಿಸುವ ಮಾಧ್ಯಮವಾಗಿದೆ ಎಂದು ತಿಳಿಸಿದರು.

ಸುಲಲಿತ ಬದುಕು, ವ್ಯವಹಾರ ಪ್ರಯಾಣ, ಸಂವಹನವು ಸೇರಿದಂತೆ ಸುಲಲಿತ ನ್ಯಾಯವು ದೇಶದ ಪ್ರಮುಖ ಆದ್ಯತೆಗಳಾಗಿವೆ. ಎಂದು ಮೋದಿ ಉಲ್ಲೇಖಿಸಿದರು. ದೇಶದಲ್ಲಿನ ಸಂಪೂರ್ಣ ನ್ಯಾಯ ವ್ಯವಸ್ಥೆಯನ್ನು ನಿರ್ವಹಿಸುತ್ತಿರುವ ಸುಪ್ರೀಂ ಕೋರ್ಟ್, ಮಾರ್ಗದರ್ಶನವನ್ನು ನೀಡುತ್ತಿದೆ. ಎಲ್ಲ ಭಾಗಕ್ಕೂ ನ್ಯಾಯಾಲಯವು ಪ್ರವೇಶಿಸುವ ನಿಟ್ಟಿನಲ್ಲಿ ಸರ್ಕಾರ ಆದ್ಯತೆ ನೀಡುತ್ತಿದೆ. ಇ ಕೋರ್ಟ್ ಮಿಷನ್ ಯೋಜನೆಯ ಮೂರನೇ ಹಂತಕ್ಕೆ ಒಪ್ಪಿಗೆ ನೀಡಲಾಗುವುದು. ಮೂರನೇ ಹಂತದ ಅನುದಾನ ಹಂಚಿಕೆಯು ಎರಡನೇ ಹಂತಕ್ಕಿಂತ ನಾಲ್ಕು ಪಟ್ಟು ಹೆಚ್ಚಿರಲಿದೆ ಎಂದು ಅವರು ಹೇಳಿದರು.

ದೇಶದ ಎಲ್ಲಾ ನ್ಯಾಯಾಲಯಗಳ ಡಿಜಿಟಲೀಕರಣವನ್ನು ಮುಖ್ಯ ನ್ಯಾಯಮೂರ್ತಿಯವರೇ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದರು. ಹಳೆಯದರಿಂದ ಹೊಸದಕ್ಕೆ ತಡೆರಹಿತ ವರ್ಗಾವಣೆಯನ್ನು ಖಾತ್ರಿಪಡಿಸಲು ಎಲ್ಲಾ ಮಧ್ಯಸ್ಥಗಾರರ ಸಾಮರ್ಥ್ಯ ವರ್ಧನೆಯಲ್ಲಿ ತೊಡಗಿಸಿಕೊಳ್ಳುವ ಹಕ್ಕು ಪ್ರತಿಯೊಬ್ಬ ನಾಗರಿಕರಿಗೂ ಮತ್ತು ಸುಪ್ರೀಂ ಕೋರ್ಟ್‌ಗೂ ಇದೆ ಎಂದು ಅವರು ಒತ್ತಿ ಹೇಳಿದರು.

**ಆಧಾರ:** ಪ್ರಜಾವಾಣಿ ದಿನಾಂಕ:29.01.2024.

## 6. PRESIDENT MURMU VISITS INDIRA POINT

President Droupadi Murmu takes a stroll during her visit to Indira Point, the southernmost tip of the country, to meet the tri-service troops, in Nicobar on dated: 20.02.2024 Tuesday. The President is on a five-day visit to the archipelago from Monday, and also visited ‘Swantantraya Jyot’, an eternal flame kept there as a tribute to thousands of freedom fighters who suffered incarceration. She interacted with members of local tribal communites and visited stalls set up by them at Campbell Bay in Nicobar. The President, earlier in the day, also attended a civic reception hosted in her honour by the Andaman and

Nicobar administration at the Dr B. R. Ambedkar Institue of Technology. Speaking there, she said the Andaman and Nicobar Islands are very important from a strategic point of view. These island have special geographical importance in connecting India with the countries of South and South-East Asia. Therefore, the Andaman and Nicobar Islands are a core component of India's Act East Policy.

**Courtesy:** Times of India, date: 21.02.2024.

## 7. ಜಗತ್ತಿನಲ್ಲೇ ಅತಿದೊಡ್ಡ ರೈಲ್ವೆ ಸುಧಾರಣೆಗೆ ಮೋದಿ ಚಾಲನೆ

ಪ್ರಧಾನಿ ನರೇಂದ್ರ ಮೋದಿ ವಿಶ್ವದ ಅತಿದೊಡ್ಡ ಸುಧಾರಣೆ (ರೈಲ್ವೆ ಮರು ನಿರ್ಮಾಣ) ಯೋಜನೆಗೆ ಚಾಲನೆ ನೀಡಿದ್ದಾರೆ. ಈ ಪ್ರಕಾರ ಕರ್ನಾಟಕದ 34 ಸೇರಿದಂತೆ ದೇಶಾದ್ಯಂತ 554 ರೈಲ್ವೆ ನಿಲ್ದಾಣಗಳು ಮರು ಅಭಿವೃದ್ಧಿ ಹೊಂದಲಿದ್ದು, 1500 ರೈಲ್ವೆ ಮೇಲ್ಸೇತುವೆ ಕೆಳ ಸೇತುವೆಗಳ ನಿರ್ಮಾಣ ಹಾಗೂ ಮರು ಅಭಿವೃದ್ಧಿ ಕಾರ್ಯ ನಡೆಯಲಿದೆ. ಒಟ್ಟಾರೆ ಸುಮಾರು 41 ಸಾವಿರ ಕೋಟಿ ಮೌಲ್ಯದ 2000 ರೈಲ್ವೆ ಯೋಜನೆಗಳಿಗೆ ಅವರು ಶ್ರೀಕಾರ ಹಾಕಿದ್ದಾರೆ. ಯೋಜನೆಗಳಿಗೆ ವರ್ಚುವಲ್ ವಿಧಾನದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ 10 ವರ್ಷಗಳಲ್ಲಿ ರಾಷ್ಟ್ರ ಅಭಿವೃದ್ಧಿ ಹೊಂದುತ್ತಿರುವ ವೇಗವನ್ನು ಕಂಡು ಸ್ವತ: ಭಾರತೀಯರೇ ಅಚ್ಚರಿಗೊಳಗಾಗಿದ್ದಾರೆ.

**ಆಧಾರ:**ಕನ್ನಡ ಪ್ರಭ, ದಿನಾಂಕ:27.02.2024

## 8. India soars with multi warhead Agni-5

India on 11.03.2024 announced the successful maiden flight of a long-range ballistic missile fitted with MIRV technology that will allow the nuclear capable Agni-5 missile to simultaneously release multiple warheads towards different targets.

The DRDO conducted the first successful flight test of indigenously developed Agni-5 missile with MIRV technology. The flight test named Mission Divyastra was carried out from Dr APJ Abdul Kalam Island in Odisha. Various telemetry and radar stations tracked and monitored multiple re-entry vehicles. The mission accomplished the designed parameters, the Defence Ministry said in a statement.

The successful trail puts India in a select league of nations having the Multiple Independently Targetable Reentry Vehicle (MIRV) technology that was developed in the cold war era with the USA conducting the first test I 1970 followed by a submarine-launched MIRV a year later.

Besides the USA and Russia France, the UK and China are other nations that currently have such a weapon. In 2017, Pakistan also claimed to have successfully tested a MIRV system.

In a social media post, prime Minister Narendra Modi said proud of our DRDO scientists for Mission Divyastra, the first flight test of indigenously developed Agni-5 missile with Multiple Independently Targetable Reentry Vehicle (MIRV) technology, Modi said Defence Minister Rajnath Singh echoed the Prime Minister.

While the DRDO has been testing the Agni-5 missile since 2012 this is for the first time the MIRV technology was tested successfully even though Indian scientists were in the process of developing the system over the last decade or so.

The development of MIRV technology, according to the defence scientists, is not easy. It requires the combination of large missiles, small warheads accurate guidance, and complex mechanism for releasing warheads sequentially during flight.

Government sources said the project director was a woman, but did not disclose her identity. Also, there were significant contributions from other women scientists.

The nuclear-capable Agni 5 ballistic missile that uses a three-stage solid fuelled engine, was used for the MIRV trial, as it has an ability to hit targets at ranges up to 5,000 km with a very high degree of accuracy.

Strategic experts say one of the key reasons for India to pursue the MIRV technology was an effort to overcome the Chinese ballistic missile defence system as such technology can penetrate the missile defence by using multiple genuine or decoy warheads.

There is also the additional benefit of having multiple targeting options and cost-effectiveness as one missile can strike at tactical and strategic targets.

Moreover, the development of critical new weapon systems comes with the advantage of strengthening a state's case to stake a claim for a place in future arms control negotiations, they observe.

**Courtesy**: Deccan herald, Dated:12.03.2024.

## 9. K'taka gets two new Vande Bharat trains, one extension

Karnataka is getting two more Vande Bhart Express trains. One will connect Bengaluru with Kalaburagi and the other Mysuru with Chennai via Bengaluru. In addition, the Thiruvanathapuram-Kasaragod Vande Bharat Express has been extended to Mangaluru.

Prime Minister Narendra Modi will flag off the two new trains via video conference on Tuesday, the South Western Railway (SWR) said. After the flag-off, the railways will run an inaugural train from Chennai Central to SMVT Bengaluru. Train number 02664 will leave Chennai Central at 9.15 am on Tuesday and reach SMVT Bengaluru at 2.20 pm. It will stop at Katpadi and KR Puram, and have eight coaches.

The regular service-train number 20663/20664 Mysuru-chennai Central Mysuru Vande Bharat Express- will start on April 5 in both directions. this will be the Second Vande Bharat Express between Mysuru and Chennai. The first has been running since November 2022.

Train number 20663 2ill depart from Mysuru at 6 am and reach Chennai Central at 12.25 pm on all days, except Wednesday. It will stop at Mandya, KSR Bengaluru, KR Puram and Katpadi.

In the return direction, train number 20664 will leave Chennai Central at 5 pm and reach Mysuru at 11.20pm on all days except Wednesday. It will stop at Katpadi, KR puram, KSR Bengaluru and Mandya.

Train number 20663 SMVT Bengaluru Chennai Central Vande Bharat Express will depart from SMVT Bengaluru at 7.50 am and reach Chennai Central at 12.25 pm on all days except Wednesday.

In the return direction train number 20664 Chennai Central SMVT Bengaluru Vande Bhart Express will leave Chennai Central at 5 pm and reach SMVT Bengaluru at 9.30 pm on all days Wednesday.

Kalaburagi train: On Tuesday, the Central Railway(CR) will operate the inaugural special run of train number 02231 Kalaburagi- SMVT Bengaluru Vande Bharat Express with an eight coach rake.

The train will depart from Kalaburagi at 9.15 am and reach SMVT at 9.15 and reach SMVT Bengaluru at 6pm. It will stop at Raichur, Mantralayam Road Guntakal Anantapur and Yelahanka.

The regular service- train number 22231/22232 Kalaburagi SMVT Bengaluru Kalaburagi Vande Bharat Express will operate six days a week and its start date will be notified soon, the SWR said.

**Courtesy:** Deccan herald, Date: 12.03.2024.

## 10.ರಾಮಮಂದಿರ: ಶತಮಾನಗಳ ಕನಸು ನನಸು

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದೆ. ಅದರಲ್ಲೂ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಬೇಕು ಎಂಬ ದೇಶದ ಜನರ ಶತಮಾನಗಳ ಬಯಕೆ ಈಡೇರಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

‘ಬಾಲರಾಮ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೊಂಡ ನಂತರದ 5 ದಿನಗಳ ಅವಧಿಯಲ್ಲಿ 13 ಲಕ್ಷ ಭಕ್ತರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ. ಜನವರಿ 22ರಂದು ನೆರವೇರಿದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಹೊಸಯುಗ ಆರಂಭಗೊಂಡ ಕ್ಷಣ ಎಂದು ಬಣ್ಣಿಸಿದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕುರಿತು ರಾಷ್ಟ್ರಪತಿಗಳು ತಮ್ಮ ಭಾಷಣ ಪ್ರಸ್ತಾಪಿಸುತ್ತಿದ್ದಂತೆಯೇ, ಸದನದಲ್ಲಿ ಸದಸ್ಯರ ಕರತಾಡನ ಮಾರ್ದನಿಸಿತು. ಉಭಯ ಸದನಗಳ ಸದಸ್ಯರು ಮೇಜುಗಳನ್ನು ತಟ್ಟಿ ಸಂಭ್ರಮ ಸಂತೋಷ ವ್ಯಕ್ತಪಡಿಸಿದರು.

ನೂತನ ಸಂಸತ್ ಭವನದಲ್ಲಿ ಆರಂಭವಾದ ಬಜೆಟ್ ಅಧಿವೇಶನದ ಮೊದಲ ದಿನ ಅವರು ಎರಡೂ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು.

ಮುಂದಿನ ಶತಮಾನಗಳಿಗಾಗಿ ಭಾರತವು ಹೊಸ ಹಾದಿ ತುಳಿಯಬೇಕಾದ ಸಮಯವಿದು. ನಮ್ಮ ಪೂರ್ವಜರು ಸಾವಿರಾರು ವರ್ಷಗಳ ಭವ್ಯ ಪರಂಪರೆಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ನಮ್ಮ ಪೂರ್ವಿಕರ ಅಸಾಧಾರಣ ಸಾಧನೆಗಳನ್ನು ಇಂದಿಗೂ ನಾವು ಮೆಲುಕು ಹಾಕುತ್ತೇವೆ. ಇವುಗಳ ಆಧಾರದ ಮೇಲೆ ನಮ್ಮ ಇಂದಿನ ಪೀಳಿಗೆಗಳು ಮುಂಬರುವ ದಿನಗಳಲ್ಲಿ ಯಾರೂ ಮರೆಯಲಾಗದಂತಹ ಪರಂಪರೆಯನ್ನು ನಿರ್ಮಿಸಬೇಕು ಎಂದು ಮುರ್ಮು ಪ್ರತಿಪಾದಿಸಿದರು.

**ಆಧಾರ:**ಪ್ರಜಾವಾಣಿ, ದಿನಾಂಕ:28.03.2024.

# ಭಾಗ–5

# ರಾಜ್ಯ ಸರ್ಕಾರದ ಸುದ್ದಿಗಳು

## 1. Cabinet nod for gratuity to unorganised sector workers

The state cabinet approved a proposal of the labour department to implement the payment of Gratuity Act 2024 to ensure that workers in the unorganised sector enjoy the benefits of it. Revealing this to reporters here, Law Minister HK Patil said the implementation of the Act will help those working in factories, shops and and other commercial and non establishment (unorganised sector). They will get gratuity for the number of years of service in any organisation in the sector on the lines of Provident fund facility in the organised sector.

The cabinet decided to increase the upper age limit for recruitment of gazetted probationary officers for 2023-24. The upper age limit has been relaxed from 35 to 38 for general, 38 to 41 for OBCs and from 40 to 43 for SC and STs.

The other decisions are Extension of deadline by three more months to surrender wild life trophies and item, increase the percentage of Kannada in name boards from 50 to 60 for business establishments, Rs 800 crore for white-topping of roads in BBMP limits, Rs 25 crore to upgrade infrastructure at UVCE in Bengaluru, to continue at UVCE in Bengaluru, to continue grant-in-aid or salaries of teaching and non-teaching staff of BVB Engineering College in Hubballi till 2024-25, Rs 71.38 core for data digitisation and migration support for 5,491 Primary Agricultural Credit Society (PACS), reduce the year of service from 5 to 3 for assistant registrars, giving powers to invite tenders for procurement of item for hostels run by the BC department to deputy commissioners and a grant of Rs 45.70 crore for Chamundeshwari temple in Mysuru.

The cabinet decided to exempt motor vehicle tax on BMTC, KSRTC, NWKRTC and KKRTC amounting to Rs 581.47 crore. It approved a proposal to run 10 double-decker electric buses through Gross Cost Contract (GCC) in Bengaluru.

To protect the legislators, who have been appointed as CM's advisors with cabinet rank from the threat of disqualification for holding the office of profit the cabinet decided to implement the Karnataka Legislature Prevention of disqualification (amendment) Bill, 2024, through a government order.

**Courtesy**: IndianExpress, date: 06.01.2024.

## 2. ಕನ್ನಡ ಫಲಕ: ಸರ್ಕಾರದ ಕಂಕಣ

ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮಗಳ ನಾಮಫಲಕಗಳಲ್ಲಿ ಕನ್ನಡವನ್ನು ಶೇ 60ರಷ್ಟು ಬಳಸುವುದನ್ನು ಕಡ್ಡಾಯ ಮಾಡಿ ಸುಗ್ರೀವಾಜ್ಞೆ ಹೊರಡಿಸಲು ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಇದಕ್ಕಾಗಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಗೆ ತಿದ್ದುಪಡಿ ಮಾಡಲು ತೀರ್ಮಾನಿಸಲಾಯಿತು. ಈ ಹಿಂದೆ ಶೇ.50 ರಷ್ಟು ಕಡ್ಡಾಯ ಇತ್ತು ಎಂದು ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡಬೇಕಾಗಿರುವುದರಿಂದ ಮೇಲಿನ ಅರ್ಧ ಭಾಗ ಎಂಬುದರ ಬದಲಾಗಿ ಶೇ.60ರಷ್ಟು ಭಾಗ ಕನ್ನಡ ಬಳಕೆ ಮಾಡಬೇಕು ಮತ್ತು ಕನ್ನಡ ಭಾಷೆಯು

ನಾಮಫಲಕದ ಮೇಲ್ಭಾಗದಲ್ಲೇ ಇರಬೇಕು. ಕನ್ನಡ ಸಂಸ್ಕೃತಿ ನಿರ್ದೇಶಕರ ಬದಲಿಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರನ್ನು ಸಂಚಾಲಕರನ್ನಾಗಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯವರನ್ನು ಸದಸ್ಯರನ್ನಾಗಿ ಮಾಡಲಾಗುವುದು. ಈ ಅಂಶವು ತಿದ್ದುಪಡಿಯಲ್ಲಿ ಒಳಗೊಂಡಿದೆ ಎಂದು ಪಾಟೀಲ ವಿವರಿಸಿದರು. ನಾಮಫಲಕದಲ್ಲಿ ಶೇ.50 ಕನ್ನಡ, ಉಳಿದ ಶೇ 50 ಅನ್ಯಭಾಷೆಗೆ ಅವಕಾಶ ಕಲ್ಪಿಸಿದ್ದ ನಿಯಮಕ್ಕೆ ತಿದ್ದುಪಡಿ ತಂದು, ಶೇ 60ರಷ್ಟು ಕನ್ನಡ ಮಿಕ್ಕ ಶೇ.40 ರಷ್ಟು ಅನ್ಯ ಭಾಷೆ ಬಳಕೆಗೆ ಸರ್ಕಾರ ಅವಕಾಶ ಕಲ್ಪಿಸಿದೆ. ಸಂಬಂಧಿಸಿದ ನಿಯಮಕ್ಕೆ ತಿದ್ದುಪಡಿಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಎಚ್.ಕೆ.ಪಾಟೀಲ ಹೇಳಿದರು. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ–2024ಕ್ಕೆ ಅನುಮೋದನೆ ನೀಡುವ ಈ ಮೂಲಕ ಕನ್ನಡ ಪರ ಹೋರಾಟಗಾರರನ್ನು ಸಂತೈಸಲು ನಾಡು–ನುಡಿಗೆ ಕಟಿಬದ್ಧವೆಂಬ ಸ್ಪಷ್ಟ ಸಂದೇಶವನ್ನು ಸರ್ಕಾರ ಸಾರಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ: 06.01.2024.

## 3. **ಕೆಪಿಎಸ್‌ಸಿ ಆಕಾಂಕ್ಷಿಗಳಿಗೆ, ಸಿಹಿ**

ಕರ್ನಾಟಕ ಲೋಕಸೇವಾ ಆಯೋಗವು ಹೊರಡಿಸಲಿರುವ ಅಧಿಸೂಚನೆ ಪ್ರಕಾರ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ಆಕಾಂಕ್ಷಿಗಳಿಗೆ ರಾಜ್ಯ ಸರ್ಕಾರ ಹೊಸ ವರ್ಷದ ಕೊಡುಗೆ ನೀಡಿದೆ. ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷಗಳ ಸಡಿಲಿಕೆ ನೀಡಿ ಒಂದು ಬಾರಿಗೆ ಮಾತ್ರ ಅನ್ವಯಿಸಲು ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ಅಸ್ತು ಎಂದಿದೆ. ಸಭೆಯ ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್ ಈ ಮಾಹಿತಿ ಹಂಚಿಕೊಂಡರು. 2023–2024ನೇ ಸಾಲಿನಲ್ಲಿ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿ ಹೊರಡಿಸಲಿರುವ ಅಧಿಸೂಚನೆಯಡಿ ಅರ್ಹ ಅಭ್ಯರ್ಥಿಗಳು ಒಂದು ಬಾರಿಗೆ ಮಾತ್ರ ಈ ಪ್ರಯೋಜನ ಪಡೆದುಕೊಳ್ಳಲಿದ್ದಾರೆ. ಕರೊನಾ ಸಾಂಕ್ರಾಮಿಕ ಪಿಡುಗು ಹಾಗೂ ನೇಮಕ ವಿಳಂಬದಿಂದ ಅರ್ಹ ಅಭ್ಯರ್ಥಿಗಳು ವಯೋಮಿತಿ ಕಾರಣಕ್ಕೆ ವಂಚಿತರಾಗಲಿದ್ದಾರೆ ಎಂಬ ಆತಂಕವನ್ನು ಸರ್ಕಾರ ಕೊನೆಗಾಣಿಸಿದೆ. ಸಾಮಾನ್ಯ ವರ್ಗ–35 ರಿಂದ 38, ಪ್ರವರ್ಗ 2ಎ, 2ಬಿ, 3ಎ, 3ಬಿ–38 ರಿಂದ 41, ಎಸ್‌ಟಿ, ಪ್ರವರ್ಗ–1: 40 ರಿಂದ 43 ವರ್ಷಕ್ಕೆ ವಯೋಮಿತಿ ಏರಿಕೆ ಮಾಡಿದೆ ಎಂದು ಎಚ್.ಕೆ.ಪಾಟೀಲ ವಿವರಿಸಿದರು.

**ಆಧಾರ:** ವಿಜಯವಾಣಿ, ದಿನಾಂಕ:06.01.2024.

## 4. **ರಾಜ್ಯ ಪೊಲೀಸರಿಗೆ ಸಿಎಂ ಬಂಪರ್ ಗಿಫ್ಟ್**

ರಾಜ್ಯ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರ್ಜರಿ ಗಿಫ್ಟ್ ನೀಡಿದ್ದಾರೆ. ಭವ್ಯವಾದ ಸುಸಜ್ಜಿತ ಪೊಲೀಸ್ ಭವನ ನಿರ್ಮಾಣ ಹಾಗೂ ರಾಜ್ಯದ ಪೊಲೀಸ್ ಸಿಬ್ಬಂದಿಗೆ ಬೆಳ್ಳಿ ಪದಕ ವಿತರಣೆಗೆ ತೀರ್ಮಾನಿಸುವ ಮೂಲಕ ರಾಜ್ಯ ಸರ್ಕಾರ ಪೊಲೀಸ್ ಇಲಾಖೆಗೆ ಒಂದಷ್ಟು ಪ್ರೋತ್ಸಾಹ ಕ್ರಮಗಳಿಗೆ ಮುಂದಾಗಿದೆ.

ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ಪೊಲೀಸ್ ಎಂದು ನಾಮಕರಣಗೊಂಡ ಸುವರ್ಣ ಮಹೋತ್ಸವದ ಅಂಗವಾಗಿ ಸುವರ್ಣ ಭವನ ಹಾಗೂ ಬೆಳ್ಳಿ ಪದಕ ವಿತರಿಸಲು ತೀರ್ಮಾಸಿಸಲಾಗಿದೆ ಎಂದು ಸ್ವತ: ಸಿಎಂ ಸಿದ್ದರಾಮಯ್ಯ ಅವರು ಪ್ರಕಟಿಸಿದ್ದಾರೆ. ಬೆಂಗಳೂರಿನಲ್ಲಿ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ಪೊಲೀಸ್ ನಾಮಕರಣದ ಸುವರ್ಣ ಮಹೋತ್ಸವದ ಪ್ರಯುಕ್ತ ಪೊಲೀಸ್ ಭವನ ನಿರ್ಮಾಣಕ್ಕೆ ಮುಂದಿನ ಬಜೆಟ್‌ನಲ್ಲಿ ಹಣ ನಿಗದಿಪಡಿಸಲಾಗವುದು ಎಂದು ಸಿಎಂ ಪ್ರಕಟಿಸಿದರು. ಕರ್ನಾಟಕ ಏಕೀಕರಣಕ್ಕೂ ಮುನ್ನ ಮೈಸೂರು ರಾಜ್ಯ ಪೊಲೀಸ್ ಎಂದು ಹೆಸರಿತ್ತು. ಏಕೀಕರಣದ ಬಳಿಕ ಕರ್ನಾಟಕ ರಾಜ್ಯ ಪೊಲೀಸ್ ಎಂದು ಹೆಸರು ಬದಲಾಗಿ 50 ವರ್ಷ (ಸುವರ್ಣ ಮಹೋತ್ಸವ) ತುಂಬಿರುವ ಹಿನ್ನೆಲೆಯಲ್ಲಿ ಎಲ್ಲಾ ಪೊಲೀಸ್ ಅಧಿಕಾರಿ–ಸಿಬ್ಬಂದಿಗೆ ಬೆಳ್ಳಿ ಪದಕ ನೀಡುವುದಾಗಿಯೂ ಸಿಎಂ ಸಿದ್ದರಾಮಯ್ಯ ಘೋಷಿಸಿದರು.

ರಾಜ್ಯದ ಎಲ್ಲಾ ಪೊಲೀಸ್ ಅಧಿಕಾರಿ–ಸಿಬ್ಬಂದಿ ವಾರ್ಷಿಕ ವೈದ್ಯಕೀಯ ತಪಾಸಣಾ ಭತ್ಯೆಯನ್ನು 1 ಸಾವಿರ ರೂ.ನಿಂದ 1,500ರೂ.ಗೆ ಹೆಚ್ಚಿಸಲಾಗುವುದು. 2013ರಲ್ಲಿ ನಮ್ಮ ಸರ್ಕಾರವೇ ಈ ವಾರ್ಷಿಕ ವೈದ್ಯಕೀಯ ತಪಾಸಣಾ ಭತ್ಯೆಯನ್ನು ಹೆಚ್ಚಳ ಮಾಡಿತ್ತು. ಇದೀಗ ಮತ್ತೆ ನಮ್ಮ ಸರ್ಕಾರವೇ ಏರಿಕೆ ಮಾಡುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನೂ ಭರ್ತಿ ಮಾಡಲಾಗುವುದು, ಜತೆಗೆ ರಾಜ್ಯ ಗುಪ್ತಚರ ವಿಭಾಗಕ್ಕೆ ಪ್ರತ್ಯೇಕ ನೇಮಕಾತಿ ಮಾಡಿಕೊಂಡು ಅವರಿಗೆ ಸೂಕ್ತ ತರಬೇತಿ ಕೊಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ಸಂದರ್ಭದಲ್ಲಿ ಪ್ರಕಟಿಸಿದರು.

ಇತ್ತೀಚೆಗೆ ಸೈಬರ್ ಕ್ರೈಂ ಅಪರಾಧಗಳು ಹೆಚ್ಚಾಗುತ್ತಿವೆ. ಹೀಗಾಗಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಸೈಬರ್ ವಿಭಾಗ ಬಲಪಡಿಸುವಂತೆ ಸೂಚಿಸಲಾಗಿದೆ. ಅದರ ಭಾಗವಾಗಿ ಮಾದಕವಸ್ತು ಮತ್ತು ಸೈಬರ್, ಆರ್ಥಿಕ ಮತ್ತು ಮಾದಕ ವಸ್ತು (ಸಿಇಎನ್) ಪೊಲೀಸ್ ಠಾಣೆಗಳ ಮುಖ್ಯಸ್ಥರನ್ನಾಗಿ ಡಿವೈಎಸ್‌ಪಿ/ಎಸಿಪಿ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಅವರ ಅಧೀನದಲ್ಲಿ ಇನ್‌ಸ್ಪೆಕ್ಟರ್ ಹಾಗೂ ಇತರೆ ಹಂತದ ಅಧಿಕಾರಿ–ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

**ಆಧಾರ:** ಉದಯವಾಣಿ, ದಿನಾಂಕ: 17.01.2024.

## 5. ಕಿತ್ತೂರು ತಾಲೂಕು ಹೆಸರು ಇನ್ಮುಂದೆ ಚನ್ನಮ್ಮನ ಕಿತ್ತೂರು

ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮ ಗೌರವಾರ್ಥ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿಗೆ ಚನ್ನಮ್ಮನ ಕಿತ್ತೂರು ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಅನುಮತಿ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಣೆ ನೀಡಿದ ಸಚಿವ ಎಚ್.ಕೆ.ಪಾಟೀಲ್ ಕಿತ್ತೂರು ರಾಣಿ ಚನ್ನಮ್ಮ ಅವರಿಗೆ ಗೌರವ ಸೂಚಿಸುವ ಸಲುವಾಗಿ, ಅವರ ಕಾರ್ಯಕ್ಷೇತ್ರವಾದ ಕಿತ್ತೂರು ತಾಲೂಕಿಗೆ ಅವರ ಹೆಸರನ್ನೇ ಇಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ. ಈ ಕುರಿತಂತೆ ಕಂದಾಯ ಇಲಾಖೆ ಪ್ರಸ್ತಾವನೆ ಸಲ್ಲಿಸಿತ್ತು. ಅದರಂತೆ ಇನ್ನುಮುಂದೆ ಕಿತ್ತೂರು ತಾಲೂಕನ್ನು ಚನ್ನಮ್ಮನ ಕಿತ್ತೂರು ಎಂದು ಕರೆಯಲಾಗುತ್ತದೆ ಎಂದರು.

ಅದೇ ರೀತಿ ಶಿವಮೊಗ್ಗ ನಗರದ ಹಳೇ ಜೈಲು ಆವರಣದಲ್ಲಿನ 46.32 ಎಕರೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಭೂಮಿಗೆ 'ಅಲ್ಲಮಪ್ರಭ ಉದ್ಯಾನವನ' ಎಂದು ನಾಮಕರಣ ಮಾಡಲಾಗುತ್ತದೆ. ಜತೆಗೆ ಹುಬ್ಬಳ್ಳಿಯ ಶ್ರೀ ಗುರು ಆರೂಢರು ಜನಿಸಿದ ವಿಜಯಪುರ ಜಿಲ್ಲೆ

ಬಸವನಬಾಗೇವಾಡಿ ತಾಲೂಕಿನ ನಂದಿಹಾಳ ಪಿಎಚ್ ಗ್ರಾಮಕ್ಕೆ 'ಆರೂಡ ನಂದಿಹಾಳ' ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಅನುಮತಿಸಲಾಗಿದೆ ಎಂದು ತಿಳಿಸಿದರು.

**ಆಧಾರ:** ಕನ್ನಡ ಪ್ರಭ, ದಿನಾಂಕ: 19.01.2024.

## 6. **ಸಿಬಿಐ ಮಾದರಿಯಲ್ಲಿ ಸಿಐಡಿಗೆ ಎಫ್‌ಐಆರ್ ದಾಖಲು ಅಧಿಕಾರ**

ತನಗೆ ವಹಿಸುವ ಅಪರಾಧ ಪ್ರಕರಣಗಳ ಸಂಬಂಧ ಸಿಬಿಐ ಮಾದರಿಯಲ್ಲಿ ಹೊಸದಾಗಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವ ಅಧಿಕಾರವನ್ನು ಅಪರಾಧ ತನಿಖಾ ದಳಕ್ಕೆ (ಸಿಐಡಿ) ನೀಡಿ ರಾಜ್ಯ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ.

ಇತ್ತೀಚಿಗೆ ಎಫ್‌ಐಆರ್ ದಾಖಲಿಸುವ ಅಧಿಕಾರ ಕೋರಿ ಸರ್ಕಾರಕ್ಕೆ ಸಿಐಡಿ, ಡಿಜಿಪಿ ಡಾ.ಎಂ.ಎ.ಸಲೀಂ ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ ಸರ್ಕಾರವು ಸಮ್ಮತಿಸಿದೆ. ಈ ಸಂಬಂಧ ಗೃಹ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಎನ್.ವನಜಾ ಆದೇಶ ಹೊರಡಿಸಿದ್ದಾರೆ. ಎಫ್‌ಐಆರ್ ದಾಖಲು ಬಗ್ಗೆ ವಿಶೇಷ ನ್ಯಾಯಾಲಯಕ್ಕೆ ಸಿಐಡಿ ಮಾಹಿತಿ ನೀಡಿದ್ದು, ಇನ್ಮುಂದೆ ಸಿಐಸಿ ತನಿಖೆಗೆ ಶಿಫಾರಸುಗೊಳ್ಳುವ ಪ್ರಕರಣಗಳಿಗೆ ಹೊಸದಾಗಿ ಎಫ್‌ಐಆರ್ ದಾಖಲಿಸಲಿದ್ದಾರೆ. ಇದರಿಂದ ಸಿಐಡಿಗೆ ಎಫ್‌ಐಆರ್ ಕೂಡಾ ಜಾಮೀನು ಪಡೆಯಬೇಕಾಗುತ್ತದೆ.

ಕೊಲೆ, ಸೈಬರ್ ವಂಚನೆ, ದರೋಡೆ ಹಾಗೂ ಆರ್ಥಿಕ ವಂಚನೆಗಳು ಸೇರಿ ರಾಜ್ಯದಲ್ಲಿ ನಡೆಯುವ ಬಹುಮುಖ್ಯ ಅಪರಾಧ ಪ್ರಕರಣಗಳನ್ನು ಸಿಐಡಿಗೆ ಸರ್ಕಾರ ವಹಿಸುತ್ತದೆ. ಈ ಪ್ರಕರಣಗಳ ಸಂಬಂಧ ಹಳೆಯ ಎಫ್‌ಐಆರ್ ಆಧರಿಸಿಯೇ ಸಿಐಡಿ ತನಿಖೆ ನಡೆಸುತ್ತಿತ್ತು. ಇದರಿಂದ ಆರೋಪಿಗಳನ್ನು ವಿಚಾರಣೆ ನಡೆಸುವುದು ಸೇರಿ ಕೆಲವು ತಾಂತ್ರಿಕ ತೊಂದರೆಯಿಂದ ತನಿಖೆ ಮೇಲೆ ಪರಿಣಾಮ ಬೀರುತ್ತಿತ್ತು. ಅಲ್ಲದೆ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆ ಸಹ ಆಗಿದ್ದವು. ಇದರಿಂದ ಆರೋಪಿಗಳಿಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅನುಕೂಲವಾಗುತ್ತಿತ್ತು. ಹೀಗಾಗಿ ಎಫ್‌ಐಆರ್ ದಾಖಲಿಸುವ ಅಧಿಕಾರವನ್ನು ಕೊಡುವಂತೆ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿತ್ತು.

**ಆಧಾರ:** ಕನ್ನಡ ಪ್ರಭ, ದಿನಾಂಕ: 20.01.2024.

## 7. **ಯುವನಿಧಿಗೆ 4 ಲಕ್ಷ ನೋಂದಣಿ ಗುರಿ**

ನಿರುದ್ಯೋಗಿ ಯುವ ಸಮುದಾಯಕ್ಕೆ ನೆರವು ನೀಡುವ ಯೋಜನೆಯಲ್ಲಿ ಇದುವರೆಗೂ ಒಂದು ಲಕ್ಷಕ್ಕೂ ಅಧಿಕ ನೋಂದಣಿಯಾಗಿದ್ದು, ಮಾರ್ಚ್ ಅಂತ್ಯದೊಳಗೆ ನಾಲ್ಕು ಲಕ್ಷಕ್ಕೆ ಏರಿಸುವ ಗುರಿಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೌಶಲಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ನ್ಯಾಡ್ (ನ್ಯಾಷನಲ್ ಅಕಾಡೆಮಿ ಡಿಪಾಸಿಟರಿ)ನಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಪದವೀಧರರ ಪ್ರಮಾಣ ಪತ್ರಗಳಿವೆ. ಅಲ್ಲಿಂದಲೂ ಮಾಹಿತಿ ಪಡೆಯಲಾಗುತ್ತಿದೆ ಎಂದರು. ದಾಖಲೆಗಳು ಹೊಂದಾಣಿಕೆಯಾಗಿ ಫಲಿತಾಂಶ ಬಂದು ಆರು ತಿಂಗಳಾಗಿರುವ ಅಭ್ಯರ್ಥಿಗಳಿಗೆ ಹಣ ವರ್ಗಾವಣೆಯಾಗುತ್ತಿದೆ. ಪ್ರತಿ ತಿಂಗಳು ಅಭ್ಯರ್ಥಿಗಳು ಕೆಲಸ ಸಿಕ್ಕಿಲ್ಲ ಹಾಗೂ ಉನ್ನತ ಶಿಕ್ಷಣಕ್ಕೆ ಹೋಗಿಲ್ಲವೆಂದು ಸ್ವಯಂ ಘೋಷಿತ ಪ್ರಮಾಣಪತ್ರವನ್ನು ಆಪ್‌ಲೋಡ್ ಮಾಡಬೇಕು ಎಂದು ಹೇಳಿದರು.

ಉದ್ಯೋಗ ಮೇಳ ಸಂಘಟನೆ ಮಾಡುವ ಉದ್ದೇಶದಿಂದ ರಚನೆಯಾಗಿರುವ ಉನ್ನತ ಸಮಿತಿ ಸಭೆಯನ್ನು ಕರೆಯಲಾಗಿದೆ. ಆ ಸಭೆಯಲ್ಲಿ ಉದ್ಯೋಗ ಮೇಳದ ಸ್ವರೂಪ ಅಂತಿಮ ಮಾಡಲಾಗುವುದು ಎಂದು ತಿಳಿಸಿದರು. ಬೆಂಗಳೂರಿನಲ್ಲಿ ಫೆಬ್ರವರಿ ಎರಡು ಅಥವಾ ಮೂರನೇ ವಾರದಲ್ಲಿ ಬೃಹತ್ ಉದ್ಯೋಗ ಮೇಳ ಸಂಘಟನೆ ಮಾಡಲಾಗುವುದು. 50 ಸಾವಿರ ಅಭ್ಯರ್ಥಿಗಳು ಹಾಗೂ ಕನಿಷ್ಠ 500 ಕಂಪನಿಗಳು ಭಾಗವಹಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಸಚಿವ ಶರಣಪ್ರಕಾಶ್ ಪಾಟೀಲ್ ವಿವರಿಸಿದರು. ಉದ್ಯೋಗ ಮೇಳವನ್ನು ನಿರಂತರವಾಗಿ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ನಡೆಸಲಾಗುತ್ತದೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಕೌಶಲ್ಯ ತರಬೇತಿ ನೀಡುವ ಬಗ್ಗೆ ಚಿಂತಿಸಲಾಗಿದೆ. ಕೌಶಲ್ಯ ತರಬೇತಿ ನೀಡುವ ಬಗ್ಗೆ ಚಿಂತಿಸಲಾಗಿದೆ. ಕೌಶಲ್ಯ ಸಲಹಾ ಸಮಿತಿ ನಡೆಸಬೇಕು ಎಂಬ ಬಗ್ಗೆ ಪೈಲಟ್ ಪ್ರಾಜೆಕ್ಟ್ ಆಗಿ ಮಾಡಲಾಗುವುದು. ಸರ್ಕಾರ ತರಬೇತಿ ವೆಚ್ಚ ಭರಿಸಲಿದೆ. ಪ್ರಮುಖವಾಗಿ ಉದ್ಯೋಗ ದೊರಕಬೇಕು ಎಂಬುದು ಸರ್ಕಾರದ ಉದ್ದೇಶ. ಪದವಿ ಕಲಿಕೆಯ ಹಂತದಲ್ಲಿಯೇ ಉದ್ಯೋಗ ಅವಕಾಶಗಳ ತರಬೇತಿ ನೀಡಲಾಗುವುದು ಎಂದರು.

**ಆಧಾರ:** ವಿಜಯವಾಣಿ ದಿನಾಂಕ: 23.01.2024.

## 8. ಕ್ರೀಡಾ ಕೋಟಾ: ಮೀಸಲಾತಿ ಹೆಚ್ಚಳ

ಪೊಲೀಸ್ ಇಲಾಖೆಯ ಉದ್ಯೋಗಾವಕಾಶದಲ್ಲಿ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿಯಿದ್ದು, ಆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಆಲೋಚನೆಯಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ 12ನೇ ಅಖಿಲ ಭಾರತ ಪೊಲೀಸ್ ಅರ್ಚರಿ ಚಾಂಪಿಯನ್‌ಷಿಪ್‌ನ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕ್ರೀಡೆ ಹಾಗೂ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಮೀಸಲಾತಿ ಹೆಚ್ಚಿಸುವುದು ಅಗತ್ಯ. 2022–23ನೇ ಸಾಲಿನಲ್ಲಿ ಕ್ರೀಡಾ ಕೋಟಾದ ಅಡಿ ಕಾನ್ಸ್‌ಟೇಬಲ್‌ಗೆ 80 ಮಂದಿ, ಪಿಎಸ್‌ಐಗೆ 20 ಮಂದಿ ಆಯ್ಕೆಗೊಂಡಿದ್ದರು ಎಂದರು.

ರಾಜ್ಯ ಪೊಲೀಸ್ ತಂಡವು ಸೇರಿದಂತೆ ದೇಶದ ನಾನಾ ರಾಜ್ಯಗಳ 24 ಪೊಲೀಸ್ ತಂಡಗಳು ಈ ಅರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದವು. ರಾಜ್ಯ ಪೊಲೀಸ್ ಇಲಾಖೆಯು ಮೊದಲ ಬಾರಿಗೆ ಅಖಿಲ ಭಾರತ ಅರ್ಚರಿ ಚಾಂಪಿಯನ್‌ಶಿಪ್ ಅಯೋಜಿಸಿದೆ. ಇದರಲ್ಲಿ 436 ಸ್ಪರ್ಧಿಗಳು ಪಾಲ್ಗೊಂಡಿದ್ದರು. ವಿವಿಧ ವಿಭಾಗದಲ್ಲಿ ಚಿನ್ನ, ಬೆಳ್ಳಿ, ಕಂಚು ಸೇರಿದಂತೆ 174 ಪದಕಗಳನ್ನು ವಿತರಿಸಲಾಗಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:05.02.2024

## 9. ಏರಿದ ಮುದ್ರಾಂಕ ಹೊರೆ

ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಿದ್ದ ರಾಜ್ಯ ಸರ್ಕಾರ ಇದೀಗ ಮುದ್ರಾಂಕ ಶುಲ್ಕವನ್ನು ಸಹ ಪರಿಷ್ಕರಣೆ ಮಾಡಿ ದಿನಾಂಕ: 05.02.2024ರಂದು ರಾಜ್ಯಪತ್ರವನ್ನು ಹೊರಡಿಸಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಣೆ ಮಾಡಿದಾಗ ಸಹಜವಾಗಿ ನೋಂದಣಿ ಶುಲ್ಕ ಸಹ ಹೆಚ್ಚಳವಾಗಿತ್ತು. ಇದೀಗ ಮುದ್ರಾಂಕ ಶುಲ್ಕವನ್ನು ಪರಿಷ್ಕರಣೆ ಮಾಡಿ ಕಂದಾಯ ಇಲಾಖೆ ಕಾಯ್ದೆಗೆ ತಿದ್ದುಪಡಿ ತಂದು ರಾಜ್ಯ ಪತ್ರದ ಮೂಲಕ ಮುದ್ರೆ ಒತ್ತಿದೆ. ಬೆಳಗಾವಿ ಸುವರ್ಣಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಕರ್ನಾಟಕ ಮುದ್ರಾಂಕ(ತಿದ್ದುಪಡಿ) ವಿಧೇಯಕ-2023 ಮಂಡಿಸಿದ್ದರು. ವಿಧೇಯಕದಲ್ಲಿ ದತ್ತುಪತ್ರ, ಅಫಿಡವಿಟ್, ಒಪ್ಪಂದ ಅಥವಾ ಅದರ ದಾಖಲೆಪತ್ರ, ಕ್ರಯಪತ್ರ ನೋಂದಣಿ, ಸರ್ಟಿಫಿಕೇಟ್, ಹಸ್ತಾಂತರ ಪತ್ರ ಕಂಪನಿಯ ಸಂಘದ ಜ್ಞಾಪನಾಪತ್ರ ಡಿಟಿಡಿ, ಪಾಲುದಾರಿಕೆಗೆ ಮರುರಚನೆ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಶುಲ್ಕ ದರವನ್ನು ಹೆಚ್ಚಳ ಮಾಡಲಾಗಿದೆ. ಈ ಹೆಚ್ಚಳದಿಂದ 4-5ಸಾವಿರ ಕೋಟಿ ರೂ ಆದಾಯದ ನಿರೀಕ್ಷೆಯಲ್ಲಿ ಸರ್ಕಾರವಿದೆ. ಮಾರ್ಗಸೂಚಿ ದರ ಪರಿಷ್ಕರಣೆ ನಡುವೆ ಮುದ್ರಾಂಕ ಶುಲ್ಕ ಏರಿಕೆಯಿಂದಾಗಿ ಸಾರ್ವಜನಿಕರಿಗೆ ಹೆಚ್ಚಿನ ಹೊರೆ ಬೀಳಲಿದೆ. ಅದರಲ್ಲಿಯೂ ಆಸ್ತಿ ಖರೀದಿ, ಕಟ್ಟಡ ನಿರ್ಮಾಣಕ್ಕೆ ಬ್ಯಾಂಕ್ ಸಾಲ ಪಡೆದು ಡಿಟಿಡಿ ನೋಂದಣಿಗೆ ಹೋಗುವರಿಗೆ ಹೆಚ್ಚಿನ ಹೊರೆ ಬೀಳಲಿದೆ. 10 ಲಕ್ಷ ವರೆಗಿನ ಡಿಟಿಡಿಗೆ ಶೇ 0.1 ಇದ್ದ ಮುದ್ರಾಂಕ ಶುಲ್ಕವನ್ನು ಶೇ 0.5ಕ್ಕೆ ಏರಿಸಿದೆ.

**ಆಧಾರ:** ವಿಜಯವಾಣಿ ದಿನಾಂಕ:06.02.2024.

## 10. ಅರಣ್ಯ ವಿಸ್ತರಣೆ ರಾಜ್ಯಕ್ಕೆ 2ನೇ ಸ್ಥಾನ

ಕಾಡುಗಳು ನಾಶವಾಗುತ್ತಿರುವ ಕಳವಳದ ನಡುವೆಯೇ ದೇಶಾದ್ಯಂತ 5,516 ಚದರ ಕಿ.ಮೀ. ಅರಣ್ಯ ಪ್ರದೇಶ ವಿಸ್ತರಣೆಯ ಸಿಹಿ ಸುದ್ದಿ ಹೊರಬಿದ್ದಿದೆ. ರಾಜ್ಯಗಳ ಅರಣ್ಯ ವರದಿಯನ್ನು (ಐಎಸ್ಎಫ್ಆರ್) ಭಾರತ ಅರಣ್ಯ ಸಮೀಕ್ಷೆಯಲ್ಲಿ (ಎಫ್ಎಸ್ಐ) ಈ ಮಾಹಿತಿ ನೀಡಲಾಗಿದೆ.

ಕರ್ನಾಟಕದಲ್ಲಿ 1,180 ಚ.ಕಿ.ಮೀ ಅರಣ್ಯ ವಿಸ್ತರಣೆಯಾಗಿದ್ದು, ಎರಡನೇ ಸ್ಥಾನ ದೊರೆತಿದೆ. ಆಂಧ್ರಪ್ರದೇಶ (1,637 ಚ.ಕಿ.ಮೀ) ಮೊದಲ ಸ್ಥಾನದಲ್ಲಿದ್ದರೆ, ಕೇರಳ-932, ಹಿಮಾಚಲ ಪ್ರದೇಶ (343 ಚ.ಕಿ.ಮೀ) ನಂತರದ ಸ್ಥಾನದಲ್ಲಿವೆ. ಆದರೆ, ಅರುಣಾಚಲಪ್ರದೇಶ, ಮಣಿಪುರದಲ್ಲಿ ಅರಣ್ಯ ಕಡಿಮೆಯಾಗಿದೆ. ಕೆಲವೆಡೆ ಅರಣ್ಯ ಪ್ರದೇಶದಲ್ಲಿ ಹೆಚ್ಚಳವಾಗಿದ್ದರೆ, ಕೆಲವೆಡೆ ಕುಸಿತ ದಾಖಲಾಗಿದೆ. ಅರಣ್ಯದ ಹೆಚ್ಚಳಕ್ಕೆ ಸಂರಕ್ಷಣಾ ಕ್ರಮಗಳು, ಅರಣ್ಯೀಕರಣ ಚಟುವಟಿಕೆಗಳು, ತೋಟಗಳಲ್ಲಿ ಮತ್ತು ಸಾಂಪ್ರದಾಯಿಕ ಅರಣ್ಯಗಳಲ್ಲಿ ವರ್ಧಿತ ರಕ್ಷಣಾ ಕ್ರಮಗಳು ಕಾರಣವೆಂದು ಹೇಳಲಾಗಿದೆ. ಅರಣ್ಯದ ಹೊರಗೆ ಮರದ ವಿಸ್ತರಣೆ, ನೆಡುತೋಪು, ಜೈವಿಕ ಒತ್ತಡ, ಅತಿಕ್ರಮಣ ಪ್ರದೇಶದಲ್ಲಿನ ತೆರವು ಹಾಗೂ ಅಭಿವೃದ್ಧಿ ಚಟುವಟಿಕೆಗಳು ಅರಣ್ಯ ಕುಸಿತಕ್ಕೆ ಕಾರಣ ಎನ್ನಲಾಗಿದೆ.

**ಆಧಾರ:** ವಿಜಯವಾಣಿ, ದಿನಾಂಕ: 07.02.2024

## 11. ಎಲ್ಲ ಸರ್ಕಾರಿ ಕಚೇರಿಯಲ್ಲಿ ಬಸವಣ್ಣನ ಭಾವಚಿತ್ರ

ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಎಂಬ ಘೋಷವಾಕ್ಯ ಇಡೀ ರಾಜ್ಯದ ತುಂಬ ಮೊಳಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಸವಣ್ಣನವರ ಭಾವಚಿತ್ರವನ್ನು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನಾವರಣ ಮಾಡಿ ಮಾತನಾಡಿದ ಅವರು, 'ಎಲ್ಲ ಸರ್ಕಾರಿ ಕಚೇರಿಗಳಲ್ಲಿ ದಿನಾಂಕ:17.02.2024 ರಂದು ಬಸವಣ್ಣನವರ ಭಾವಚಿತ್ರ ಅನಾವರಣ ಮಾಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕು

ಮಟ್ಟದಲ್ಲಿ ಶಾಸಕರು ಹಾಗೂ ನಗರ ಹಾಗೂ ಗ್ರಾಮೀಣ ಸಂಸ್ಥೆಗಳಲ್ಲಿ ಆಯಾ ಸಂಸ್ಥೆಯ ಅಧ್ಯಕ್ಷರಿಂದ ನೆರವೇರಿಸಲು ಸೂಚಿಸಲಾಗಿದೆ' ಎಂದರು.

'ಮನುಷ್ಯನು ಮನುಷ್ಯನನ್ನು ಪ್ರೀತಿಸಬೇಕು. ದ್ವೇಷಿಸುವುದು ದುರ್ಗುಣ, ಬಸವಣ್ಣ ಸಾಂಸ್ಕೃತಿಕ ನಾಯಕ ಎನ್ನುವುದು ಅತ್ಯಂತ ಯೋಗ್ಯವಾಗಿದೆ. ಎಲ್ಲ ಕಚೇರಿಗಳಲ್ಲಿಯೂ ಬಸವಣ್ಣ ನವರ ಭಾವಚಿತ್ರ ಇರಬೇಕು. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು. ಬಸವಾದಿ ಶರಣರ ವಚನಗಳು ಹಿಂದೆ ಇಂದು ಹಾಗೂ ಮುಂದೆಯೂ ಪ್ರಸ್ತುತವಾಗಿರಲಿವೆ. ಬಸವಣ್ಣನವರ ಕಾರ್ಯಕ್ರಮಕ್ಕೆ ಯಾವ ಕಾರಣಕ್ಕೂ ಸರ್ಕಾರದಲ್ಲಿ ಅನುದಾನದ ಕೊರತೆಯಿಲ್ಲ ಎಂದರು.

ನುಡಿದಂತೆ ನಡೆದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ವರ್ಗರಹಿತ ಜಾತಿರಹಿತ ಮೌಢ್ಯಗಳಿಲ್ಲದ ವೈಚಾರಿಕ ಸಮಾಜ ಸ್ಥಾಪನೆಯ ಆಶಯದಿಂದ ಅವರು ವಚನಗಳನ್ನು ರಚಿಸಿದರು. ಕಾಯಕ ದಾಸೋಹವನ್ನು ಬೋಧಿಸಿದ ಬಸವಣ್ಣನವರು ಯಾರೂ ಕುಳಿತು ತಿನ್ನದೇ ಕಾಯದಲ್ಲಿ ತೊಡಗಬೇಕೆಂದು ಪ್ರತಿಪಾದಿಸಿದರು. ಬಡವರು ಬಡವರಾಗಿಯೇ ಉಳಿಯುವ ಹಾಗೂ ಶ್ರೀಮಂತರ ಕುಳಿತು ತಿನ್ನುವ ವ್ಯವಸ್ಥೆ ಹೋಗಬೇಕು ಎಂದರು.

**ಆಧಾರ:** ಪ್ರಜಾವಾಣಿ, ದಿನಾಂಕ:14.02.2024

## 12. **ರಾಜ್ಯಾದ್ಯಂತ ಬಿ ಖಾತಾ**

ರಾಜ್ಯದ ಎಲ್ಲ ನಗರ, ಪಟ್ಟಣ ಪ್ರದೇಶಗಳಲ್ಲಿ ಕಂದಾಯ ಭೂಮಿಯಲ್ಲಿನ ಅನಧಿಕೃತ ಬಡಾವಣೆಗಳು ಹಾಗೂ ನಕ್ಷೆ ಮಂಜೂರಾತಿ ಇಲ್ಲದೆ ನಿರ್ಮಿಸಿದ ಕಟ್ಟಡಗಳಿಗೆ ಬಿ–ಖಾತೆ ನೀಡಿ, ಆಸ್ತಿ ತೆರಿಗೆ ಸಂಗ್ರಹಿಸುವ ಮಹತ್ವದ ನಿರ್ಣಯವನ್ನು ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡಿದೆ.

ರಾಜ್ಯಾದ್ಯಂತ  ಬಿ ಖಾತಾ ವಿಸ್ತರಣೆಯಿಂದ ರಾಜ್ಯ ಸರಕಾರವು ರೂ. 2,000 ಕೋಟಿ ಆದಾಯ ನಿರೀಕ್ಷಿಸಿದೆ. ರಾಜ್ಯದ ಬೊಕ್ಕಸ ತುಂಬಲು ನಾನಾ ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಣದ ಹಾದಿಗಳ ಶೋಧದ ಭಾಗವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಬಿ–ವಹಿ ಮಾದರಿಯನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳು ಹಾಗೂ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಜಾರಿ ಮಾಡಲಾಗುತ್ತಿದೆ.

ಈ ಸಂಬಂಧ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯ ಸಚಿವ ಸಂಪುಟದ ಉಪಸಮಿತಿಯ ಶಿಫಾರಸ್ಸು ಆಧರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ ಈ ನಿರ್ಧಾರ ತೆಗೆದುಕೊಂಡಿದೆ. ಈ ತೀರ್ಮಾನದಿಂದ ಆಸ್ತಿ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಗಣನೀಯ ಪ್ರಮಾಣದ ಹೆಚ್ಚಳ ನಿರೀಕ್ಷಿಸಲಾಗಿದೆ.

ಪ್ರಸ್ತುತ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 54.91 ಲಕ್ಷಕ್ಕೂ ಅಧಿಕ ಆಸ್ತಿಗಳಿದ್ದು, ಈ ಪೈಕಿ ಸುಮಾರು 34.35, ಲಕ್ಷಕ್ಕೂ ಹೆಚ್ಚು ಅನಧಿಕೃತ ಆಸ್ತಿಗಳಾಗಿವೆ. ಈ ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿದ್ದವು. ಈ ಸ್ವತ್ತುಗಳಿಗೆ ಕುಡಿಯುವ ನೀರು, ವಿದ್ಯುತ್, ರಸ್ತೆ ಸೇರಿದಂತೆ ನಾನಾ ಮೂಲಭೂತ ಸೌಕರ್ಯವನ್ನು ಸ್ಥಳೀಯ ಸಂಸ್ಥೆಗಳ ಮೂಲಕ ಕಲ್ಪಿಸಲಾಗುತ್ತಿದೆ. ಹಾಗಾಗಿ, ಬಿ.–ವಹಿ'ಯಲ್ಲಿ ಆಸ್ತಿಯನ್ನು ನಮೂದಿಸಿ ತೆರಿಗೆ ಸಂಗ್ರಹಿಸಬೇಕು ಎಂದು ಸಂಪುಟ ಉಪಸಮಿತಿ ಸರಕಾರಕ್ಕೆ ಶಿಫಾರಸ್ಸು ಮಾಡಿತ್ತು, ಬಡ ಮತ್ತು ಮಧ್ಯಮ ವರ್ಗದವರಿಗೆ ಹೆಚ್ಚು ಹೊರೆಯಾಗದಂತೆ ಆಸ್ತಿ ತೆರಿಗೆ ನಿಗದಿ ಮಾಡಲು ಸಂಪುಟ ನಿರ್ಧರಿಸಿತು ಎಂದು ತಿಳಿದುಬಂದಿದೆ.

**ಆಧಾರ:** ವಿಜಯ ಕರ್ನಾಟಕ, ದಿನಾಂಕ:16.02.2024

## 13. ಸಕಾಲ ಸಂಪೂರ್ಣ ಡಿಜಿಟಲೀಕರಣ

ಸಕಾಲವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಎಲ್ಲ 1202 ಸೇವೆಗಳನ್ನು ಮುಂದಿನ 8 ತಿಂಗಳಲ್ಲಿ ಜನಸಾಮಾನ್ಯರಿಗೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಿ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಎಲ್ಲಾ ಇಲಾಖೆಗಳ ಅಧಿಕಾರಿಗಳ ಜೊತೆ ಸಕಾಲ ಸಭೆ ನಡೆಸಿ ಮಾತನಾಡಿದ ಅವರು, ಸಕಾಲ ಯೋಜನೆಯಡಿ 101 ಇಲಾಖೆಯ 1082 ಸೇವೆಗಳನ್ನು ಈಗಾಗಲೇ ಜನರಿಗೆ ಒದಗಿಸಲಾಗುತ್ತಿದೆ. ಇದೀಗ ಹೊಸದಾಗಿ 120 ಸೇವೆಗಳನ್ನು ಸೇರಿಸಲಾಗಿದೆ. ಆದರೆ, ಹೊಸ ಸೇವೆ ಸೇರಿ ಕೆಲವು ಸೇವೆಗಳು ಇನ್ನೂ ಪೇಪರ್ ಅಪ್ಲಿಕೇಶನ್ ಮೋಡ್‌ನಲ್ಲಿದ್ದು, ಮುಂದಿನ 8 ತಿಂಗಳೊಳಗಾಗಿ ಡಿಜಿಟಲೀಕರಿಸಬೇಕು ಎಂದು ಅಧಿಕಾರಿಗಳಿಗೆ ಗಡುವು ನೀಡಿದರು.

ಸಕಾಲದಲ್ಲಿ ಲಭ್ಯವಿರುವ 1202 ಸೇವೆಗಳ ಪೈಕಿ 922 ನಾಗರಿಕ ಹಾಗೂ 280 ಸಿಬ್ಬಂದಿ ಸೇವೆಗಳನ್ನು ನೀಡಲಾಗುತ್ತಿದೆ. ಆದರೆ, ಈ ಪೈಕಿ 802 ಸೇವೆಗಳನ್ನು ಮಾತ್ರ ಸೇವಾಸಿಂಧು ಆನ್‌ಲೈನ್‌ನಲ್ಲಿ ಒದಗಿಸಲಾಗುತ್ತಿದೆ. ಇದರಿಂದ ಜನಸಾಮಾನ್ಯರಿಗೆ ಲಭ್ಯವಾಗಿ ಉಳಿದಂತೆ 120 ಸೇವೆಗಳು ಪೇಪರ್ ಅಪ್ಲಿಕೇಶನ್ ಮೋಡ್‌ನಲ್ಲಿ ಲಭ್ಯವಾಗುತ್ತಿದೆ. ಸೇವೆಯ ದಾಖಲಾತಿ ಆಗುತ್ತಿಲ್ಲ ಎಂದರು. ಅರ್ಜಿಯಿಂದ ಸೇವೆಯವರೆಗೆ ಎಲ್ಲವೂ ಡಿಜಿಟಲೀಕರಣಗೊಳಿಸಬೇಕು. ಎಲ್ಲವೂ ಆನ್‌ಲೈನ್‌ನಲ್ಲಿ ದಾಖಲಾಗಬೇಕು. ಅಲ್ಲದೆ, ಏಕಗವಾಕ್ಷಿ ಸೇವಾಸಿಂಧು ಪೋರ್ಟಲ್‌ನೊಂದಿಗೆ ಸಂಯೋಜಿಸಿ ಸೇವಾ ಸಿಂಧು ಪೋರ್ಟಲ್ ಮೂಲಕ ಲಭ್ಯವಾಗುವಂತೆ ಮಾಡಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಕಂದಾಯ ಆಯುಕ್ತರಾದ ಸುನೀಲ್ ಕುಮಾರ್, ಸಕಾಲ ನಿರ್ದೇಶಕರಾದ ಉಜ್ವಲ್ ಕುಮಾರ್ ಘೋಷ್ ಹಾಗೂ ಸಕಾಲ ಉಪ ನಿರ್ದೇಶಕರಾದ ಪಲ್ಲವಿ ಉಪಸ್ಥಿತರಿದ್ದರು.

**ಆಧಾರ:** ವಿಜಯವಾಣಿ, ದಿನಾಂಕ: 05.03.2024

## 14. Govt clears Wistron, Air India projects; okays 17k-cr investment

The Siddaramaiah administration cleared 14 investment proposals worth Rs.17,835.9 crore, wlhich includes projects of Apple iPhone maker Wistron and Air India.

All proposals that were cleared in the 63$^{rd}$ State High Level Clearance Committee (SHLCC), chaired by Chief Minister Siddaramaiah, will create 27,067 jobs, the government said in a statement.

Much of the proposed investments-Rs 10,433.72 crore will come to Vijayapura, Kalburagi, Ballari and Belagavi districts of north Karnataka.

The biggest project belongs to Wistron Infocomm Manufacturing India Pvt Ltd, which will invest Rs 2,095 crore to generate 21,723 jobs.

The company will set up a smartphone manufacturing unit at Narsapur Industrial Area in Kolar.

Air India will pump in Rs.1,750 crore for a Maintenance, Repair, overhaul (MRO) unit at the Kempegowda International Airport in Bengaluru for single aisle and wide-body aircraft. This will create 1,200 jobs.

At the Defence & Aerospace Park in Bengaluru Rural, ICT Service Management Solutions (India) Pvt Ltd will set up a manufacturing unit for laptops an electronic equipment with an investment of Rs 1,450 crore creating 2,500 jobs.

STT Global Data Centres India Pvt Ltd is setting up a data centre in Devanahalli costing Rs.1,352.3 crore that will provide 250 jobs. At Vijayapura, Indian Cane Power Ltd will set up a sugar factory worth Rs 1,078 crore. This will create 309 jobs, the government said.

The same company will spend an additional Rs 492.29 crore to expand the Alagawadi Bireshwar Sugar factory in Belagavi. Shri Balaji Sugars and Chemicals Pvt Ltd will enhance the capacity of the Yaragal sugar factory with an investment of Rs 494.75 crore for 1,085 jobs.

Greenko KA01 IREP Pvt Ptd (formerly Greenko Solar Energy pvt Ltd) will spend Rs.5,948.06 crore to enhance pump storage facility at Belagavi. RBSSN Ferrous Industries Ltd will invest Rs1,620.80 croreon 130 MW power plant in Ballari. Bengaluru Rural will get a solar panel manufacturing unit by Emmvee Energy Pvt Ltd(formerly Emmvee Photovoltaic Power Pvt Ltd) at a cost of Rs 676.28 crore.

Ultratech Cement Ltd will take up mining Kalaburagi with an investment of Rs 490.38 crore. In Belagavi Athani Sugars Ltd will expand its distillery unit (Rs 205.89 crore). At Koppal, Ukem Agre Infra Ltd will expand its sugar factory (Rs 205.890crore).

Schneider Electric IT Business India Pvt Ltd will invest Rs 78.60 crore on an electronics equipment unit in Bengaluru.

**Courtesy:** Deccan Hearld, date: 09.03.2024.

## 15. Modi lays foundation stone for airport improvement works in Belagavi, Hubballi

Prime Minister Narendra Modi virtually launched several infrastructure works across the country. There were some projects from Karnataka as well. Leaders from Belagavi and Hubballi watched the telecast of the ceremony. Mr.Modi said that the Central government's work is not limited to announcements and that it is implementing infrastructure and development projects regularly.

"The Government has been working continuously for the development of the country, taking up projects like upgrading airports, construction of railways stations, expansion, doubling and electrification of railway lines and other projects such as implementation of the new education policy, PM Kishan samman Yojana, amoung others, he said.

He laid the foundation stone for the construction of new terminals of 15 airports in the country. This included the Belagavi Airport at Samgra upgrade of the Hubballi Airport, and other projects.

Earlier, Rajya Sabha member Eranna Kadadi said that the new airport terminal is aimed at providing more facilities for passenger in the coming days. It needs such a facility as it is the third biggest city in the State , he said.

The new terminal will offer better facilities like lifts, expanded parking and improved aircraft infrastructure. A tender has been floated for the project at an estimated cost of Rs.230 crore. The new terminal will have four aero bridges, to increase handling capacity to 2,400 passengers during peak hours (1,200 arrival and 1,200 departures). Once operational, the existing terminal will be repurposed to manage arrivals AAI's consultants, Landrum and Brown, say that this expansion will enable the airport to cope with a traffic demand of 2.0 million passengers per annum (mppa) until 2037, Mr.Kadadi said.

Mr.Kadadi said that a proposal has been sent to the centre to install a statue of Rani Channamma in front of the airport to commemorate the $200^{th}$ year celebrations of the First war of Kittur against the East India company. Efforts to build a hi-tech ESIC hospital have begun in Belagavi, he said.

MP Mangala Angadi MLAs Asif (raju) Sait and Abhay Patil, MLC prakash Hukkeri, who is the Karnataka Government Special Representative 2 at Delhi, Mayor Savita Kamble, Airport Authority officials and staff were present.

The Prime Minister laid the foundation stone for the second terminal of Hubballi Airport virtually. Union Minister pralhad Joshi said that the construction of the terminal will be completed in two years at a cost of Rs 340 crore. It will enable parking of 4-10 flights and facilitate 2,400 passengers per day with international standard infrastructure, he said.

**Courtesy**: The Hindu date: 11.03.2024.

## 16. ಅನ್ನಭಾಗ್ಯ ವ್ಯವಸ್ಥಿತ ಜಾರಿಗೆ ಆಹಾರಸೌಧ ನಿರ್ಮಾಣ

ಅನ್ನಭಾಗ್ಯ ಯೋಜನೆಯನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಅನುಕೂಲ ಕಲ್ಪಿಸುವ ಉದ್ದೇಶದಿಂದ ಆಹಾರಸೌಧ ನಿರ್ಮಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆಲಿ ಅಸ್ಕರ್ ರಸ್ತೆಯಲ್ಲಿರುವ ಮಾಪನ ಸೌಧದ ಪಕ್ಕದಲ್ಲಿ ಆಹಾರಸೌಧ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈವರೆಗೆ ಆಹಾರ ಇಲಾಖೆಗೆ ಸ್ವಂತ ಕಟ್ಟಡ ಇರಲಿಲ್ಲ. ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಡೆಯುತ್ತಿತ್ತು. ನಾಗರಿಕ ಸರಬರಾಜು ಇಲಾಖೆ ಮತ್ತು ಮೌಲ್ಯಮಾಪನ ಇಲಾಖೆಗೆ ಸ್ವಂತ ಕಟ್ಟಡವಿದೆ. ಆಹಾರ ಇಲಾಖೆಯಿಂದಲೇ ಅನ್ನಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಅದಕ್ಕಾಗಿ

ವ್ಯವಸ್ಥಿತವಾದ ಕಟ್ಟಡದ ಅಗತ್ಯತೆ ಇತ್ತು. ಆಹಾರಸೌಧ ನಿರ್ಮಾಣಗೊಂಡ ನಂತರ ಇಲಾಖೆಯ ಎಲ್ಲ ಕಚೇರಿಗಳು ಈ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದ್ದು ಒಂದು ಕಡೆಯಿಂದ ಆಡಳಿತ ನಡೆಯಲು ಆರಂಭವಾಗುತ್ತದೆ ಎಂದು ಹೇಳಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮಾತನಾಡಿ, ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆಗಳು ಸ್ವಂತ ಕಟ್ಟಡಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುತ್ತವೆ. ಆದರೆ ಆಹಾರ ಇಲಾಖೆಗೆ ಸ್ವಂತ ಕಟ್ಟಡ ಇರಲಿಲ್ಲ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಆಲಿ ಅಸ್ಕರ್ ರಸ್ತೆಯಲ್ಲಿರುವ ಮಾಪನ ಸೌಧದ ಪಕ್ಕದಲ್ಲಿ 30 ಸಾವಿರ ಅಡಿ ಜಾಗದಲ್ಲಿ 49.50ಕೋಟಿ ರೂ.ವೆಚ್ಚದಲ್ಲಿ ಆಹಾರಸೌಧ ನಿರ್ಮಿಸಲು ಸರ್ಕಾರ ಅನುಮೋದನೆ ನೀಡಿದೆ ಎಂದರು.

**ಆಧಾರ:** ಕನ್ನಡಪ್ರಭ, ದಿನಾಂಕ:12.03.2024

## 17. ರಾಜಧಾನಿ 14 ಕೆರೆಗಳಿಗೆ ಕೆ.ಸಿ ವ್ಯಾಲಿ ನೀರು

ಕೈಕೊಟ್ಟ ಮಳೆಯಿಂದ ನಗರದಲ್ಲಿರುವ ಅರ್ಧಕ್ಕರ್ಧ ಸರ್ಕಾರಿ ಕೊಳವೆಬಾವಿಗಳು ಬತ್ತಿಹೋಗಿವೆ. ಹಲವೆಡೆ ಅಂತರ್ಜಲಮಟ್ಟ ಕುಸಿಯುತ್ತಿದ್ದು, ಕೊಳವೆಬಾವಿಗಳನ್ನೇ ಅವಲಂಬಿಸಿದ ಪ್ರದೇಶಗಳಲ್ಲಿ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೋಲಾರ ಮಾದರಿಯಲ್ಲಿ ಸಂಸ್ಕರಿಸಿದ ನೀರಿನಿಂದ ಇಲ್ಲಿನ ಕೆರೆಗಳನ್ನು ತುಂಬಿಸಲು ಸರ್ಕಾರ ಮುಂದಾಗಿದೆ.

ನಗರದಲ್ಲಿ ಬಳಕೆ ಮಾಡಿದ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕೆ.ಸಿ.ವ್ಯಾಲಿ ಯೋಜನೆ ಅಡಿ ಕೋಲಾರದ ಕೆರೆಗಳನ್ನು ತುಂಬಿಸಲಾಗುತ್ತಿದೆ. ಅದೇ ನೀರನ್ನು ಬೆಂಗಳೂರಿನಲ್ಲಿ ಬತ್ತಿಹೋಗಿರುವ 14 ಕೆರೆಗಳಿಗೆ ಹರಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಪೈಪ್ ಲೈನ್‌ಗಳ ಅಳವಡಿಕೆ ಮತ್ತಿತರ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಜಲಮಂಡಳಿ, ಇಂಧನ ಇಲಾಖೆ, ಬಿಬಿಎಂಪಿ ಸೇರಿ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

**ಆಧಾರ:** ಉದಯವಾಣಿ, ದಿನಾಂಕ:19.03.2024

## 18. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ನಿಯಮ ರದ್ದು

ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗದ ಮಾರ್ಗಸೂಚಿ ಉಲ್ಲಂಘಿಸಿರುವ ರಾಜ್ಯ ಸರ್ಕಾರ, ಧಾರ್ಮಿಕ/ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂದು ಗುರುತಿಸಲು ನಿಗದಿಪಡಿಸಿದ್ದ ಅಲ್ಪಸಂಖ್ಯಾತರ ಸಮುದಾಯದ ಕನಿಷ್ಠ ಸಂಖ್ಯೆಯ ವಿದ್ಯಾರ್ಥಿಗಳ ದಾಖಲಾತಿ ಮಾನದಂಡದ ಷರತ್ತನ್ನು ರದ್ದುಪಡಿಸಿದೆ.

ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಸಮುದಾಯ ಶೈಕ್ಷಣಿಕ ಸಂಸ್ಥೆಗಳೆಂದು ಘೋಷಿಸಲು ಇರುವ ನಿಯಮ/ಆದೇಶಗಳಲ್ಲಿ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳ ರಾಷ್ಟ್ರೀಯ ಆಯೋಗದ

ಮಾರ್ಗಸೂಚಿಗೆ ಒಳಪಟ್ಟು ಶೈಕ್ಷಣಿಕ ಸಂಸ್ಥೆಗಳು ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಇಂತಿಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಹೊಂದಿರಬೇಕು ಎಂಬ ಷರತ್ತನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ಅಲ್ಪಸಂಖ್ಯಾತ ಸಂಸ್ಥೆಗಳು ಸರ್ಕಾರದಿಂದ ಸವಲತ್ತು ಪಡೆದು ತಮಗೆ ಬೇಕಾದಂತೆ ನಿಯಮ ರೂಪಿಸಿಕೊಳ್ಳಲು ಅನುಕೂಲವಾಗಲಿದೆ.

**ಆಧಾರ:** ವಿಜಯವಾಣಿ, ದಿನಾಂಕ:21.03.2024

## 19. ಆರು ಮಸೂದೆಗಳಿಗೆ ಅಂಕಿತ

ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡುವ ಮೊದಲೇ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಗಳಿಗೆ ಅನುಮೋದನೆ ಪಡೆದು, ಅಂಕಿತಕ್ಕೆ ಸಲ್ಲಿಸುವ ರಾಜ್ಯ ಸರ್ಕಾರದ ನಡೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕಾರಣಕ್ಕೆ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ್ದ ನಾಲ್ಕು ಮತ್ತು ಬಜೆಟ್ ಅಧಿವೇಶನದಲ್ಲಿ ಮಂಡಿಸಿದ್ದ ಎರಡು ಸೇರಿ ಒಟ್ಟು ಆರು ಮಸೂದೆಗಳನ್ನು ರಾಜ್ಯಪಾಲರು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಇನ್ನು ಮುಂದೆ ಹೀಗಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ ಬಳಿಕ ಒಪ್ಪಿಗೆ ನೀಡಿದ್ದಾರೆ. ಅಲ್ಲದೆ ಚುನಾವಣಾ ಆಯೋಗದಿಂದ ಅನುಮತಿ ಪಡೆದು ಗೆಜೆಟ್ ಹೊರಡಿಸುವಂತೆ ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಕರಡು ಮಸೂದೆಗಳನ್ನು ತುರ್ತು ವಿಷಯವೆಂಬ ಕಾರಣಕ್ಕೆ ಮುಖ್ಯಮಂತ್ರಿಯ ಒಪ್ಪಿಗೆ ಮೇಲೆ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಈ ರೀತಿ ಮಂಡಿಸಲು ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆಯ ನಿಯಮಗಳು–1977ರಲ್ಲಿ ಅವಕಾಶ ಇಲ್ಲ. ಈ ರೀತಿ ಮಾಡುವುದಾದರೆ ಈ ನಿಯಮಕ್ಕೆ ತಿದ್ದುಪಡಿ ತರಬೇಕು ಎಂದು ರಾಜ್ಯಪಾಲರು ಬರೆದ ಪತ್ರದಲ್ಲಿ ಸಲಹೆ ನೀಡಿದ್ದರು.

ರಾಜ್ಯಪಾಲರ ಪತ್ರಕ್ಕೆ ಮರು ಪತ್ರ ಬರೆದಿರುವ ಮುಖ್ಯಮಂತ್ರಿ ನಿಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಾಗವುದು. ನಿಯಮ ತಿದ್ದುಪಡಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ಸಲ್ಲಿಸಿರುವ ಮಸೂದೆಗಳಿಗೆ ಒಪ್ಪಿಗೆ ನೀಡಬೇಕು ಎಂದು ಮನವಿ ಮಾಡಿದ್ದರು.

**ಆಧಾರ:** ಪ್ರಜಾವಾಣಿ, ದಿನಾಂಕ:26.03.2024

## 20. ಅಕ್ರಮ ಡಾಕ್ಟರೇಟ್: ತನಿಖೆಗೆ ಸಮಿತಿ ರಚಿಸಿದ ರಾಜ್ಯ ಸರ್ಕಾರ

ಅಲಯನ್ಸ್ ವಿಶ್ವವಿದ್ಯಾಲಯದಿಂದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಶಿವಣ್ಣ ಅವರಿಗೆ ಅಕ್ರಮವಾಗಿ ಡಾಕ್ಟರೇಟ್ ಪದವಿ ನೀಡಿದ ಆರೋಪದ ಕುರಿತು ತನಿಖೆ ನಡೆಸಲು ಮೂವರು ತಜ್ಞರ ಸಮಿತಿ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಚಂದ್ರಶೇಖರ್ ಶೆಟ್ಟಿ, ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ.ಚಂದ್ರಶೇಖರ್ ಈ ಸಮಿತಿಯಲ್ಲಿದ್ದಾರೆ.

ಆರೋಪದ ಕುರಿತಂತೆ ವಿವರವಾದ ತನಿಖೆ ನಡೆಸಿ ಮೂರು ತಿಂಗಳ ಒಳಗೆ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಬಿ.ಎಸ್.ಶಿವಣ್ಣ ಅವರು ಅಲಯನ್ಸ್ ವಿಶ್ವವಿದ್ಯಾಲಯದಿಂದ ಅಕ್ರಮವಾಗಿ ಡಾಕ್ಟರೇಟ್ ಪದವಿ ಪಡೆದಿದ್ದು, ಈ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿಜಯನಗರ ಎಲ್. ಜಯಲಿಂಗೇಗೌಡ 2019ರ ಅಕ್ಟೋಬರ್ 10 ರಂದು ಸರ್ಕಾರಕ್ಕೆ ದೂರು ನೀಡಿದ್ದರು. ಸೂಕ್ತ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬಹುದೆಂದು ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯ ನಿರ್ವಾಹಕ ನಿರ್ದೇಶಕರು ಸರ್ಕಾರಕ್ಕೆ 2019ರ ಡಿಸೆಂಬರ್ ರಂದು ವರದಿ ನೀಡಿದ್ದರು.

**ಆಧಾರ:** ಪ್ರಜಾವಾಣಿ, ದಿನಾಂಕ:27.03.2024

# ಭಾಗ–6

# ನ್ಯಾಯಾಲಯ ಸುದ್ದಿಗಳು

## 1. ಹೈಕೋರ್ಟ್ ಸಿಜೆ ಪ್ರಮಾಣ

ಕರ್ನಾಟಕ ಉಚ್ಚ ನ್ಯಾಯಾಲಯದ 33ನೇ ಮುಖ್ಯ ನ್ಯಾಯಮೂರ್ತಿಯಾಗಿ ಪಿ.ಎಸ್.ದಿನೇಶ್‌ಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದ ಗಾಜಿನ ಮನೆಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಪ್ರಮಾಣ ವಚನ ಬೋಧಿಸಿದರು.

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ.ಪಾಟೀಲ್, ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ವಕೀಲರು ಹಾಗೂ ಗಣ್ಯರು ಹಾಜರಿದ್ದರು.

ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ಅವರು ಫೆಬ್ರವರಿ 24 ರಂದು ನಿವೃತ್ತರಾಗಲಿದ್ದು, ಮುಂದಿನ 21 ದಿನಗಳ ಕಾಲ ಸಿಜೆ ಹುದ್ದೆಯಲ್ಲಿರಲಿದ್ದಾರೆ. ಕರ್ನಾಟಕ ಹೈಕೋರ್ಟ್ ಇತಿಹಾಸದಲ್ಲಿ ಮುಖ್ಯ ನ್ಯಾಯಮೂರ್ತಿ ಹುದ್ದೆಯಲ್ಲಿ ಅತ್ಯಂತ ಕಿರು ಅವಧಿ ಹೊಂದಿರುವವರ ಪಟ್ಟಿಯಲ್ಲಿ ದಿನೇಶ್ ಕುಮಾರ್‌ಗೆ 2ನೇ ಸ್ಥಾನ ಇರಲಿದೆ. ಹೈಕೋರ್ಟ್‌ನ 17ನೇ ಸಿಜೆ ಆಗಿದ್ದ ಎಸ್.ಎ.ಹಕೀಮ್ ಕೇವಲ 6 ದಿನ (1996 ಮೇ 3 ರಿಂದ 1996 ಮೇ 9) ಮಾತ್ರ ಕರ್ತವ್ಯ ನಿಭಾಯಿಸಿದ್ದರು. 4ನೇ ಸಿಜೆ ಆಗಿದ್ದ ಎ.ಆರ್. ಸೋಮನಾಥ್ ಅಯ್ಯರ್ 36 ದಿನಗಳ ಕಾಲ ಹೊಣೆಗಾರಿಕೆ ಮೆರೆದಿದ್ದರು.

**ಆಧಾರ:** ಪ್ರಜಾವಾಣಿ, ದಿನಾಂಕ:04.02.2024

## 2. ಜುಲೈ 1 ರಿಂದ ಹೊಸ ಕ್ರಿಮಿನಲ್ ಕಾನೂನು

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಬ್ರಿಟಿಷರ ಕಾಲದ ಕಾನೂನಿನ ಬದಲಿಗೆ ರೂಪಿಸಲಾಗಿರುವ ಹೊಸ ಕಾನೂನುಗಳು ಜುಲೈ 1ರಿಂದ ಜಾರಿಗೆ ಬರಲಿವೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಬದಲಿಗೆ "ಭಾರತೀಯ ನ್ಯಾಯ ಸಂಹಿತೆ" ಅಪರಾಧ ದಂಡಪ್ರಕ್ರಿಯಾ ಸಂಹಿತೆಯ ಬದಲು "ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ" ಮತ್ತು ಸಾಕ್ಷ್ಯ ಕಾಯ್ದೆಯ ಬದಲು "ಭಾರತೀಯ ಸಾಕ್ಷ್ಯ ಕಾಯ್ದೆ" ಜಾರಿಗೆ ಬರಲಿವೆ.

ಈ ಸಂಬಂಧ ಗೃಹ ಸಚಿವಾಲಯವು ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಕಾನೂನು ಬದಲಿಗೆ ಸಂಬಂಧಿಸಿದ ಮೂರು ಮಸೂದೆಗಳಿಗೆ ಕಳೆದ ವರ್ಷ ಡಿಸೆಂಬರ್ 21 ರಂದು ಸಂಸತ್ ಅನುಮೋದನೆ ನೀಡಿತ್ತು. ಡಿಸೆಂಬರ್ 25ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದರು.

ಕಾನೂನು ಬದಲಾವಣೆಯ ವೇಗಕ್ಕೆ ಹೊಂದಿಕೊಳ್ಳಲು ಪೊಲೀಸರಿಗೆ ಮತ್ತು ನ್ಯಾಯಾಂಗ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲಾಗುವುದು. ವಕೀಲರು ಕಾನೂನು ಬದಲಾವಣೆಗೆ ತಕ್ಕಂತೆ ತಮ್ಮನ್ನು ತಾವು ಸಜ್ಜುಗೊಳಿಸಿಕೊಳ್ಳಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಕ್ರಿಮಿನಲ್ ಕಾನೂನು ದೇಶದ ಅಪರಾಧ ನ್ಯಾಯ ವ್ಯವಸ್ಥೆಯನ್ನು ವಸಾಹತು ಕಾಲದ ಜಡತ್ವದಿಂದ ಹೊರತಂದು ಸಂಪೂರ್ಣವಾಗಿ ನವೀಕರಿಸುತ್ತದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

ಶಿಕ್ಷೆ ನೀಡುವುದಕ್ಕಿಂತಲೂ ನ್ಯಾಯ ನೀಡುವುದು ನಮ್ಮ ಉದ್ದೇಶವಾಗಿದೆ. ಹೊಸ ಕಾನೂನಿನಲ್ಲಿ ಭಯೋತ್ಪಾದನೆಗೆ ಸ್ಪಷ್ಟ ವ್ಯಾಖ್ಯಾನ ನೀಡಲಾಗಿದೆ. ದೇಶದ್ರೋಹದ ಕಾನೂನನ್ನು ರದ್ದುಪಡಿಸಲಾಗಿದ್ದು, ಸರ್ಕಾರದ ವಿರುದ್ಧದ ಅಪರಾಧಗಳು ಎನ್ನುವ ಹೊಸ ಸೆಕ್ಷನ್ ಅನ್ನು ಜಾರಿಗೆ ತರಲಾಗಿದೆ. ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪ್ರತ್ಯೇಕತೆಯ ಘೋಷಣೆ ಸಶಸ್ತ್ರ ಪ್ರತಿರೋಧ ವಿಧ್ವಂಸಕ ಚಟುವಟಿಕೆ, ಪ್ರತ್ಯೇಕತಾವಾದಿ ಚಟುವಟಿಕೆ ಅಥವಾ ಸಾರ್ವಭಮತೆಗೆ ಅಥವಾ ಏಕತೆಗೆ ಭಂಗ ತರುವುದನ್ನು ಅಪರಾಧ ಎಂದು ಭಾರತೀಯ ನ್ಯಾಯ ಸಂಹಿತೆಯು ವರ್ಗೀಕರಿಸಿದ್ದು, ದೇಶದ್ರೋಹ ಕುರಿತ ಕಾನೂನನ್ನು ಹೊಸ ಸ್ವರೂಪದಲ್ಲಿ ಪರಿಚಯಿಸಿದೆ.

**ಆಧಾರ:** ಪ್ರಜಾವಾಣಿ, ದಿನಾಂಕ:25.02.2024

## 3. ಗುಜರಾತಿ ಮಾತೃಭಾಷೆ, ಕನ್ನಡ ಕರ್ಮಭಾಷೆ: ಸಿಜೆ

ಗುಜರಾತಿ ನನ್ನ ಮಾತೃಭಾಷೆಯಾಗಿದ್ದರೆ ಕನ್ನಡ ನನ್ನ ಕರ್ಮ ಭಾಷೆ ಮಾತೃ ಭಾಷೆ ಕಡ್ಡಾಯವಾಗಬೇಕು ಎಂಬ ರಾಷ್ಟ್ರಕವಿ ಕುವೆಂಪು ಅವರ ಅಭಿಮತಕ್ಕೆ ನನ್ನದು ಸಂಪೂರ್ಣ ಸಹಮತವಿದೆ ಎಂದು ಕರ್ನಾಟಕ ಹೈಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹೇಳಿದ್ದಾರೆ.

ರಾಜ್ಯ ವಕೀಲರ ಪರಿಷತ್ತಿನಿಂದ ಹೈಕೋರ್ಟ್‌ನ ಕೋರ್ಟ್ ಹಾಲ್ 1ರಲ್ಲಿ ಹಮ್ಮಿಕೊಂಡಿದ್ದ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ರಾಜ್ಯ ಗುಜರಾತ್ ಹಾಗೂ ನನ್ನ ವೃತ್ತಿ ಜೀವನದ ಕೆಲವು ಸಂಗತಿಗಳೊಂದಿಗೆ ಕರ್ನಾಟಕ ತಳಕು ಹಾಕಿಕೊಂಡಿದೆ ಎಂದು ಸ್ಮರಿಸಿಕೊಂಡರು.

ನನ್ನ ತವರು ರಾಜ್ಯ ಗುಜರಾತ್ ಹಾಗೂ ನನ್ನ ವೃತ್ತಿ ಜೀವನದ ವಿಚಾರದಲ್ಲಿ ಕರ್ನಾಟಕದೊಂದಿಗೆ ನನಗೆ ಹಲವು ರೀತಿಯಲ್ಲಿ ಸಂಬಂಧವಿದ್ದು, ಗುಜರಾತ್ ನ್ಯಾಯಾಲಯದಲ್ಲಿ ವಕೀಲನಾಗಿ ಸೇವೆ ಪ್ರಾರಂಭಿಸಿದ ಸಂದರ್ಭದಲ್ಲಿ ನವೀನ್ ಚಂದ್ರ ಲಾ ಫೌಂಡೇಷನ್‌ನಿಂದ ನನಗೆ ಫೆಲೋಶಿಪ್ ಸಿಕ್ಕಿತ್ತು. ಆ ಫೆಲೋಶಿಪ್ ಪ್ರದಾನ ಮಾಡಿದ್ದು ಅಂದಿನ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಕನ್ನಡಿಗ ನ್ಯಾ.ಎಂ.ಎನ್.ವೆಂಕಟಾಚಲಯ್ಯ, ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನಾನು ನೇಮಕಗೊಂಡಾಗ ಕೇಂದ್ರದಲ್ಲಿ ಕನ್ನಡಿಗ ಡಾ.ಎಂ.ವೀರಪ್ಪ ಮೊಯ್ಲಿ ಅವರು ಕಾನೂನು ಮಂತ್ರಿಯಾಗಿದ್ದರು. ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಆಗುವ ಮೊದಲು ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಡಿ.ಎಚ್.ವಘೇಲಾ ಅವರೊಂದಿಗೆ ನಾನು ಮೊದಲ ಬಾರಿಗೆ ವಿಭಾಗೀಯ ಪೀಠ ಹಂಚಿಕೊಂಡಿದ್ದೆ ಎಂದು ನ್ಯಾ. ಅಂಜಾರಿಯಾ ನೆನಪಿಸಿಕೊಂಡರು.

**ಆಧಾರ:** ಪ್ರಜಾವಾಣಿ, ದಿನಾಂಕ:27.02.2024

## 4. Sena row:SC asks if Maharashtra Speaker contradicted verdict

The Supreme Court asked whether Maharashtra speaker Rahul Narwekar contradicted a constitution Bench judgment while banking on legislative majority as a criterion to declare Chief Minister Eknath Shinde’s faction as the real Shiv Sena.

“The Speaker says the real political party is discernible from which faction held the legislative majority at the time of the emergence of the rival factions. Is this not contrary to what we had laid down on May 11?” Chief Justice of India D.Y.Chandrachud, heading a three judge Bench asked.

Deciding the disqualification petitions filed against Mr.Shinde, Mr.Narwekar had on January 10 declared the Chief Minister’s camp as the true party based on a finding that he had commanded the legislative majority at the time Shiv Sena splintered in June 2022.

On May 11, 2023, a Constitution Bench headed by Chief Justice Chandrachud had made it clear that the speaker should not be swayed by the factor of a legislative majority.

The Speaker must not base his decision as to which group constitutes the political party on a blind appreciation of which group possesses a majority in the Legislative Assembly. This is not a game of numbers. but of something more. The structure of leadership outside the Legislative Assembly is a consideration which is relevant to the determination of this issue, Chief Justice Chandrachud had observed in the judgment.

The constitution Bench had differentiated between the legislative wing composed of the MLAs of the party, and the political wing of the party made up of the cadre. It had held that the answer to which faction was the real party should be gleaned from the support from the political wing and not the numbers on the legislative side.

A majority faction of the legislature party can not be construed as the political party for the purposes of the Tenth Schedule, the May 11 judgment had noted.

Senior advocate Kapil Sibal, A.M. Singhavi and Devadutt Kamat said the Speaker had also stumbled by refusing to accept the 2018 Constitution of the Shiv Sena party, which appointed Mr. Thackeray as president.

The 2018 Constitution was relied upon by the High Court and the Supreme Court. Nobody disputed it then. But the Speaker said he will not depend on this constitution as it was not filed with the Election commission of India. So he went by a Constitution from 1999 when nobody had even talked about it, Mr. sibal submitted.

Mr.Salve countered that the documents produced by the Thackeray camp before the Speaker had been “brazenly fabricated”. He said that a similar case against the speaker’s decision of January 10 was pending the Bombay High Court. He said the Thackeray camp could not file petitions in multiple courts at the same time over the same issue.

However the supreme Court decided to go ahead and list the case for further arguments in the week commencing April 8.

**Courtesy:** The Hindu, dt: 08.03.2024

## 5. ಇಂದೇ ಮಾಹಿತಿ ಹಂಚಿಕೊಳ್ಳಲು ಎಸ್‌ಬಿಐಗೆ ಸುಪ್ರೀಂ ತಾಕೀತು

ಚುನಾವಣಾ ಬಾಂಡ್ ಕುರಿತ ವಿವರಗಳನ್ನು ಸಲ್ಲಿಸಲು ನೀಡಿದ್ದ ಗಡುವು ವಿಸ್ತರಿಸುವಂತೆ ಕೋರಿ ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ಮಾರ್ಚ್ 12ರ, ಕಚೇರಿ ವ್ಯವಹಾರದ ಅವಧಿ ಒಳಗಾಗಿ ಎಲ್ಲ ಮಾಹಿತಿಯನ್ನು ಒದಗಿಸುವಂತೆ ತಾಕೀತು ಮಾಡಿದೆ.

ತಾನು ನೀಡಿರುವ ನಿರ್ದೇಶನಗಳು ಮತ್ತು ಗಡುವು ಪಾಲಿಸಲು ವಿಫಲವಾದಲ್ಲಿ ತೀರ್ಪಿಗೆ ಉದ್ದೇಶಪೂರ್ವಕ ಅವಿಧೇಯತೆ ತೋರಿದ್ದಕ್ಕಾಗಿ ಕಾನೂನು ಕ್ರಮಕೈಗೊಳ್ಳಲು ಪ್ರಕ್ರಿಯೆ ಆರಂಭಿಸುವುದಾಗಿ ಎಚ್ಚರಿಕೆಯನ್ನೂ ಕೊಟ್ಟಿದೆ. ಸುಪ್ರೀಂ ಕೋರ್ಟ್‌ನ ಆದೇಶವು, ದೇಶದ ಅತಿದೊಡ್ಡ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಎಸ್‌ಬಿಐಗೆ ಆಗಿರುವ ಭಾರಿ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಬ್ಯಾಂಕ್ ಹಂಚಿಕೊಂಡ ವಿವರಗಳನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು ನಿರ್ದೇಶನ ನೀಡಿದೆ. ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದ ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿತ್ತು.

2019 ಏಪ್ರಿಲ್ 13ರ ನಂತರದಲ್ಲಿ ಚುನಾಣಾ ಬಾಂಡ್ ಮೂಲಕ ದೇಣಿಗೆ ಪಡೆದ ಪಕ್ಷಗಳ ವಿವರವನ್ನು ಸಲ್ಲಿಸುವಂತೆ ಎಸ್‌ಬಿಐಗೆ ಸೂಚಿಸಿತ್ತು. ರಾಜಕೀಯ ಪಕ್ಷಗಳು ನಗದೀಕರಿಸಿಕೊಂಡ ಬಾಂಡ್‌ಗಳ ವಿವರ ಪಕ್ಷಗಳು ಯಾವ ದಿನಾಂಕಕ್ಕೆ ಬಾಂಡ್ ನಗದು ಮಾಡಿಕೊಂಡವು. ಯಾವ ಮೌಲ್ಯದ ಬಾಂಡ್ ನಗದು ಮಾಡಿಕೊಂಡವು ಎಂಬುದನ್ನು ಮಾರ್ಚ್ 6ರೊಳಗೆ ಆಯೋಗಕ್ಕೆ ಸಲ್ಲಿಸಬೇಕು ಎಂದು ಸೂಚಿಸಿತ್ತು.

ಎಸ್‌ಬಿಐ ಕಡೆಯಿಂದ ಸಿಗುವ ವಿವರಗಳನ್ನು ಚುನಾವಣಾ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಮೊದಲು ಪ್ರಕಟಿಸಬೇಕು ಎಂದೂ ಆದೇಶಿಸಿತ್ತು.

**ಆಧಾರ:** ಪ್ರಜಾವಾಣಿ, ದಿನಾಂಕ: 12.03.2024

## 6. ಹಿಮಾಚಲ ಪ್ರದೇಶದ ಸ್ಪೀಕರ್ ಕ್ರಮಕ್ಕೆ ಮನ್ನಣೆ, ಅನರ್ಹತೆ ಆದೇಶ ತಡೆಗೆ ಸುಪ್ರೀಂ ನಕಾರ

ಕಾಂಗ್ರೆಸ್‌ನ ಆರು ಶಾಸಕರನ್ನು ಅನರ್ಹಗೊಳಿಸಿ ಹಿಮಾಚಲ ಪ್ರದೇಶದ ವಿಧಾನಸಭೆಯ ಸ್ಪೀಕರ್ ನೀಡಿದ್ದ ಆದೇಶಕ್ಕೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಸುದೀರ್ ಶರ್ಮಾ, ರವಿ ಠಾಕೂರ್, ರಾಜೀಂದರ್ ರಾಣಾ, ಇಂದರ್ ದತ್ತ್ ಲಖನ್‌ಪಾಲ್, ಚೇತನ್ಯ ಶರ್ಮಾ ಮತ್ತು ದೇವಿಂದರ್ ಕುಮಾರ್ ಭುಟ್ಟೊ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ಸದನದಲ್ಲಿ ಹಣಕಾಸು ಮಸೂದೆಗೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಕಾಂಗ್ರೆಸ್ ನೀಡಿದ ವಿಪ್ ಅನ್ನು ಆರು ಮಂದಿ ಶಾಸಕರು ಉಲ್ಲಂಘಿಸಿದ್ದ ಕಾರಣಕ್ಕಾಗಿ ಅವರನ್ನು ಅನರ್ಹಗೊಳಿಸಲಾಗಿತ್ತು. ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ್ದ ಆರೋಪಕ್ಕೂ ಅವರು ಗುರಿಯಾಗಿದ್ದರು.

ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರನ್ನೊಳಗೊಂಡ ಪೀಠವು ಅರ್ಜಿಯ ಸಂಬಂಧ ಹಿಮಾಚಲ ಪ್ರದೇಶದ ವಿಧಾನಸಭೆ ಸ್ಪೀಕರ್ ಕುಲ್‌ದೀಪ್‌ಸಿಂಗ್ ಪಥಾನಿಯಾ ಅವರಿಗೆ ನೋಟಿಸ್ ನೀಡಿದ್ದು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಕಾಂಗ್ರೆಸ್ ಶಾಸಕರ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯವು ತನ್ನ ನಿರ್ಧಾರ ಪ್ರಕಟಿಸುವವರೆಗೆ ಶಾಸಕರು ಮತದಾನ ಮಾಡುವುದಕ್ಕೆ ಅಥವಾ ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ನಿಗದಿ ಮಾಡಿದ್ದು, ಬಂಡಾಯ ಶಾಸಕರಿಗೆ ತಮ್ಮ ವಾದ ದಾಖಲಿಸಲು ಒಂದು ವಾರ ಕಾಲಾವಕಾಶವನ್ನು ನೀಡಿದೆ. ಖಾಲಿ ಇರುವ ಆರು ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ನಾಮಪತ್ರ ಸಲ್ಲಿಕೆಯು ಆರಂಭವಾಗುತ್ತದೆ.

**ಆಧಾರ:** ಪ್ರಜಾವಾಣಿ, ದಿನಾಂಕ: 19.03.2024

## 7. Nameboard law: No sealing of premises, HC tells State government

The High Court of Karnataka directed the State government not to suspend the trade licence and seal the premises of private establishments for not changing the display to 60% in Kannada on the upper half of nameboards, if the date for implementing the amended Section 17(6) of the Kannada Language Comprehensive Development Act, 2022, is notified in the official gazette.

However, the court restrained the government and its agencies from taking any precipitative action against private establishments for not complying with the amended law, if the government has not notified the date for implementation of the Act in the official gazette.

Justice M. Nagaprasanna passed the interim order on a joint petition by the Retailers Association of India, Mumbai, Titan Company Ltd., PVR INOX Ltd., Aravind Ligestyles Brand Ltd., Infinite Retail Ltd., Aditya Birla Fashion and Retail Ltd., Hennes and Mauriz Retail ., and Hardcastle Restaurants Pvt. Ltd.

Though the court refused to stay the operation of the amended law, the court said the Act has provision for imposing only penalty, ranging from Rs. 5,000 for not displaying the name boards, but the law doesnot empower the government to suspend the trade licence or seal the premises for violation.

Earlier, the petitioners' advocate Manu kulkarni pointed out that the circular issued by the Bruhat Bengaluru Mahanagara palike(BBMP) empowers the officials to suspend the trade licence and seal the business premises contrary to the Section 23 of the Act, which prescribe only fine as penalty for violation.

The amended Act was notified in the gazette this February 25, and Section 1(2) of the amended act states that "it shall come into force on such date as the State government may by notification In the official Gazette appoint".

But the government is yet to issue official gazette notification as per Section 1(2) announcing the date from which the amendment will come into force, the advocate contended. As the petitioners pointed out a lack of clarity on signboards, the Advocate

General assured the court that all the retailers and the business undertakings would be given complete clarity as and when any clarifications are sought for.

Petitioners' contention It has been contended in the petition that Section 17(6) is a violation of Article 345 of the Constitution, which does not permit imposition of language on private parties for the purposes and functions that are not official functions of the State.

The imposition of 60% Kannada display on the upper half of nameboards is also violative of commercial speech and expression guaranteed under Article 19(1)(a) of the constitution, besides contrary to the rights conferred to the petitioners under the Trade Marks Act, 1999.

Also, the petitioners have pointed out that the amended law compels them to expend huge amounts, time, and effort to introduce the changed nameboards resulting in wasted expenditure, which is unreasonable and unjustified.

**Courtecy:** The Hindu, dated: 19.03.2.24

## 8. ಲೋಕಾಯುಕ್ತ ನೇಮಕಕ್ಕೆ ಮಾರ್ಗಸೂಚಿ

ರಾಜ್ಯಗಳಲ್ಲಿ ಲೋಕಾಯುಕ್ತರ ನೇಮಕಾತಿ ಕುರಿತು ಮುಖ್ಯಮಂತ್ರಿಗಳು, ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳು ಹಾಗೂ ವಿರೋಧ ಪಕ್ಷಗಳ ನಾಯಕರು ನಡೆಸಬೇಕಾದ ಸಮಾಲೋಚನೆ ಪ್ರಕ್ರಿಯೆಗೆ ಸಂಬಂಧಿಸಿ ಮಾರ್ಗಸೂಚಿಗಳನ್ನು ರಚಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ನಿವೃತ್ತ ನ್ಯಾಯಮೂರ್ತಿ ಸತ್ಯೇಂದ್ರಕುಮಾರ್ ಸಿಂಗ್ ಅವರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಈ ನೇಮಕಾತಿ ವೇಳೆ ತಮ್ಮ ಜೊತೆ ಸಮಾಲೋಚನೆ ನಡೆಸಿಲ್ಲ ಎಂದು ದೂರಿ ಮಧ್ಯಪ್ರದೇಶ ವಿಧಾನಸಭೆ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಉಮಂಗ್ ಸಿಂಘರ್ ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಅಲ್ಲದೇ, ಅರ್ಜಿಗೆ ಸಂಬಂಧಿಸಿ, ಮಧ್ಯಪ್ರದೇಶ ಸರ್ಕಾರಕ್ಕೆ ನೋಟೀಸ್ ನೀಡಿದೆ. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಮೂವರು ಸದಸ್ಯರ ಪೀಠ ಅರ್ಜಿ ವಿಚಾರಣೆ ನಡೆಸಿದೆ. ಈ ವಿಷಯ ಇಡೀ ದೇಶದಾದ್ಯಂತ ಪರಿಣಾಮ ಬೀರುವಂಥದ್ದಾಗಿದೆ. ಹೀಗಾಗಿ ಲೋಕಾಯುಕ್ತರ ನೇಮಕ ಸಂದರ್ಭ ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ನಿರ್ಧರಿಸುವುದು ಅಗತ್ಯ ಎಂದು ಪೀಠ ಹೇಳಿದೆ.

ಲೋಕಾಯುಕ್ತ ಹುದ್ದೆಗೆ ನೇಮಕಕ್ಕೆ ಅಂತಿಮಗೊಳಿಸಿದ ಅಭ್ಯರ್ಥಿ ಕುರಿತು ಘೋಷಣೆ ಮಾಡುವ ಮುನ್ನಾದಿನ ವಿಪಕ್ಷ ನಾಯಕನಿಗೆ ಮಾಹಿತಿ ನೀಡಿ, ಒಪ್ಪಿಗೆ ಪಡೆಯುವುದನ್ನು ಒಪ್ಪಲಾಗದು ಇದಕ್ಕಾಗಿ ಕೆಲ ಮಾರ್ಗಸೂಚಿಗಳನ್ನು ರಚಿಸುವುದು ಅಗತ್ಯ. ಇಲ್ಲದೇ ಹೋದಲ್ಲಿ ಸಮಿತಿಯಲ್ಲಿ ವಿರೋಧಪಕ್ಷದ ನಾಯಕನ ಉಪಸ್ಥಿತಿಗೆ ಅರ್ಥವೇ ಇರುವುದಿಲ್ಲ ಎಂದೂ ಪೀಠ ಹೇಳಿದೆ. ಅರ್ಜಿದಾರ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಜರಿದ್ದರು. ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

**ಆಧಾರ:** ಪ್ರಜಾವಾಣಿ, ದಿನಾಂಕ: 23.03.2024

## 9. ಸಿಎಜಿ ಸುತ್ತೋಲೆ ರದ್ದುಪಡಿಸಿದ ಹೈಕೋರ್ಟ್

ಸಹಕಾರ ಬ್ಯಾಂಕ್‌ಗಳ ಸಿಬ್ಬಂದಿಯು ಬ್ಯಾಂಕ್‌ಗೆ ಪಾವತಿಸಬೇಕಿದ್ದ ಬಾಕಿ ಮೊತ್ತ ಕಡಿತಗೊಳಿಸುವುದಕ್ಕೆ ನಿರ್ಬಂಧ ವಿಧಿಸಿ ಭಾರತೀಯ ಮಹಾಲೆಕ್ಕಪಾಲರು (ಸಿಎಜಿ) ಹೊರಡಿಸಿದ್ದ ಸುತ್ತೋಲೆಯನ್ನು ಹೈಕೋರ್ಟ್ ರದ್ದಪಡಿಸಿದೆ.

ಇದರಿಂದಾಗಿ ಸಹಕಾರ ಬ್ಯಾಂಕ್‌ಗಳ ಸಿಬ್ಬಂದಿ ಒಪ್ಪಿಗೆ ಮೇರೆಗೆ ಅವರು ಪಾವತಿಸಬೇಕಿರುವ ಬಾಕಿ ಮೊತ್ತವನ್ನು ವೇತನದಲ್ಲಿ ಕಡಿತ ಮಾಡಿಕೊಳ್ಳಲು ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳಿಗಿದ್ದ ಅಡ್ಡಿ ತೆರವಾಗಿದೆ. ಹಾಗಾಗಿ ಸಂಘಗಳು ಮತ್ತು ಬ್ಯಾಂಕ್‌ಗಳು ಇನ್ಮುಂದೆ ಸಿಬ್ಬಂದಿಯಿಂದ ಬಾಕಿ ಮೊತ್ತ ವಸೂಲು ಮಾಡಲು ಅನುಕೂಲವಾಗಲಿದೆ.

ಸಿಎಜಿ ಸುತ್ತೋಲೆ ಪ್ರಶ್ನಿಸಿ ಅಕೌಂಟೆಂಟ್ ಜನರಲ್ಸ್ ಆಫೀಸ್ ಎಂಪ್ಲಾಯಿಸ್ ಕೋ–ಆಪರೇಟಿವ್ ಬ್ಯಾಂಕ್ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾ. ಅನಂತರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ಕ್ಲಾಸ್–5ರಡಿ ಸಿಎಜಿ ಸಿಬ್ಬಂದಿಯ ವೇತನದಿಂದ ಕಡಿತಗೊಳಿಸಲು ನಿರ್ಬಂಧ ವಿಧಿಸಿ 2020ರ ಜನವರಿ 29, 30 ಹಾಗೂ ಫೆಬ್ರವರಿ 6ರಂದು ಹೊರಡಿಸಿದ್ದ ಸುತ್ತೋಲೆಗಳನ್ನು ರದ್ದುಗೊಳಿಸಿತು.

ಒಮ್ಮೆ ಸಹಕಾರ ಸಂಘದ ಸದಸ್ಯರಾದರೆ, ಆತ ಸೊಸೈಟಿಯೊಂದಿಗೆ ಒಪ್ಪಂದ ಮಾಡಿಕೊಂಡಂತೆಯೇ, ಅಂತಹ ಒಪ್ಪಂದ ಮಾಡಿಕೊಂಡ ಸಿಬ್ಬಂದಿಯಿಂದ ಬಾಕಿ ವಸೂಲು ಮಾಡಲು ಅವರ ವೇತನದಿಂದ ಶೇ 50ರಷ್ಟು ಮೀರದಂತೆ ಕಡಿತಗೊಳಿಸಲು ಅವಕಾಶವಿದೆ. ಅದಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಸೆಕ್ಷನ್ 34 ಅವಕಾಶ ಕಲ್ಪಿಸುತ್ತದೆ. ಹಾಗಾಗಿ, ಸಿಎಜಿ ಕ್ಲಾಸ್–5ರಡಿ ಹೊರಡಿಸಿರುವ ಸುತ್ತೋಲೆ ನೀತಿ ನಿರ್ಧಾರವಲ್ಲ ಮತ್ತು ಅದು ಕಾನೂನೂ ಬಾಹಿರವಾಗಿದ್ದು, ಅದನ್ನು ರದ್ದುಗೊಳಿಸಲಾಗುತ್ತಿದೆ ಎಂದು ನ್ಯಾಯಪೀಠ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಸೆಕ್ಷನ್ 34ರಡಿ ಸಾಲಗಾರರು ಮತ್ತು ಸಹಕಾರ ಬ್ಯಾಂಕ್ ನಡುವೆ ಒಪ್ಪಂದವಾಗಿರುತ್ತದೆ. ಅದರಂತೆ ಸಾಲ ನೀಡಿದವರು ಸೊಸೈಟಿಗೆ ಬರಬೇಕಾಗಿರುವ ಹಣ ಮರು ಪಾವತಿಗೆ ವೇತನದಲ್ಲಿ ಹಣ ಕಡಿತಮಾಡಿಕೊಳ್ಳಬಹುದು, ಸಿಬ್ಬಂದಿ ವೇತನದಿಂದ ಕಡಿತ ಮಾಡುವಂತಿಲ್ಲ ಎಂದು ಆದೇಶ ಹೊರಡಿಸುವ ಅಧಿಕಾರ ಸಿಎಜಿಗೆ ಇಲ್ಲ ಎಂದು ಹೇಳಿದರು.

ಸಿಎಜಿ ಪರ ವಕೀಲರು, ಕೆಲವು ಸಹಕಾರ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳನ್ನು ಸೆಕ್ಷನ್ 34ರ ಹೊರಗಿಟ್ಟು ಸಿಎಜಿ ನೀತಿ ನಿರ್ಧಾರವನ್ನು ಕೈಗೊಂಡಿದೆ. ಇದರಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ವಾದಿಸಿದ್ದರು.

**ಆಧಾರ:** ವಿಜಯ ಕರ್ನಾಟಕ ದಿನಾಂಕ: 24.03.2024

## 10. ನ್ಯಾಯಾಂಗದಲ್ಲಿ ಕರ್ನಾಟಕ ದೇಶಕ್ಕೇ ಮಾದರಿ

ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಪ್ರಕರಣಗಳ ಇತ್ಯರ್ಥ ಮತ್ತು ನ್ಯಾಯಾಧೀಶರ ಹುದ್ದೆಗಳಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಕರ್ನಾಟಕ ಮಂಚೂಣಿಯಲ್ಲಿದೆ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ. ಡಿ.ವೈ.ಚಂದ್ರಚೂಡ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಕೃಷಿ ವಿ.ವಿ.ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಿದ್ದ 21ನೇ ದ್ವೈವಾರ್ಷಿಕ ರಾಜ್ಯ ಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕದ ಜಿಲ್ಲಾ ನ್ಯಾಯಾಲಯಗಳಲ್ಲಿ 21.25 ಲಕ್ಷ ಪ್ರಕರಣಗಳು ದಾಖಲಾಗಿದ್ದವು. ಅವುಗಳಲ್ಲಿ 20.62 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ. ಮೂರ್ನಾಲ್ಕು ಲಕ್ಷ ಪ್ರಕರಣಗಳು ಮಾತ್ರ ಬಾಕಿ ಉಳಿದಿರುವುದು ದೇಶಕ್ಕೆ ಮಾದರಿ ಎಂದರು.

ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳೆಯ ಸಹಭಾಗಿತ್ವ ಶೇ 37. ಇದೆ. ಆದರೆ ಕರ್ನಾಟಕ ನೇಮಕಾತಿ ಪ್ರಕ್ರಿಯೆಗಳಲ್ಲಿ 447 ಮಂದಿ ಜಿಲ್ಲಾ ಸಿವಿಲ್ ನ್ಯಾಯಾಧೀಶರ ಪೈಕಿ 200 ಮಹಿಳೆಯರಿದ್ದಾರೆ. ಇದು ಶೇ 44 ಪಾಲು ಹೊಂದಿದೆ ಇದು ಯುವ ಸಮುದಾಯ ಕಾನೂನು ಸೇವೆಯನ್ನು ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳಲು ಪ್ರೇರಣೆಯಾಗಿದೆ ಎಂದು ಸಿಬಿಐ ವಿವರಿಸಿದರು.

ಸಿಎಂ ಸಿದ್ದರಾಮ್ಯ ಮಾತನಾಡಿ, ಸಮಾಜ ಸುಧಾರಣೆ, ದಾರ್ಶನಿಕ ನಾಯಕತ್ವ ಮತ್ತು ಶ್ರೀಮಂತ ಸಾಂಸ್ಕೃತಿಕ ನೀತಿಯ ಸಂಗಮವು ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸಿದೆ. ಹಕ್ಕುಗಳನ್ನು ಪ್ರತಿಪಾದಿಸುವ ಹಾಗೂ ನ್ಯಾಯ ಮತ್ತು ಸಮಾನತೆಯನ್ನು ಸಾರುವ ಸಂವಿಧಾನವನ್ನು ರಚಿಸುವ ಮೂಲಕ ಡಾ.ಅಂಬೇಡ್ಕರ್ ನ್ಯಾಯಾಂಗಕ್ಕೆ ಅಡಿಪಾಯ ಹಾಕಿದರು. ಇದು ಬುದ್ಧ, ಬಸವಣ್ಣ ನಾರಾಯಣ ಗುರು ಮತ್ತಿತರ ಚಿಂತಕರ ಭೋದನೆಗಳನ್ನು ತಿಳಿಸುತ್ತದೆ ಎಂದರು.

**ಆಧಾರ:** ವಿಜಯವಾಣಿ ದಿನಾಂಕ: 24.03.2024

## 11. State govt. alone can’t decide on changing exam pattern: High Court

Changing the examination pattern for classes 5,8,9, and 11 is not something that can be decided by the State government alone, the High Court of Karnataka has said.

The government should discuss with all stakeholders, well in advance, be fore notifying change in the examination pattern in future academic years for the reason that the same can be effectively presented to the public in an efficacious way, the court has directed.

Equipping children: while declining to accept the contention of associaltions of certain unaided private schools that the changed pattern would hamper the well being and the growth of children, the court said: “ The adoption of this method would prepare the students for board examinations in future and also that they will be well equipper to face the actual board exam.”

A Division Bench, comprising Justice K. Somashekar and Justice Rajesh Rai K., made these observations in its March 22 judgement of allowing the government’s appeal against the March 6 verdict of a single judge, who had quashed the government’s decision to hold exams through Karnataka State Examination and Assessment Board (KSEAB) for these classes.

However, on allowing the government to resume exams for these classes as per the changed exam patern, the court said that parents, and children of class 5, 8, 9, and 11 were aware in advance of the fact that students would be facing the examination in the changed pattern.

"In no way it can be said that the parents were unaware of the developments and the children were unprepared," the court obsereved.

The chandged exam patern could not be termed as a board exam just because the question papers were being prepared by KSEAD, the court said.

Analysing the features of the pattern, which has been described as board exams by the associations of schools, the court asid that merely because the question papers were prepared by KSEAB it could not be termed as a board exam as the changed patern did not include key features of an actual board exam.

Key features, like detention of unsuccessful students, publicly displaying results, evalution of answer scripts by external faculty, were not made applicable to the changed exam method, the court noted.

Even though the question papers were prepared by KSEAB in the changed pattern , no student was being detained in the same class in case of their poor performance and evalution of answer papers would be done by the internal faculty, the court said. "When the examinations are held with no expulsion policy, in no manner the same can be considered as the board exam and in violation of the provisions of the RTE Act, 2009," the court observed.

Courtsy: The Hindu, dated: 26.03.2024

## 12. ಕೆಆರ್‌ಎಸ್ ಡ್ಯಾಂಗೆ ಧಕ್ಕೆಯಾಗಬಾರದು

ಕಾವೇರಿ ನದಿಗೆ ಕಟ್ಟಲಾಗಿರುವ ಕೆಆರ್‌ಎಸ್(ಕೃಷ್ಣರಾಜಸಾಗರ) ಅಣೆಕಟ್ಟಿನ ಸುತ್ತಮುತ್ತಲ ಪ್ರದೇಶದಲ್ಲಿ ಯಾವುದೇ ರೀತಿಯ ಗಣಿಗಾರಿಕೆ ಮತ್ತು ಅದರ ಸಂಬಂಧಿಸಿದ ಚಟುವಟಿಕೆಗಳಿಗೆ ಅವಕಾಶ ನೀಡುವ ಕುರಿತು ತಜ್ಞರ ತೀರ್ಮಾನವೇ ಅಂತಿಮ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ಅಣೆಕಟ್ಟಿಗೆ ಕಿಂಚಿತ್ತೂ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಾದ ಜರೂರು ಈಗ ಮೊದಲಿಗಿಂತಲು ಹೆಚ್ಚಿದೆ ಎಂದು ನ್ಯಾಯಾಲಯ ಹೇಳಿದೆ.

ಸ್ಟೋನ್ ಕ್ರಶರ್‌ಗೆ ಅವಕಾಶ ಕೋರಿ ಪಾಂಡವಪುರ ತಾಲೂಕಿನ ಕನಗನಮರಡಿ ಗ್ರಾಮ ಮಂಚಮ್ಮದೇವಿ ಸಟೋನ್ ಕ್ರಷರ್ ಹಾಗೂ ಎಂ ಸ್ಯಾಂಡ್‌ನ ಮಾಲೀಕರು ಸಲ್ಲಿಸಿದ್ದ ಅರ್ಜಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತು.

ಕೆಲಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯ ಕೆಆರ್‌ಎಸ್ ಜಲಾಶಯದ ಸುತ್ತಲಿನ 20 ಕಿ.ಮೀ.ವ್ಯಾಪ್ತಿಯಲ್ಲಿ ಹಾಗೂ ಅದರಾಚೆ ಯಾವುದೇ ಕಲ್ಲು ಗಣಿಗಾರಿಕೆ ಹಾಗೂ ಸ್ಫೋಟಕ ಚಟುವಟಿಕೆಗಳಿಗೆ ಸಂಬಂಧಿಸಿದ ತಕರಾರುಗಳಿಗೆ ಪರಿಹಾರ ಪಡೆಯಲು ಕರ್ನಾಟಕ ರಾಜ್ಯ ಜಲಾಶಯಗಳ ಸುರಕ್ಷತ ಸಮಿತಿಯ ಮುಂದೆಯೇ ಮನವಿ ಸಲ್ಲಿಸಬೇಕು. ಈ ವಿಚಾರದಲ್ಲಿ ಸಮಿತಿ ತೀರ್ಮಾನವೇ ಅಂತಿಮ ಎಂದು ಹೇಳಿತು. ಅಲ್ಲದೆ ನಿಮ್ಮ ಮನವಿಯನ್ನು ತಜ್ಞರ ಸಮಿತಿ ಮುಂದೆಯೇ ನಿಲ್ಲಿಸಿ ಎಂದು ಅರ್ಜಿದಾರರಿಗೆ ನಿರ್ದೇಶಿಸಿ ವಿಲೇವಾರಿ ಮಾಡಿತು.

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 29.03.2024

## 13. ಲೋಕಾಯುಕ್ತಕ್ಕೆ ಶಿಫಾರಸ್ಸು ಅಧಿಕಾರ ಮಾತ್ರ

ಲೋಕಾಯುಕ್ತ ಹಾಗೂ ಉಪ ಲೋಕಾಯುಕ್ತರು ಸರಕಾರಿ ನೌಕರರ ವಿರುದ್ಧ ವಿಚಾರಣೆಗೆ ಕೇವಲ ಶಿಫಾರಸು ಮಾಡಬಹುದೇ ಹೊರತು, ವಿಚಾರಣೆ ನಡೆಸುವ ಹೊಣೆ ವಹಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಅಲ್ಲದೆ, ತನ್ನ ಸಿಬ್ಬಂದಿ ವಿರುದ್ಧದ ಶಿಸ್ತು ಕ್ರಮದ ವಿಚಾರಣೆಯನ್ನು ಯಾರಿಂದ ನಡೆಸಬೇಕು ಎಂಬ ಅಧಿಕಾರ ರಾಜ್ಯ ಸರಕಾರಕ್ಕೆ ಮಾತ್ರವೇ ಇದೆ ಎಂದು ನ್ಯಾಯ ಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಹಿರಿಯ ಪರಿಸರ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ.ಜಿ.ಯತೀಶ್ ಸಲ್ಲಿಸಿದ್ದ ಅರ್ಜಿಯನ್ನು ಭಾಗಶ: ಮಾನ್ಯ ಮಾಡಿರುವ ನ್ಯಾ.ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ನಾಗರಿಕ ಸೇವಾ ನಿಯಮ (ಸಿಸಿಎ) 14 ಎ ಪ್ರಕಾರ ಸರಕಾರ ತನ್ನ ಸಿಬ್ಬಂದಿಯ ವಿರುದ್ಧದ ದುರ್ನಡತೆ ಆರೋಪಗಳ ಬಗ್ಗೆ ಲೋಕಾಯುಕ್ತ/ಉಪ ಲೋಕಾಯುಕ್ತರಿಂದ ವಿಚಾರಣೆಗೆ ಆದೇಶ ನೀಡಬಹುದು ಮತ್ತು ಆನಂತರ ನಿಯಮ 12ರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬಹುದಾಗಿದೆ ಎಂದು ನ್ಯಾಯ ಹೇಳಿದೆ.

**ಆಧಾರ:** ವಿಜಯ ಕರ್ನಾಟಕ, ದಿನಾಂಕ: 31.03.2024

# ಭಾಗ–7

# ಶ್ರದ್ಧಾಂಜಲಿ

## 1. ರಾಜಾ ವೆಂಕಟಪ್ಪ ನಾಯಕ, ಮಾಜಿ ಶಾಸಕರು



ರಾಜಾ ವೆಂಕಟಪ್ಪ ನಾಯಕ(67), ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಅವರು ಶಾಸಕರಾದ ಮಾಜಿ ರಾಜಕುಮಾರ ನಾಯಕರವರ ಹಿರಿಯ ಪುತ್ರ ಇವರು ದಿನಾಂಕ: 26.02.2024 ರಂದು ಹೃದಯಾಘಾತದಿಂದ ಬೆಂಗಳೂರಿನಲ್ಲಿ ನಿಧನರಾದರು.

ರಾಜಾ ವೆಂಕಟಪ್ಪ ನಾಯಕರವರು ದಿನಾಂಕ:23.11.1957 ರಂದು ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಜನಿಸಿದ್ದು, ಕಾಲೇಜು ವ್ಯಾಸಂಗ ಮಾಡಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಇವರು 1987ರಲ್ಲಿ ಪೇಠ ಅಮ್ಮಾಪುರ ಮಂಡಲ ಪಂಚಾಯಿತಿ ಸದಸ್ಯರಾಗುವುದರ ಮೂಲಕ ರಾಜಕೀಯ ಪಾದಾರ್ಪಣೆ ಮಾಡಿದ್ದರಲ್ಲದೆ, ಅದೇ ಅವಧಿಯಲ್ಲಿ ಮಂಡಲ ಪ್ರಧಾನರಾಗಿ ಸೇವೆ ಸಲ್ಲಿಸುವುದರ ಮೂಲಕ ಜನಾನುರಾಗಿಯಾಗಿದ್ದರು.

1994 ರಲ್ಲಿ ಪ್ರಥಮ ಬಾರಿಗೆ ವಿಧಾನಸಭೆಗೆ ಚುನಾಯಿತರಾಗಿದ್ದ ಇವರು 1999, 2013 ಮತ್ತು 2023 ರಲ್ಲಿ 16ನೇ ವಿಧಾನ ಸಭೆಗೆ ಆಯ್ಕೆಗೊಂಡು ಪ್ರಸ್ತುತ ಸದನದಲ್ಲಿ ಸದಸ್ಯರಾಗಿ ಸಕ್ರಿಯರಾಗಿದ್ದರು. ಇತ್ತೀಚಿಗೆ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದ ಇವರು ಎಲ್ಲಾ ಸಮುದಾಯದ ವಿಶ್ವಾಸಕ್ಕೆ ಪಾತ್ರರಾಗಿದ್ದರು.

ಸರಳ ಸಜ್ಜನಿಕೆಯ ನಾಯಕರಾಗಿದ್ದ ರಾಜಾ ವೆಂಕಟಪ್ಪ ನಾಯ್ಕ್ ಅವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ.

**ಆಧಾರ:**ವಿಜಯವಾಣಿ ದಿನಾಂಕ:26.02.2024

## 2. ವಾಸು, ಮಾಜಿ ಶಾಸಕರು




60ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಕಾರರ ಸಮಿತಿಯ ಹಾಗೂ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್‌ನ ಪ್ರೆಸಿಡಂಟ್ ಆಗಿ ಸೇವೆ ಸಲ್ಲಿಸಿದ್ದ ಶ್ರೀ ವಾಸು(71), ಮಾಜಿ ಶಾಸಕರು ಇವರು ದಿನಾಂಕ:10.03.2024 ರಂದು ಬಹು ಅಂಗಾಂಗ ವೈಫಲ್ಯದಿಂದ ಮೈಸೂರಿನಲ್ಲಿ ನಿಧನರಾದರು.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ವಾಸುರವರು ದಿನಾಂಕ:25.03.1953 ರಂದು ಮೈಸೂರಿನಲ್ಲಿ ಜನಿಸಿದ್ದು, ಎಂ.ಎ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. 1983ರಲ್ಲಿ ಮೈಸೂರು ಮಹಾನಗರಪಾಲಿಕೆ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಅವರು 1985ರಲ್ಲಿ ಮೈಸೂರು ನಗರ ಯುವ ಕಾಂಗ್ರೆಸ್ ಅಧ್ಯಕ್ಷ 1987 ರಿಂದ 1989ರವರೆಗೆ ನಗರಪಾಲಿಕೆ ಪ್ರತಿ ಪಕ್ಷ ನಾಯಕ 1990ರಲ್ಲಿ ಮೈಸೂರು ನಗರಪಾಲಿಕೆಯ ಮೇಯರ್ ಹಾಗೂ 1994ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಂ.ವೀರಪ್ಪ ಮೊಯ್ಲಿ ಅವರಿಗೆ ರಾಜಕೀಯ ಕಾರ್ಯದರ್ಶಿ ಆಗಿದ್ದರು. ಚಾಮರಾಜ ಕ್ಷೇತ್ರದಲ್ಲಿ 2013ರಲ್ಲಿ ಶಾಸಕರಾಗಿದ್ದ ವಾಸುರವರು ಜಯದೇವ ಹೃದ್ರೋಗ ಆಸ್ಪತ್ರೆ, ಮಹಿಳಾ ವಾಣಿಜ್ಯ ಕಾಲೇಜು ನಿರ್ಮಾಣಕ್ಕೆ ಶ್ರಮಿಸಿದ್ದರು.

**ಆಧಾರ**:ವಿಜಯ ಕರ್ನಾಟಕ ದಿನಾಂಕ:10.03.2024

## 3. ಟಿ.ಎಚ್.ಶಿವಶಂಕರಪ್ಪ, ಮಾಜಿ ಶಾಸಕರು




**'ಟಿಎಚ್ಎಸ್'** ಎಂದೇ ಕರೆಸಿಕೊಳ್ಳುತ್ತಿದ್ದ ಟಿ.ಎಚ್.ಶಿವಶಂಕರಪ್ಪ (61) ಅವರು ಭಾರತೀಯ ಕಾಂಗ್ರೆಸ್ ಪಕ್ಷದಿಂದ ರಾಜಕೀಯ ಜೀವನಕ್ಕೆ ಪ್ರವೇಶಿಸಿದ್ದ ಇವರು ದಿನಾಂಕ:10.03.2024 ರಂದು ಬೆಂಗಳೂರಿನಲ್ಲಿ ನಿಧನರಾಗಿರುತ್ತಾರೆ.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಟಿ.ಎಚ್.ಶಿವಶಂಕರಪ್ಪ ಅವರು ದಿನಾಂಕ:02.06.1963 ರಂದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಜನಿಸಿದ್ದು, ಬಿ.ಕಾಂ. ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. **'ಟಿಎಚ್ಎಸ್'** ಎಂದೇ ಖ್ಯಾತಿ ಪಡೆದಿದ್ದ ದಿವಂಗತರು ಸಮಾಜ ಸೇವೆ ಮಾಡಿ ಪ್ರಸಿದ್ಧಿಯಾಗಿದ್ದು, ಎರಡು ಬಾರಿ ಪುರಸಭೆ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ತರೀಕೆರೆ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಸ್ಪರ್ಧಿಸಿ 2004ರಲ್ಲಿ ನಡೆದ ಚುನಾವಣೆಯಲ್ಲಿ ತರೀಕೆರೆ ವಿಧಾನಸಭಾ ಕ್ಷೇತ್ರದಿಂದ 12ನೇ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಮಾಜಿ ಸಭಾಪತಿ ಬಿ.ಎಲ್.ಶಂಕರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು.

**ಆಧಾರ:** ವಿಜಯ ಕರ್ನಾಟಕ ದಿನಾಂಕ:11.03.2024

## 4. ನಾಗಮ್ಮ ಕೇಶವಮೂರ್ತಿ, ಮಾಜಿ ಸಚಿವರು



ಸಮಾಜ ಸೇವಕಿಯೆಂದು ಖ್ಯಾತಿ ಪಡೆದಿದ್ದ ಮಾಜಿ ಸಚಿವರು ಶ್ರೀಮತಿ ನಾಗಮ್ಮ ಕೇಶವಮೂರ್ತಿ(91) ಇವರು ದಿನಾಂಕ:16.03.2024ರಂದು ನಿಧನರಾದರು.

ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವೆಯಾಗಿದ್ದ ನಾಗಮ್ಮ ಕೇಶವಮೂರ್ತಿ ಅವರು ದಿನಾಂಕ:02.07.1934 ರಂದು ಬೆಂಗಳೂರಿನಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದು, ಮಕ್ಕಳ ಶಿಕ್ಷಣದಲ್ಲಿ ಡಿಪ್ಲೋಮಾ ಪಡೆದಿದ್ದರು. ವೃತ್ತಿಯಲ್ಲಿ ಸಮಾಜ ಸೇವಕಿಯಾಗಿದ್ದ ಅವರು ಸಮಾಜ ಕಲ್ಯಾಣ ಸಲಹಾ ಮಂಡಲಿ, ಸಣ್ಣ ಉಳಿತಾಯದ ಮೇಲಿನ ರಾಜ್ಯ ಸಲಹಾ ಸಮಿತಿ ಸೇರಿದಂತೆ ಅವರು ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. 1972ರಲ್ಲಿ ಪ್ರಥಮ ಬಾರಿಗೆ 5ನೇ ವಿಧಾನಸಭೆ ಪ್ರವೇಶಿಸಿದ್ದ ಅವರು 6 ಮತ್ತು 9ನೇ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. 1989 ರಿಂದ 1992ರವರೆಗೆ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವೆಯಾಗಿಯೂ ಸಹ ಕಾರ್ಯನಿರ್ವಹಿಸಿದ್ದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದ ದಿನಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದ ಅವರು, 1 ರಿಂದ 4ನೇ ತರಗತಿಯವರೆಗೂ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿ, ಗ್ರಾಮೀಣ ಭಾಗದಲ್ಲಿ ಪ್ರೌಢ ಶಾಲೆಗಳನ್ನು ರಚಿಸಲು ಶ್ರಮವಹಿಸಿದ್ದರು.

ತಮ್ಮ ಸಾಮಾಜಿಕ ಸೇವೆಯಲ್ಲಿ "ಮದರ್ ಥೆರೇಸಾ", ರಾಜಕಾರಣದಲ್ಲಿ "ದಾವಣಗೆರೆ ಇಂದಿರಾಗಾಂಧಿ" ಎಂದೇ ಖ್ಯಾತಿ ಪಡೆದಿದ್ದ ನಾಗಮ್ಮ ಕೇಶವಮೂರ್ತಿ ಅವರು ರಾಜಕಾರಣದಲ್ಲಿ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು.

**ಆಧಾರ:**ಸಂಯುಕ್ತ ಕರ್ನಾಟಕ ದಿನಾಂಕ:17.03.2024

## 5. ಸಿ.ಪಿ.ಮೂಡಲಗಿರಿಯಪ್ಪ, ಮಾಜಿ ಸಂಸದರು



ಮಾಜಿ ಸಂಸದರು, ಕಾಂಗ್ರೆಸ್ ಹಿರಿಯ ಮುಖಂಡ ಸಿ.ಪಿ.ಮೂಡಲಗಿರಿಯಪ್ಪ(84) ದಿನಾಂಕ: 23.03.2024 ರಂದು ಬೆಂಗಳೂರಿನಲ್ಲಿ ನಿಧನರಾದರು.

ಮಾಜಿ ಸಂಸದರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಸಿ.ಪಿ.ಮೂಡಲಗಿರಿಯಪ್ಪ ಅವರು ದಿನಾಂಕ:24.06.1937 ರಂದು ಶಿರಾ ತಾಲ್ಲೂಕಿನ ಚಿರತೆಹಳ್ಳಿಯಲ್ಲಿ ಜನಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಬಿ.ಎ. ಮತ್ತು ಎಲ್.ಎಲ್.ಬಿ ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಸಹಕಾರಿ ಕ್ಷೇತ್ರ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೀವ್ರ ಆಸಕ್ತಿಯುಳ್ಳವರಾಗಿದ್ದರು. ಅನೇಕ ಕಾನೂನು ಸಂಸ್ಥೆಗಳನ್ನು ಹಾಗೂ ಶಿಬಿರಗಳನ್ನು ನಡೆಸಿದ್ದರು. ಕಾಂಗ್ರೆಸ್‌ನಿಂದ ರಾಜಕೀಯ ಜೀವನ ಪ್ರಾರಂಭಿಸಿದ್ದ ಅವರು 1985ರಲ್ಲಿ ಮೊದಲ ಪ್ರಯತ್ನದಲ್ಲೇ ಶಿರಾ ವಿಧಾನಸಭಾ ಕ್ಷೇತ್ರದಿಂದ 8ನೇ ವಿಧಾನಸಭೆಗೆ ಆಯ್ಕೆಗೊಂಡಿದ್ದರು. ಸಂವಿಧಾನ ತಿದ್ದುಪಡಿ ಸಮಿತಿಯ ಮತ್ತು ದೂರವಾಣಿ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣದ ಕಡೆಗೆ ಮುಖ ಮಾಡಿದ್ದ ಸಿ.ಪಿ.ಮೂಡಲಗಿರಿಯಪ್ಪರವರು ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ 1989, 1991 ಮತ್ತು 1998ರಲ್ಲಿ ಜಯಗಳಿಸಿದ್ದರು.

**ಆಧಾರ:**ಸಂಯುಕ್ತ ಕರ್ನಾಟಕ ದಿನಾಂಕ:17.03.2024

# ಭಾಗ–8
# ಪ್ರಮುಖ ಲೇಖನಗಳು

# 1. Entire country is excited over Ram Mandir, Says PM

Prime Minster Narendra Modi, in the 108$^{th}$ edition of his monthly radio talk 'Mann Ki Baat' on Sunday, said there was excitement and enthusiasm in the entire country in connection with the Ram mandir in Ayodhya as he termed it a historic moment and urged people to share artistic creations in connection with this using a common hashtag.

The PM emphasised the special edition as 108 an auspicious number as per Hindu belief, as he mentioned the excitement surrounding the Ram temple and said, people are expressing their feelings in a multitude of ways " Citing feats that the country attained in 2023 including the passage of Nari Shakti Vandan Adhiniyam, India becoming the fifth largest economy and success at the G20 summit, the PM said today every corner of India was brimming with self confidence imbued with the spirit of a developed India; the spirit of self reliance.

There is excitement and enthusiasm in the entire country in connection with the Ram mandir in Ayodhya. People are expressing their feelings in a multitude of ways you must have noticed that during the last few days, many new songs and new bhajans have been composed on Shri Ram and Ayodhya, Many people are also writing new poems. There are many experienced artists init and new emerging young artists have also composed heart-warming bhajans, " Modi said, a day after launching various development projects, including the newly built airport and a renovated railway station. The PM is set to lead the consecration ceremony at the Ram temple in Ayodhya on January 22.

Modi said he had shared some songs and bhajans on his social media handles and it seemed the art world was becoming a participant in this historic moment in its unique style. One thing comes to my mind could we all share all such creations with a common hash tag? he asked and urged people to share creations on social media with the hash tag shri Ram Bhajan (#ShriRamBhajan). This compilation will turn into a flow of emotions and devotion in which everyone will be immersively imbued with the ethos of Ram. He said.

One the eve of the new year, Modi emphasized on hard work and said, whatever work we do whatever decision we make, our first criterion should be what will the country get from it, what benefit will it bring to the country.

Stating that every corner of India was brimming with self confidence, imbued with the spirit of a developed india, the spirit of self-reliancem the PM cited the record business on Diwali, which proved that every Indian was giving importance to the mantra of Vocal For Local. He said the country was imbued with the spirit of Viksit Bhart and self reliance and momentum had to be main trained in 2024 as well. During the broadcast, Isha Foundation fouy0nder Sadhaguru, Indian women's cricket captain Harmanpreet Kaur, chess legend Vishwanathan Anand and acvtor Akshy Kumar shared their fitness tips.

**Author:** Akhilesh Singh,
**Courtesy:** Indian Express, Dated:01.01.2024

## 2. ಮೈಸೂರಿನ ‘ ಬಾಲರಾಮ’ನಿಗೆ ಪಟ್ಟ?

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ದಿನಗಣನೆ ಶುರುವಾಗಿದ್ದು, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ನಿರ್ಮಿಸಿರುವ ಮೂರ್ತಿ ಆಯ್ಕೆಯಾಗಿದೆ ಎನ್ನಲಾಗುತ್ತಿದೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ‘ಎಕ್ಸ್’ನಲ್ಲಿ ಹರ್ಷ ಹಂಚಿಕೊಂಡಿರುವುದು ಹಾಗೂ ಶುಭಾಶಯ ಕೋರಿರುವುದು ಇದಕ್ಕೆ ಪುಷ್ಠಿ ನೀಡಿದೆ.

ಮೂವರು ಶಿಲ್ಪಿಗಳು ಸಿದ್ದಪಡಿಸಿರುವ ಮೂರ್ತಿಗಳಲ್ಲಿ ಒಂದು ಆಯ್ಕೆಯಾಗಿದೆ. ಆದರೆ, ಯಾವ ಮೂರ್ತಿ ಆಯ್ಕೆಯಾಗಿದೆ ಎಂಬ ವಿಷಯವಾಗಿ ರಾಮಮಂದಿರ ಟ್ರಸ್ಟ್‌ನಿಂದ ಇನ್ನೂ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ. ಅರುಣ್ ಸಿದ್ದಪಡಿಸಿದ ಮೂರ್ತಿಯೇ ಆಯ್ಕೆಯಾಗಿದೆ ಎಂಬ ಸುದ್ದಿ ಹರಡಿದ್ದು ಮೈಸೂರಿಗರಲ್ಲಿ ಸಂಭ್ರಮ ಮನೆ ಮಾಡಿದೆ.

ಐದು ವರ್ಷದ ಬಾಲಕನ ಪ್ರತಿರೂಪದಂತೆ ಮೂರ್ತಿ ಸಿದ್ಧಪಡಿಸಲು ಮೂವರು ಶಿಲ್ಪಿಗಳಿಗೆ ಸೂಚಿಸಲಾಗಿತ್ತು. ಮೈಸೂರಿನ ಅರುಣ್ ಯೋಗಿರಾಜ್, ಬೆಂಗಳೂರಿನ ಜಿ.ಎ.ಭಟ್ ಮತ್ತು ರಾಜಸ್ಥಾನದ ಸತ್ಯನಾರಾಯಣ ಪಾಂಡೆ ತಮ್ಮ ಕೌಶಲದಲ್ಲಿ ಅರಳಿದ ಮೂರ್ತಿಗಳನ್ನು ಒಪ್ಪಿಸಿದ್ದಾರೆ. ಇದರಲ್ಲಿ ಪ್ರಾಣ ಪ್ರತಿಷ್ಠಾಪನೆಗೆ ಆಯ್ಕೆ ಆಗಿರುವುದು ಯಾವುದೆಂಬುದು ಕುತೂಹಲ ಮೂಡಿಸಿದೆ.

ಮೂರ್ತಿ ನಿರ್ಮಾಣಕ್ಕಾಗಿ ಎಚ್.ಡಿ.ಕೋಟೆ ತಾಲ್ಲೂಕು ಕೃಷ್ಣ ಶಿಲೆಯನ್ನು ಅರುಣ್ ಬಳಸಿದ್ದಾರೆ. ಮೂರ್ತಿಗೆ ಅಂತಿಮ ರೂಪ ನೀಡಲು 6 ತಿಂಗಳು ತೆಗೆದುಕೊಂಡಿದ್ದಾರೆ. ಅದು 8 ಅಡಿ ಎತ್ತರ, ಮೂರೂವರೆ ಅಡಿ ಅಗಲ ಇದೆ. ಪಾದದಿಂದ ಹಣೆವರೆಗೆ 51 ಇಂಚು ಎತ್ತರ ಇದ್ದರೆ, ಅಲ್ಲಿಂದಾಚೆಗೆ ಪ್ರಭಾವಳಿಯ ಎತ್ತರ ಸೇರಿದೆ. ಬಿಲ್ಲು ಮತ್ತು ಬಾಣವನ್ನು ಹಿಡಿದಿರುವ ಐದು ವರ್ಷದ ಮಗುವಿನಂತೆ ಕಾಣುವ ಭಗವಾನ್ ರಾಮನ ಮೂರ್ತಿ ಇದಾಗಿದೆ.

ಕೇದಾರನಾಥದ ಶಂಕರಾಚಾರ್ಯರ ಪ್ರತಿಮೆ, ಸುಭಾಷ್‌ಚಂದ್ರಬೋಸರ ಪ್ರತಿಮೆಗಳನ್ನು ಅವರು ಮಾಡಿದ್ದರು. ಇದು ಪ್ರಧಾನಿ ಮಂತ್ರಿ ನರೇಂದ್ರ ಮೋದಿ ಅವರ ಗಮನಕ್ಕೆ ಬಂದಿತ್ತು. ಅವರು ಶಿಲ್ಪಿಯನ್ನು ಭೇಟಿಯಾಗಿ ಅಭಿನಂದನೆಯನ್ನೂ ಸಲ್ಲಿಸಿದ್ದರು.

ಅಯೋಧ್ಯೆಯ ರಾಮಲಲ್ಲಾ ಮೂರ್ತಿ ತಯಾರಿಕೆಗೆ ಪ್ರಸ್ತಾವ ಸಲ್ಲಿಕೆಗೆ ಸಿಕ್ಕಿದ್ದ ಅವಕಾಶವನ್ನು ಅರುಣ್ ಬಳಸಿಕೊಂಡಿದ್ದರು. ಅವರು ನೀಡಿದ್ದ ವಿವರಣೆ ಸಮಿತಿಗೆ ಇಷ್ಟವಾಗಿತ್ತು.

5 ವರ್ಷದ ಬಾಲಕನ ಶರೀರ ರಚನೆ, ದೇಹ ಸ್ವರೂಪ ಹಾಗೂ ರಾಮಚಂದ್ರನ ವರ್ಚಸ್ಸು ಹೊಂದಿದ ಮುಖವನ್ನು ಮನದುಂಬಿಕೊಂಡು ಕೆತ್ತನೆ ಶುರು ಮಾಡಿದ್ದೆ ತಿಳಿಸಿರುತ್ತಾರೆ.

ಪ್ರಾಣಪ್ರತಿಷ್ಠೆ ಕಾರ್ಯಕ್ರಮಕ್ಕೆ ಆಹ್ವಾನ ಪಡೆದ 2000 ಗಣ್ಯರ ಪೈಕಿ ಅರುಣ್ ಒಬ್ಬರಾಗಿದ್ದಾರೆ. ಅವರ ತಂದೆ ಯೋಗಿರಾಜ್ ಕೂಡ ಶಿಲ್ಪಿ. ಅಜ್ಜ ಬಸವಣ್ಣ ಶಿಲ್ಪಿ, ತಲೆಮಾರುಗಳಿಂದ ಶಿಲ್ಪ ಕೆತ್ತನೆ ಕಾರ್ಯದಲ್ಲಿ ಈ ಕುಟುಂಬ ತೊಡಗಿದೆ.

ಉತ್ತರಾಖಂಡದ ಕೇದಾರನಾಥದಲ್ಲಿ ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಿದ ಅದಿ ಶಂಕರಾಚಾರ್ಯರ ಪ್ರತಿಮೆ ಕೆತ್ತಿದ ನಂತರ ಅವರಿಗೆ ದೊಡ್ಡ ಹೆಸರು ದೊರೆಯಿತು.

ಮೈಸೂರಿನ ಬ್ರಹ್ಮಶ್ರೀ ಕಶ್ಯಪ ಶಿಲ್ಪಕಲಾ ನಿಕೇತನದ ಅರುಣ್, 14 ವರ್ಷಗಳಿಂದ ಶಿಲ್ಪ ಕೆತ್ತನೆ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅವರು ಶಿಲ್ಪ ಕಲಾಕೃತಿಯ 5ನೇ ತಲೆಮಾರಿನವರು ಅಪ್ಪ ಯೋಗಿರಾಜ್ ಕೊಡುತ್ತಿದ್ದ ಉಳಿಪೆಟ್ಟು ಬಾಲ್ಯದ ಅರುಣ್ ಅವರನ್ನು ಈ ವೃತ್ತಿಯತ್ತ ಆಕರ್ಷಿಸಿತು.

ಅಂಬೇಡ್ಕರ್, ರಾಮಕೃಷ್ಣ ಪರಮಹಂಸ, ವಿಶ್ವೇಶ್ವರಯ್ಯ, ಜಯಚಾಮರಾಜ ಒಡೆಯರ್, ಶಿವಕುಮಾರ ಸ್ವಾಮೀಜಿ, ಹನುಮಂತ ಸೇರಿದಂತೆ ಹಲವು ಪ್ರತಿಮೆ ನಿರ್ಮಿಸಿದ್ದಾರೆ.

ಓದಿದ್ದು ಎಂಬಿಎ ಆ ವಿದ್ಯಾರ್ಹತೆಯ ಆಧಾರದ ಮೇಲೆ ಖಾಸಗಿ ಕಂಪನಿಯಲ್ಲಿ ಕೆಲಸವೂ ಸಿಕ್ಕಿತು. ಆದರೆ, ಶಿಲ್ಪ ಕೆತ್ತನೆಯ ಸೆಳೆತಕ್ಕೆ ಮಾರು ಹೋದರು. ಕಲ್ಲಿಗೆ ಮೂರ್ತರೂಪ ಕೊಡುತ್ತಾ ಬದುಕು ಕಟ್ಟಿಕೊಂಡರು.

ಅಗ್ರಹಾರದ ಗನ್‌ಹೌಸ್ ಪಕ್ಕದಲ್ಲಿ ಅರುಣ್ ಅವರ ಮನೆಯ ಆವರಣದಲ್ಲಿರುವ 'ಕಾರ್ಯಾಗಾರ'ದಿಂದ ಸದಾ ಸದ್ದು ಬರುತ್ತಲೇ ಇರುತ್ತದೆ 38 ವರ್ಷದ ಅರುಣ್ ಕಲಾಕೃತಿ ಕ್ಲೇ ಮಾಡೆಲಿಂಗ್, ಚಿತ್ರಕಲೆಯಲ್ಲೂ ನಿಪುಣರು. ವಾಲಿಬಾಲ್ ಕ್ರೀಡೆಯಲ್ಲೂ ಮಿಂಚಿದ್ದಾರೆ. ಹಲವು ಪ್ರಶಸ್ತಿಗಳು ಅವರ ಮುಡಿಗೇರಿವೆ.

'ಶ್ರೀರಾಮ–ಹನುಮರ ಬಾಂಧವ್ಯಕ್ಕೆ ಕರುನಾಡ ನಂಟಿದೆ. ಇದೀಗ ರಾಮನೂರಿನ ಗುಡಿಯನ್ನು ಮೈಸೂರಿನ ಬಾಲರಾಮನು ಬೆಳಗುವನು ಎಂದು ವಿಜಯೇಂದ್ರ 'ಎಕ್ಸ್' ಮಾಡಿದ್ದಾರೆ.

'ಕರ್ನಾಟಕದ ಹೆಮ್ಮೆಯ ಶಿಲ್ಪಿ ಮೈಸೂರಿನ ಅರುಣ್ ಯೋಗಿರಾಜ್ ಅವರ ಕೆತ್ತನೆಯ ಶ್ರೀರಾಮನ ಮೂರ್ತಿ ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಲು ಆಯ್ಕೆಯಾಗಿದ್ದು, ಬಳಸಲಾದ ಕಲ್ಲು ಸಹ ನಮ್ಮ ಕರ್ನಾಟಕದ ಎಚ್.ಡಿ.ಕೋಟೆಯದ್ದು ಎಂಬುದು ಮತ್ತೊಂದು ವಿಶೇಷ' ಎಂದು ಆರ್.ಅಶೋಕ್ ಸಂತಸ ಹಂಚಿಕೊಂಡಿದ್ದಾರೆ.

**ಲೇಖಕರು**: ಎಂ.ಮಹೇಶ್,

ಆಧಾರ: ಪ್ರಜಾವಾಣಿ, ದಿನಾಂಕ:02.01.2024

## 3. ಅಣ್ಣನೇ ಕನ್ನಡದ ಸಾಂಸ್ಕೃತಿಕ ನಾಯಕ

ಜಗಜ್ಯೋತಿ ಬಸವಣ್ಣನವರನ್ನು ಕರ್ನಾಟಕ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸುವ ಮಹತ್ವದ ನಿರ್ಧಾರವನ್ನು ನಡೆದ ರಾಜ್ಯ ಸಚಿವ ಸಂಪುಟ ಸಭೆ ಕೈಗೊಂಡಿದೆ. ಈ ಮೂಲಕ ಕರ್ನಾಟಕದ ಪ್ರಥಮ ಸಾಂಸ್ಕೃತಿಕ ನಾಯಕರೆಂದು ಘೋಷಣೆಯಾದ ಶ್ರೇಯಕ್ಕೆ ಬಸವಣ್ಣ ಭಾಜನರಾಗಿದ್ದಾರೆ.

ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯನ್ನಾ ಘೋಷಿಸುವಂತೆ ನಾನಾ ಮಠಾಧಿಪತಿಗಳ ನಿಯೋಗ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿತ್ತು. ಹಾಗೆಯೇ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಸಚಿವರು, ಗಣ್ಯರು ಸಹ ಸಿಎಂಗೆ ವಿನಂತಿಸಿದ್ದರು. ಅದರಂತೆ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವದ ಬಗ್ಗೆ ಚರ್ಚೆಯಾಯಿತು. ಕರ್ನಾಟಕ ಸರಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977 ರ ಮೊದಲ ಅನುಸೂಚಿಯ ಪ್ರಕರಣ–1ರ ಪ್ರಕಾರ ಜಗಜ್ಯೋತಿ

ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯ ಬಳಿಕ ಈ ಬಗ್ಗೆ ಮಾಹಿತಿ ನೀಡಿದ ಸಚಿವ ಈಶ್ವರ ಖಂಡ್ರೆ, 12ನೇ ಶತಮಾನದಲ್ಲೇ ಬಸವಣ್ಣನವರು ಅನುಭವ ಮಂಟಪದ ಮೂಲಕ ವರ್ಗ, ವರ್ಣರಹಿತ ಸಮಾಜ ನಿರ್ಮಾಣಕ್ಕಾಗಿ ಪ್ರಯತ್ನಿಸಿದ್ದರು. ಆ ಹಿನ್ನೆಲೆಯಲ್ಲಿ ಅವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸುವಂತೆ ಎಲ್ಲ ಸಮುದಾಯದವರು ಹಾಗೂ ಮಠಾಧೀಶರ ಒತ್ತಾಯವಿತ್ತು. ಅದಕ್ಕೆ ಸರಕಾರ ಸ್ಪಂದಿಸಿದೆ ಎಂದಿ ಹೇಳಿದರು. ಸಮಾಜದಲ್ಲಿ ಸದ್ಯ ಕಲುಷಿತ ವಾತಾವರಣವಿದೆ ಜಾತಿ–ಧರ್ಮಗಳ ನಡುವೆ ಒಡೆದು ಆಳುವ ನೀತಿ ಅನುಸರಿಸಲಾಗುತ್ತಿದೆ. ಜಾತಿ ವೈಷಮ್ಯ ಹೆಚ್ಚಾಗುತ್ತಿದ್ದು, ಬಸವ ತತ್ವಗಳ ಪ್ರೇರಣೆ ನೀಡಬೇಕಿದೆ. ಪ್ರಜಾಪ್ರಭುತ್ವ ಸಂವಿಧಾನದ ಆಶಯಗಳಿಗೆ ಅನುರೂಪವಾದ ಅವರ ಚಿಂತನೆಗಳು, ಬಸವಣ್ಣನವರ ಸಾಂಸ್ಕೃತಿಕ ನಾಯಕತ್ವಕ್ಕೆ ಸಮರ್ಥನೀಯವಾದ ನೆಲೆ ಒದಗಿಸಿವೆ. ಆ ಹಿನ್ನೆಲೆಯಲ್ಲಿ ಈ ರೀತಿಯ ಘೋಷಣೆಗೆ ತೀರ್ಮಾನಿಸಲಾಗಿದೆ. ಬಸವ ತತ್ವಗಳ ಬಗ್ಗೆ ಪ್ರೇರಣೆ ನೀಡುವ ನಿಟ್ಟಿನಲ್ಲಿ ಪ್ರಚಾರ ಕಾರ್ಯ ನಡೆಯಲಿದೆ ಎಂದು ವಿವರಿಸಿದರು.

ಸುಮಾರು ರೂ. 650 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಾಣವಾಗುತ್ತಿದೆ. ಈವರೆಗೆ 200 ಕೋಟಿ ರೂ ವೆಚ್ಚವಾಗಿದ್ದು, ಈ ವರ್ಷ ರೂ. 100 ಕೋಟಿ ವೆಚ್ಚವಾಗಲಿದೆ. 2025ಕ್ಕೆ ಅನುಭವ ಮಂಟಪ ಲೋಕಾರ್ಪಣೆಯಾಗಲಿದೆ ಎಂದು ಹೇಳಿದರು.

**ಆಧಾರ:** ವಿಜಯಕರ್ನಾಟಕ, ದಿನಾಂಕ:19.01.2024

## 4. ವಜ್ರ ಮಹೋತ್ಸವ ಸಂಭ್ರಮದಲ್ಲಿ ಚುನಾವಣಾ ಆಯೋಗ

ವಿಶ್ವದ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರ ಭಾರತ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳಿಗೆ ವ್ಯಾಪಕ ಮಹತ್ವವಿದೆ. ನಮ್ಮ ಸಂವಿಧಾನವು ತನ್ನ 15ನೇ ಭಾಗದಲ್ಲಿಯ 324 ರಿಂದ 329ರವರೆಗಿನ ಆರು ವಿಧಿಗಳ ಮೂಲಕ ಕೊಡಮಾಡುವ ಅಧಿಕಾರದ ನೆಲೆಯಲ್ಲಿ ರಾಷ್ಟ್ರದ ಎಲ್ಲ ಚುನಾವಣೆಗಳನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕ ನೆಲೆಯಲ್ಲಿ ನಿರ್ವಹಿಸಲು ತನ್ಮೂಲಕ ಭಾರತದ ಮತದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವಲ್ಲಿ ರಚನೆಯಾಗಿರುವ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯೇ ಭಾರತದ ಚುನಾವಣಾ ಆಯೋಗ. ಅಖಿಲ ಭಾರತ ಮಟ್ಟದ ಸಂಸ್ಥೆಯಾಗಿರುವ ಇದನ್ನು ನ್ಯಾಯಸಮ್ಮತ ಮತ್ತು ನಿಷ್ಪಕ್ಷಪಾತ ಚುನಾವಣೆಗಳ ರಕ್ಷಕ ಎಂದು ಪರಿಗಣಿಸಲಾಗಿದೆ.

ಭಾರತೀಯ ಸಂವಿಧಾನವು ಅನುಷ್ಠಾನಗೊಂಡ ದಿನವಾದ 1950ರ ಜನವರಿ 26ರ ಮುನ್ನಾದಿನ ಅಂದರೆ 1950 ಜನವರಿ 25 ರಂದು ಅಸ್ತಿತ್ವಕ್ಕೆ ಬಂದ ಚುನಾವಣಾ ಆಯೋಗವು 74 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿದೆ. ಪ್ರಸ್ತುತ 75ನೇ ಸಂವತ್ಸರದಲ್ಲಿ ಪದಾರ್ಪಣೆ ಮಾಡಿದ್ದು, ವಜ್ರ ಮಹೋತ್ಸವದ ಸಂಭ್ರಮದಲ್ಲಿದೆ. ಭಾರತದ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆ, ಸಂಸತ್ತಿನ ಕೆಳಮನೆ (ಲೋಕಸಭೆ) ಮತ್ತು ಮೇಲ್ಮನೆ (ರಾಜ್ಯಸಭೆ) ಒಕ್ಕೂಟ ವ್ಯವಸ್ಥೆಯ ದೇಶದ ಎಲ್ಲ ರಾಜ್ಯಗಳ ವಿಧಾನ ಮಂಡಲದ ಕೆಳಮನೆ (ವಿಧಾನಸಭೆ) ಹಾಗೂ ಮೇಲ್ಮನೆ (ವಿಧಾನ ಪರಿಷತ್) ಚುನಾವಣೆಗಳು ಸೇರಿದಂತೆ ಎಲ್ಲ ಹಂತಗಳ ಚುನಾವಣೆಗಳ ಸಂಪೂರ್ಣ ಸಿದ್ಧತೆ, ನಿರ್ವಹಣೆ, ನಿಯಂತ್ರಣ ಮೇಲುಸ್ತುವಾರಿ ಹಾಗೂ

ಚುನಾವಣೆಗಳನ್ನು ನಿರ್ದೇಶಿಸುವ ಎಲ್ಲ ರೀತಿಯ ಶಾಶ್ವತ ಅಧಿಕಾರವನ್ನು ಚುನಾವಣಾ ಆಯೋಗವು ಹೊಂದಿದೆ.

ಸಂವಿಧಾನವು ತನ್ನ 324(2)ನೇ ವಿಧಿಯ ಮೂಲಕ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ನೇಮಕಗೊಳ್ಳುವ ಮುಖ್ಯ ಆಯುಕ್ತರೇ ಆಯೋಗದ ಮುಖ್ಯಸ್ಥರಾಗಿರುತ್ತಾರೆ. ಒಬ್ಬರೇ ಆಯುಕ್ತರನ್ನು ಹೊಂದಿದ್ದ ಆಯೋಗಕ್ಕೆ 1993ರಲ್ಲಿ ಬದಲಾವಣೆ ತರಲಾಗಿದ್ದು, ಮೂರು ಆಯುಕ್ತರ ಹುದ್ದೆಗಳನ್ನು ಸೃಜಿಸಲಾಯಿತು. ಪ್ರಸ್ತುತ ಒಬ್ಬರು ಮುಖ್ಯ ಚುನಾವಣಾ ಆಯುಕ್ತರು ಹಾಗೂ ಅವರ ಜೊತೆಗೆ ಇಬ್ಬರು ಹೆಚ್ಚುವರಿ ಚುನಾವಣಾ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದಾರೆ. ಮುಖ್ಯ ಚುನಾವಣಾ ಆಯುಕ್ತರು ಭಾರತದ ಚುನಾವಣಾ ಆಯೋಗದ ಅಧ್ಯಕ್ಷರೂ ಆಗಿರುತ್ತಾರೆ. ಆಯೋಗದ ಮೂರು ಜನ ಆಯುಕ್ತರಿಗೆ ಸಮಾನ ವೇತನ, ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ನವದೆಹಲಿಯ ಅಶೋಕ ರಸ್ತೆಯಲ್ಲಿರುವ ನಿರ್ವಾಚನ ಸದನದಲ್ಲಿರುವ ಚುನಾವಣಾ ಆಯೋಗದ ಪ್ರಧಾನ ಕಚೇರಿಯಲ್ಲಿ 300ಕ್ಕೂ ಅಧಿಕ ಸಿಬ್ಬಂದಿ ಕಾರ್ಯನಿರ್ವನಿರ್ವಹಿಸುತ್ತಿದ್ದಾರೆ. ಭಾರತದ ಚುನಾವಣಾ ಆಯೋಗವು ತನ್ನ ನಿಯಂತ್ರಣದಲ್ಲಿ ಪ್ರತೀ ರಾಜ್ಯದಲ್ಲಿಯೂ ಪ್ರತ್ಯೇಕ ರಾಜ್ಯ ಚುನಾವಣಾ ಆಯೋಗಗಳನ್ನು ರಚನೆ ಮಾಡಿದ್ದು, ತನ್ನ ವಿಶಿಷ್ಟ ಜಾಲಬಂಧದ ಅಡಿಯಲ್ಲಿ ಅವುಗಳನ್ನು ನಿರಂತರ ನಿಯಂತ್ರಿಸುತಿದೆ.

ನಮ್ಮ ಸಂವಿಧಾನವು ಚುನಾವಣಾ ಆಯೋಗಕ್ಕೆ ರಾಜಕೀಯ ಪಕ್ಷಗಳನ್ನು ರಾಜಕಾರಣದ ವಿಭಿನ್ನ ಸಂಸ್ಥೆಗಳನ್ನು ಹಾಗೂ ಅಭ್ಯರ್ಥಿಗಳನ್ನು ಮೇಲ್ವಿಚಾರಣೆ ಮಾಡುವ ಪರಮಾಧಿಕಾರವನ್ನು ನೀಡಿದೆ. ಎಲ್ಲ ಚುನಾವಣೆಗಳ ಸಂದರ್ಭಗಳಲ್ಲಿ ಮಾದರಿ ನೀತಿಸಂಹಿತೆಯ ನಿಯಮಗಳ ಉಲ್ಲಂಘನೆಯಾದರೆ ತಕ್ಷಣ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅಧಿಕಾರವನ್ನು ಹೊಂದಿದೆ. ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು, ಭಾರತದ ಸಮಸ್ತ ಮತದಾರರ ಪಟ್ಟಿಯನ್ನು ಕಾಲಕಾಲಕ್ಕೆ ನವೀಕರಿಸಿ ಅಧಿಕೃತಗೊಳಿಸುವ ಜವಾಬ್ದಾರಿ ಆಯೋಗದ ಮೇಲಿದೆ. 1988ರಲ್ಲಿ ಸಂವಿಧಾನದ 326ನೇ ವಿಧಿಯನ್ನು ತಿದ್ದುಪಡಿಮಾಡುವ ಮೂಲಕ ಭಾರತದ 18ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಗೆ ಪ್ರಾಪ್ತವಾಗಿರುವ ಮತಾಧಿಕಾರವನ್ನು ಖಚಿತಪಡಿಸುವ ಕೆಲಸವನ್ನು ಆಯೋಗ ಮಾಡುತ್ತಿದೆ. ಪ್ರತಿ ಚುನಾವಣೆಯಲ್ಲಿ ಯಾವುದೇ ಭಯ, ಒತ್ತಡವಿಲ್ಲದೆ ಮುಕ್ತವಾಗಿ ಮತ್ತು ಸ್ವತಂತ್ರವಾಗಿ ಮತಾಧಿಕಾರವನ್ನು ಚಲಾಯಿಸಲು ಪ್ರತಿಯೊಬ್ಬ ಮತದಾರನಿಗೂ ಚುನಾವಣಾ ಆಯೋಗ ಎಲ್ಲ ರೀತಿಯ ರಕ್ಷಣಾ ಸೌಲಭ್ಯ ಅವಕಾಶ ಕಲ್ಪಿಸುತ್ತದೆ.– ಲೇಖಕರು ಪತ್ರಕರ್ತರು

ಭಾರತೀಯ ಪೌರತ್ವವನ್ನು ಹೊಂದಿರುವ 18 ವರ್ಷ ಮೇಲ್ಪಟ್ಟ ಎಲ್ಲ ಯುವ ಮತದಾರರನ್ನು ಮತದಾನದತ್ತ ಆಕರ್ಷಿಸಲು ಕೇಂದ್ರ ಸರ್ಕಾರ 2011ರ ಜನವರಿ 20 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಿದಂತೆ ರಾಷ್ಟ್ರೀಯ ಮತದಾರರ ದಿನ ಆಚರಣೆಯ ಘೋಷಣೆ ಮಾಡಿತು. ಈ ಮೂಲಕ ಪ್ರತೀ ವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನ ಆಚರಿಸಲಾಗುತ್ತಿದೆ. 2011 ಜನವರಿ 25 ರಂದು ರಾಷ್ಟ್ರವ್ಯಾಪಿಯಾಗಿ ಮೊದಲ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ದೇಶದ ಎಲ್ಲ ಮತದಾರರ ಒಂದೊಂದು ಮತವೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಚನೆಯಲ್ಲಿ ನಿರ್ಣಾಯಕವಾಗಿರುತ್ತದೆ. ನಿಜವಾದ ಅರ್ಥದಲ್ಲಿ ಮತದಾರನೇ ಈ ಬೃಹತ್ ರಾಷ್ಟ್ರದ ಜವಾಬ್ದಾರಿ ಜೊತೆಗೆ ಎಲ್ಲದಕ್ಕೂ ಅವನೇ ವಾರಸುದಾರನೂ ಹೌದು. ಈ ನಿಟ್ಟಿನಲ್ಲಿ ನಮ್ಮ ಸಂವಿಧಾನ ಭಾರತೀಯ ಪ್ರಜೆಗಳಿಗೆ ಮತದಾನದ ಪರಮಾಧಿಕಾರವನ್ನು ನೀಡಿದೆ. ಈ ಪರಮಾಧಿಕಾರವು

ಎಲ್ಲಿಯೂ ದುರುಪಯೋಗವಾಗಬಾರದು ಎಂಬ ಚಿಂತನೆಯಿಂದ ಆಯೋಗವು ರಾಷ್ಟ್ರೀಯ ಮತದಾರರ ದಿನದ ಮೂಲಕ ಮತಾಧಿಕಾರದ ಮಹತ್ವವನ್ನು ದೇಶದುದ್ದಕ್ಕೂ ಸಾರಿ ಹೇಳುತ್ತದೆ. ಜೊತೆಗೆ ಎಲ್ಲ ಮಹಾಚುನಾವಣೆಗಳ ಸಂದರ್ಭದಕ್ಕೂ ಮತದಾನದ ವಿಧಾನ ಯಾವ ಆಮಿಷಗಳಿಗೂ ಬಲಿಯಾಗದೇ ಸ್ವಯಂಸ್ಪೂರ್ತಿಯಿಂದ ಮತಗಟ್ಟೆಗಳಿಗೆ ತೆರಳಿ ಕಡ್ಡಾಯವಾಗಿ ಮತಚಲಾಯಿಸಬೇಕೆಂಬ ಸಂಗತಿಗಳ ಬಗ್ಗೆ ಅರಿವು ಮೂಡಿಸುತ್ತದೆ. ಮತದಾರನ ಮತಾಧಿಕಾರವು ಗ್ರಾಮ ಪಂಚಾಯಿತಿಯಿಂದ ರಾಷ್ಟ್ರದ ಸಂಸತ್ತಿನವರೆಗೆ ನಡೆಯುವ ಎಲ್ಲ ಚುನಾವಣೆಗಳಲ್ಲಿ ಸತ್ಯ–ಶುದ್ಧ ಚಿಂತನೆಯ, ಜನಪರ ಮನೋಭೂಮಿಕೆಯ ಹಾಗೂ ಪಾರದರ್ಶಕ ವ್ಯಕ್ತಿತ್ವದ ಶ್ರೇಷ್ಠ ಪ್ರಜಾನಿಧಿಯನ್ನು ಆಯ್ಕೆ ಮಾಡಲು ಉಪಯೋಗವಾಗಬೇಕಾಗಿದೆ.

**ಲೇಖಕರು:**ಡಾ.ಗುರುಮೂರ್ತಿ ಯರಗಂಬಳಿ ಮಠ,

**ಆಧಾರ**:ವಿಜಯವಾಣಿ, ದಿನಾಂಕ:25.01.2024